24 September 2026 Thursday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

info.varthaman@gmail.com

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಸತ್ಯವನ್ನು ನೆನಪಿನಲ್ಲಿಟ್ಟು
ಕೊಳ್ಳುವುದು ಬೇಕಿಲ್ಲ ,ಆದರೆ
ಸುಳ್ಳನ್ನು ಸರಿಯಾಗಿ ಹೇಳಲು
ಪದೆ ಪದೇ ನೆನಪಿಸಿ
ಕೊಳ್ಳಬೇಕಾಗುತ್ತದೆ!
-ಸ್ನೇಹಾ ಆನಂದ್



ಪೌರಕಾರ್ಮಿಕರೇ ಸ್ವಚ್ಛ ಭಾರತದ ನೈಜ ರಾಯಭಾರಿಗಳು — ಪುಟ ಸಂ. 2



ಎಂಆರ್‌ಎನ್ ಸೌಹಾರ್ದ ಕ್ರೆಡಿಟ್ ಸಹಕಾರಿ ಸಂಘ ಉದ್ಘಾಟನೆ — ಪುಟ ಸಂ. 3



ಡಿಸಿಸಿ ಬ್ಯಾಂಕ್‌ಗೆ 5.70 ಕೋಟಿ ಲಾಭ — ಪುಟ ಸಂ. 4

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 279 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

# ರಾಜ್ಯಸರ್ಕಾರಕ್ಕೆ ಇಕ್ಕಟ್ಟಿನ ಸ್ಥಿತಿ ಸಿಡಿದೆದ್ದ ಸ್ವಪಕ್ಷೀಯ ಶಾಸಕರು

## ಬರಪೀಡಿತ ಪಟ್ಟಿಯಿಂದ ಇಂಡಿ ವಂಚಿತ: ಯಶವಂತರಾಯಗೌಡ ರಾಜೀನಾಮೆ

**ವಿಜಯಪುರ:** ಇಂಡಿ ತಾಲ್ಲೂಕನ್ನು ಬರಪೀಡಿತ ಎಂದು ಘೋಷಣೆ ಮಾಡದ ರಾಜ್ಯ ಸರ್ಕಾರದ ಕ್ರಮ ವಿರೋಧಿಸಿ ಆಡಳಿತ ಪಕ್ಷ ಕಾಂಗ್ರೆಸ್ ಶಾಸಕ ಯಶವಂತರಾಯಗೌಡ ವಿ.ಪಾಟೀಲ ಅವರು ಬುಧವಾರ ಸಭಾಧ್ಯಕ್ಷ ಜೆ.ಎಸ್.ಪಾಟೀಲ ಅವರಿಗೆ ರಾಜೀನಾಮೆ ಸಲ್ಲಿಸಿದ್ದಾರೆ.



ಇಂಡಿ ತಾಲ್ಲೂಕು ತೀವ್ರ ಬರಗಾಲಕ್ಕೆ ತುತ್ತಾಗಿದೆ. ಸಕಾಲಕ್ಕೆ ಮಳೆಯಾಗದ ಕಾರಣ ಬೆಳೆಗಳು ಒಣಗಿ ಹೋಗಿವೆ. ಜನ-ಜಾನುವಾರುಗಳಿಗೆ ಕುಡಿಯುವ ನೀರಿನ ತೊಂದರೆ ಆಗಿದೆ. ಈ ಬಗ್ಗೆ ಮುಖ್ಯಮಂತ್ರಿ, ಉಪಮುಖ್ಯಮಂತ್ರಿಗೆ ಆಗಸ್ಟ್ 28ರಂದು ಮನವಿ ಸಲ್ಲಿಸಿ, ಬರಪೀಡಿತ ತಾಲ್ಲೂಕು ಎಂದು ಘೋಷಿಸುವಂತೆ ಕೋರಿದ್ದೇನೆ ಎಂದು ತಿಳಿಸಿದ್ದಾರೆ.

ವಿಜಯಪುರ ಜಿಲ್ಲೆಯ ಒಟ್ಟು 13 ತಾಲ್ಲೂಕುಗಳ ಪೈಕಿ ನನ್ನ ಇಂಡಿ ಮತ್ತು ಚಡಚಣ ಈ ಎರಡು ತಾಲ್ಲೂಕುಗಳನ್ನು ಹೊರತುಪಡಿಸಿ, ಇದುವರೆಗೂ ರಾಜ್ಯದ 188 ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಿಸಲಾಗಿದೆ. ನಾನು ಆಡಳಿತ ಪಕ್ಷದ ಶಾಸಕನಾಗಿರುವುದರಿಂದ ಸರ್ಕಾರಕ್ಕೆ ಮುಜುಗರ ಆಗಬಾರದೆಂದು ಹಲವಾರು ಬಾರಿ ಮನವಿ ಮಾಡಿಕೊಂಡಿದ್ದೇನೆ. ಆದರೂ ನಮ್ಮ ಮನವಿಗೆ, ನಮ್ಮ ಭಾವನೆಗಳಿಗೆ ಸರ್ಕಾರ ಬೆಲೆ ನೀಡಿಲ್ಲ. ಈಗಿನ ರಾಜಕೀಯ ವಾತಾವರಣದಲ್ಲಿ ಬಲಾಢ್ಯ ರಿಗೆ, ಒತ್ತಡ ತಂತ್ರಗಳನ್ನು ಹೆಣೆಯುವವರಿಗೆ ಮನ್ನಣೆ ನೀಡಲಾಗುತ್ತಿದೆ. ನಮ್ಮಂತಹ ಸೌಮ್ಯ ಸ್ವಭಾವದವರಿಗೆ ಯಾವುದೇ ಕೆಲಸಗಳಿಗೆ ಮನ್ನಣೆ ದೊರೆಯುತ್ತಿಲ್ಲ ಎಂದು ಯಶವಂತರಾಯಗೌಡ ಬೇಸರ ವ್ಯಕ್ತಪಡಿಸಿದ್ದಾರೆ.

ನನ್ನ ಕ್ಷೇತ್ರದ ಜನರ ಆಕ್ರೋಶಕ್ಕೆ ಸ್ಪಂದಿಸಲು ಸಾಧ್ಯವಾಗದ ಪ್ರಯುಕ್ತ ನಾನು ಸ್ವಇಚ್ಛೆಯಿಂದ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡುತ್ತಿದ್ದೇನೆ ಎಂದು ರಾಜೀನಾಮೆ ಪತ್ರದಲ್ಲಿ ತಿಳಿಸಿದ್ದಾರೆ.

### 2ನೇ ಬಾರಿ ರಾಜೀನಾಮೆ

**ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಚಿವ ಸಂಪುಟದಲ್ಲಿ ಅವಕಾಶ ನೀಡದ ಹಿನ್ನೆಲೆಯಲ್ಲಿ ಬೇಸತ್ತು ಮೂರು ತಿಂಗಳ ಹಿಂದೆಯೂ ಕೈ ಶಾಸಕ ಯಶವಂತರಾಯಗೌಡ ರಾಜೀನಾಮೆ ಸಲ್ಲಿಸಿದ್ದರು. ಪಕ್ಷದ ವರಿಷ್ಠರ ಮನವೊಲಿಕೆ ಬಳಿಕ ರಾಜೀನಾಮೆ ಹಿಂಪಡೆದಿದ್ದರು. ಈಗ ಬರ ಘೋಷಣೆ ತಾರತಮ್ಯ ವಿರೋಧಿಸಿ ರಾಜೀನಾಮೆ ನೀಡಿದ್ದಾರೆ.**

## ರೈತರಿಗಾಗಿ ರಾಜೀನಾಮೆ ನಿರ್ಧಾರ: ಸಿಎಂ ಡಿ.ಕೆ.ಶಿವಕುಮಾರ್ ಸ್ಪಷ್ಟನೆ

**ಬೆಂಗಳೂರು:** ಯಶವಂತರಾಯ ಗೌಡ ಪಾಟೀಲ್ ರಾಜೀನಾಮೆ ರೈತರಿಗಾಗಿ ತೆಗೆದುಕೊಂಡ ನಿರ್ಧಾರ. ಅವರನ್ನು ಸಮಾಧಾನಪಡಿಸಿದ್ದೇನೆ ಎಂದು ಸಿಎಂ ಡಿ.ಕೆ ಶಿವಕುಮಾರ್ ಸ್ಪಷ್ಟಪಡಿಸಿದರು.

ವಿಧಾನಸಭೆಯಲ್ಲಿ ಬುಧವಾರ ಮಾತನಾಡಿದ ಅವರು, ಯಶವಂತರಾಯ ಗೌಡ ಪಾಟೀಲ್ ಮಾತಾಡಿದ್ದಾರೆ. ಸಮಾಧಾನ ಮಾಡಿ ಕಳಿಸಿದ್ದೇನೆ. ಇದು ಬಿಜೆಪಿಯ ಈಶ್ವರಪ್ಪ ಥರದ ರಾಜೀನಾಮೆ ಅಲ್ಲ. ರೈತರಿಗಾಗಿ, ಜನರಿಗಾಗಿ ತೆಗೆದುಕೊಂಡ ನಿರ್ಣಯ. ನಾನು 224 ಶಾಸಕರಿಗೂ ತಾಳ್ಮೆಯಿಂದ ಇರಿ ಎಂದು ತಿಳಿಸಿದ್ದೇನೆ ಎಂದು ಸಮಜಾಯಿಸಿ ನೀಡಿದರು.



ಭೀಕರ ಬರಗಾಲ ಇದೆ. ನಾನು ರಾಜ್ಯ ಪ್ರವಾಸ ಮಾಡಿದ್ದೇನೆ. ಇಂಡಿ ಶಾಸಕರು ನನ್ನ ಕಚೇರಿಗೆ ಸಂಪರ್ಕ ಮಾಡುವ ಪ್ರಯತ್ನ ಮಾಡಿದ್ದರು. ನಾನು ಎಲ್ಲೋ ಹೋಗಿದ್ದೆ, ಆಮೇಲೆ ಗೊತ್ತಾಗಿ ಅವರ ಜೊತೆ ಮಾತಾಡಿದ್ದೇನೆ ಎಂದು ತಿಳಿಸಿದರು.

ಬರದಿಂದ ಜನರು, ರೈತರು ಸಮಸ್ಯೆಯಲ್ಲಿದ್ದಾರೆ. ಬರ ಘೋಷಣೆ ಮಾಡಲು ಪ್ಯಾರಾಮೀಟರ್ ಇವೆ. ಶಾಸಕರು ಬಂದು ಬೇಡಿಕೆ ಇಟ್ಟರು ಅಂದ ತಕ್ಷಣ ಬರ ಘೋಷಣೆ ಮಾಡಲಿಕ್ಕಾಗಲ್ಲ. ಮಾನದಂಡದ ಪ್ರಕಾರವೇ ಘೋಷಣೆ ಮಾಡಬೇಕು. ಈ ಬಗ್ಗೆ ಪರಮೇಶ್ವರ್ ಜೊತೆಗೂ ಚರ್ಚೆ ಮಾಡಿದ್ದೇನೆ. ಎಚ್.ಕೆ ಪಾಟೀಲ್ ಅವರಂತಹ ಹಿರಿಯ ನಾಯಕರ ಮೇಲೇನೇ ಅಷ್ಟೊಂದು ಒತ್ತಡ ಇದೆ. ಯಶವಂತ ರಾಯ ಪುಟ 2ಕ್ಕೆ



## ಸರ್ಕಾರ ದಿವಾಳಿ: ಬಿಜೆಪಿ ಪ್ರತಿಭಟನೆ

**ಬೆಂಗಳೂರು:** ರಾಜ್ಯದ ಆರ್ಥಿಕ ಸ್ಥಿತಿ ಸಂಕಷ್ಟದತ್ತ ಸಾಗುತ್ತಿದೆ ಹಾಗೂ ಅಭಿವೃದ್ಧಿ ಕಾರ್ಯಗಳಿಗೆ ಹಿನ್ನಡೆಯಾಗಿದೆ ಎಂದು ಆರೋಪಿಸಿ ರಾಜ್ಯದ ಬಿಜೆಪಿ ನಾಯಕರು ವಿಧಾನಸೌಧದ ಆವರಣದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು.

ರಾಜ್ಯದಲ್ಲಿ ಸದ್ಯದ ಸೀಮಿತ ಆರ್ಥಿಕ ಅವಕಾಶವನ್ನು ಗಮನದಲ್ಲಿಟ್ಟುಕೊಂಡು ಪ್ರಮುಖ ವೆಚ್ಚದ ಯೋಜನೆಗಳನ್ನು ಕೈಗೆತ್ತಿಕೊಳ್ಳುವಾಗ ಎಚ್ಚರಿಕೆ ವಹಿಸಬೇಕು ಎಂದು ಹಣಕಾಸು ಇಲಾಖೆ ರಾಜ್ಯ ಸರ್ಕಾರಕ್ಕೆ ಸೂಚಿಸಿರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ದಿವಾಳಿ ಆಗಿದೆ ಎಂದು ಆರೋಪಿಸಿ ಪ್ರತಿಭಟನೆ ನಡೆಸಿದರು.

> **ರಾಜ್ಯದಲ್ಲಿ ಆರ್ಥಿಕ ದುಸ್ಥಿತಿ: ಅಭಿವೃದ್ಧಿ ಕುಂಠಿತ ಆರೋಪ**

ರಾಜ್ಯದ ಆರ್ಥಿಕ ಮಿತಿಗಳ ನಡುವೆಯೂ ಕಾಂಗ್ರೆಸ್ ಸರ್ಕಾರ ಸುಳ್ಳು ಭರವಸೆಗಳನ್ನು ನೀಡುತ್ತಿದೆ ಹಾಗೂ ಕರ್ನಾಟಕದಲ್ಲಿ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿವೆ. ಹಣಕಾಸು ಇಲಾಖೆ ಅಭಿಪ್ರಾಯಗಳು ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಬಹಿರಂಗಪಡಿಸಿವೆ ಎಂದು ಬಿಜೆಪಿ ನಾಯಕರು ಆರೋಪಿಸಿದರು.

ವಿಧಾನಸೌಧದ ಕೆಂಗಲ್ ಹನುಮಂತಯ್ಯ ಪ್ರತಿಮೆ ಬಳಿ ಬಿಜೆಪಿ ಪ್ರತಿಭಟನೆ ನಡೆಸಿತು. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ್ ಹಾಗೂ ವಿಧಾನ ಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣ ಸ್ವಾಮಿ ನೇತೃತ್ವ ವಹಿಸಿದ್ದರು.

ಮುಖ್ಯಮಂತ್ರಿಗಳ ಗ್ರಾಮೀಣ ರಸ್ತೆ ಸಂಪರ್ಕ ಯೋಜನೆಗೆ ಸಂಬಂಧಿಸಿದ ಪ್ರಸ್ತಾವನೆಯನ್ನು ಪರಿಶೀಲಿಸುವ ವೇಳೆ ಹಣಕಾಸು ಇಲಾಖೆ ಮಂಗಳವಾರ ಈ ಎಚ್ಚರಿಕೆ ನೀಡಿತ್ತು. ಸುಮಾರು ರೂ.10,000 ಕೋಟಿ ವೆಚ್ಚದ ಈ ಯೋಜನೆಯನ್ನು 2026–27 ಮತ್ತು 2027–28ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲು ಪ್ರಸ್ತಾಪಿಸಲಾಗಿತ್ತು.

## ಶ್ರೀರಂಗಪಟ್ಟಣ ದಸರಾ: ಕಾವೇರಿ ಆರತಿಗೆ ಸೂಚನೆ

**ಬೆಂಗಳೂರು:** ಶ್ರೀರಂಗಪಟ್ಟಣ ದಸರಾದ ಅಂಗವಾಗಿ ಅಕ್ಟೋಬರ್ 11ರಿಂದ ಆರು ದಿನ ಕಾವೇರಿ ಆರತಿ ಆಯೋಜಿಸಲಾಗಿದೆ. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಉದ್ಘಾಟಿಸುವರು ಎಂದು ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ವಿಕಾಸಸೌಧದಲ್ಲಿ ಬುಧವಾರ ನಡೆದ ಶ್ರೀರಂಗಪಟ್ಟಣ ದಸರಾ ಸಭೆಯಲ್ಲಿ ಮಾತನಾಡಿದ ಅವರು, ಕಾವೇರಿ ಆರತಿಯನ್ನು ತುರ್ತಾಗಿ ಆಯೋಜಿಸುತ್ತಿರುವ ಹಿನ್ನೆಲೆಯಲ್ಲಿ ಯಾವುದೇ ಸಮಸ್ಯೆಗಳು ಎದುರಾಗಬಾರದು. ಕಳೆದ ಬಾರಿ ಕಾವೇರಿ ಆರತಿ ಆಯೋಜನೆಯಲ್ಲಿ ತೊಡಗಿಸಿಕೊಂಡಿದ್ದ ಅಧಿಕಾರಿಗಳು ಹಾಗೂ ಸಿಬ್ಬಂದಿಯನ್ನೇ ಬಳಸಿಕೊಂಡು ಸಂಪ್ರದಾಯಬದ್ಧವಾಗಿ ಕಾರ್ಯಕ್ರಮ ನಡೆಸಬೇಕು ಎಂದು ತಿಳಿಸಿದರು.

ರಾಜ್ಯದಲ್ಲಿ ಬರ ಹಾಗೂ ತಮಿಳುನಾಡು ನೀರು ಹಂಚಿಕೆ ವಿವಾದಗಳಿದ್ದರೂ, ನಾಡಿನ ಸಂಸ್ಕೃತಿಯನ್ನು ಎತ್ತಿಹಿಡಿಯುವ ನಿಟ್ಟಿನಲ್ಲಿ ಅರ್ಥಪೂರ್ಣವಾಗಿ ಕಾರ್ಯಕ್ರಮ ನಡೆಯಲಿದೆ. ಕಳೆದ ಬಾರಿಯ ಕಾವೇರಿ ಆರತಿಯ ಮೇಲ್ವಿಚಾರಣೆ ವಹಿಸಿದ್ದ ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕ ರಾಮಪ್ರಸಾತ್ ಮನೋಹರ್ ಅವರೊಂದಿಗೆ ವಿಡಿಯೋ ಕಾಲ್ ಮೂಲಕ ಸಮಾಲೋಚನೆ ನಡೆಸಿದ ಸಚಿವರು, ಈ ವರ್ಷವೂ ಜಿಲ್ಲಾಧಿಕಾರಿಗಳೊಂದಿಗೆ ಚರ್ಚಿಸಿ ಆರು ದಿನಗಳ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ರೂಪಿಸುವಂತೆ ಸೂಚಿಸಿದರು.

ಸಭೆಯಲ್ಲಿ ಕಾವೇರಿ ಪ್ರತಿಮೆ ನಿರ್ಮಾಣ, ಪೂಜಾ ವಿಧಿವಿಧಾನಗಳು, ವಾರಣಾಸಿಯ ಅರ್ಚಕರ ತಂಡದ ವಾಸ್ತವ್ಯ ಮೊದಲಾದ ವಿವರಗಳನ್ನು ಪರಿಶೀಲಿಸಲಾಯಿತು.



## ಸಿಎಂ ಡಿಕೆಶಿಗೆ ಶಾಸನದ ಗಂಧಗಾಳಿಯೇ ಗೊತ್ತಿಲ್ಲ

### ಕೆಪಿಎಸ್‌ಸಿ ಬಂದ್ ಹೇಳಿಕೆ ಬುದ್ಧಿಗೇಡಿತನದ ಪರಮಾವಧಿ: ಎಚ್.ಡಿ.ಕುಮಾರಸ್ವಾಮಿ ವಾಗ್ದಾಳಿ

**ನವದೆಹಲಿ:** ಕೆಪಿಎಸ್‌ಸಿ ಮುಚ್ಚುವುದಾಗಿ ಹೇಳಿರುವ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಶಾಸನದ ಗಂಧಗಾಳಿಯೇ ಗೊತ್ತಿಲ್ಲ ಎಂದು ವಾಗ್ದಾಳಿ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ವಾಗ್ದಾಳಿ ನಡೆಸಿದರು.

ಭ್ರಷ್ಟಾಚಾರದ ಆರೋಪ ಹೊತ್ತಿರುವ ಕೆಪಿಎಸ್‌ಸಿಯನ್ನು ಮುಚ್ಚಲು ಕಾನೂನು ತಜ್ಞರ ಜತೆ ಚರ್ಚೆ ನಡೆಸುವುದಾಗಿ ಮುಖ್ಯಮಂತ್ರಿ ಮಾತನಾಡಿರುವ ಬಗ್ಗೆ ಮಾಧ್ಯಮ ಹೇಳಿಕೆ ಬಿಡುಗಡೆ ಮಾಡಿರುವ ಅವರು, ಕರ್ನಾಟಕ ಲೋಕಸೇವಾ ಆಯೋಗವನ್ನು ಶಾಸನಬದ್ಧವಾಗಿ ಮುಚ್ಚುತ್ತೇವೆ ಎನ್ನುವ ಮುಖ್ಯಮಂತ್ರಿ ಹೇಳಿಕೆ ಕೇವಲ ಹತಾಶೆಯಿಂದಷ್ಟೇ ಕೂಡಿಲ್ಲ, ಅದು ಬುದ್ಧಿಗೇಡಿತನ, ಹೊಣೆಗೇಡಿತನ ಮತ್ತು ಅಜ್ಞಾನದ ಪರಮಾವಧಿ ಎಂದು ಹರಿಹಾಯ್ದಿದ್ದಾರೆ.

ಕೆಪಿಎಸ್‌ಸಿ ಸಂಸ್ಥೆ ಚೆನ್ನಾಗಿಯೇ ಇದೆ. ಕೆಟ್ಟ ಜನ ಬಂದು ಕೂತಿದ್ದಾರಷ್ಟೇ. ಬೇಲಿಯೇ ಹೊಲ ಮೇಯುತ್ತಿದೆ. ಅಲ್ಲಿಗೆ ಖದೀಮರನ್ನು ನೇಮಕ ಮಾಡಿದ್ದು ಯಾರು? ವಸೂಲಿಗೆ ಅಂಗಡಿ ತೆರೆಯಲು ಅವಕಾಶ



ಕೊಟ್ಟಿದ್ದು ಯಾರು? ವಿಧಾನಸೌಧದ 3ನೇ ಮಹಡಿಯಲ್ಲಿ ಕೂತವರೇ ಎಸಗಿದ ಪಾಪವಲ್ಲವೇ ಇದು? ಆ ಲೆಕ್ಕಕ್ಕೆ ಬಂದರೆ ವಿಧಾನ ಸೌಧವನ್ನೇ ಮುಚ್ಚಬೇಕು. ನಿಮ್ಮ ಸಾರಥ್ಯದಲ್ಲಿ ಅದೂ ನಡೆದುಹೋಗಲಿ ಎಂದು ತಿರುಗೇಟು ನೀಡಿದ್ದಾರೆ.

ಇವರ ವರಸೆ ಹೇಗಿದೆ ಎಂದರೆ 'ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ ಹಾಕಿದಂತೆ, ನೆಗಡಿ ಬಂದರೆ ಮೂಗಿಗೇ ಕತ್ತರಿ ಹಾಕಿದಂತೆ ಎಂದು ಲೇವಡಿ ಮಾಡಿದ್ದಾರೆ.

ಬೇಜವಾಬ್ದಾರಿಯಿಂದ ಚಪಲಕ್ಕೆ ನಾಲಿಗೆ ಜಾರುವ ಮೊದಲು ಕೆಪಿಎಸ್‌ಸಿ ಎಂದರೆ ಏನು? ಅದರ ಸಂರಚನೆ, ಸ್ವರೂಪ ಹೇಗಿರುತ್ತದೆ? ಸಾಂವಿಧಾನಿಕವಾಗಿ

## ವಿಧಾನಸಭೆಯಲ್ಲಿಯೇ ಕೈ ಶಾಸಕರ ಜಟಾಪಟಿ

**ಬೆಂಗಳೂರು:** ವಿಧಾನಸಭಾಧ್ಯಕ್ಷ ಜಿ.ಎಸ್.ಪಾಟೀಲ ಅವರಿಗೆ ಕಾಂಗ್ರೆಸ್ ಶಾಸಕ ಯಶವಂತರಾಯ ಗೌಡ ಪಾಟೀಲ ರಾಜೀನಾಮೆ ಪತ್ರ ನೀಡಿರುವ ಕುರಿತ ಗದ್ದಲ ವಿಧಾನಸಭೆಯಲ್ಲಿ ನಡೆಯುತ್ತಿದ್ದ ಮಧ್ಯೆಯೇ, ಕೋಲಾರ ಜಿಲ್ಲೆಯ ಕಾಂಗ್ರೆಸ್ ಶಾಸಕರು ನಡುವೆ ಪುಟ 2ಕ್ಕೆ



## 3 ದಿನ ಬ್ಯಾಂಕ್ ಮುಷ್ಕರ: 27ರಂದು ಕಾರ್ಯನಿರ್ವಹಣೆ

**ನವದೆಹಲಿ:** ರಾಷ್ಟ್ರವ್ಯಾಪಿ ಸೆ.28ರಿಂದ 30ರವರೆಗೆ ಮೂರು ದಿನ ಬ್ಯಾಂಕ್ ಮುಷ್ಕರಕ್ಕೆ ಕರೆ ನೀಡಿರುವ ಹಿನ್ನೆಲೆಯಲ್ಲಿ ಸೆ.27ರಂದು ಭಾನುವಾರ ಬ್ಯಾಂಕ್‌ಗಳು ಕಾರ್ಯನಿರ್ವಹಿಸಲಿವೆ.




ಯುನೈಟೆಡ್ ಫೋರಂ ಆಫ್ ಬ್ಯಾಂಕ್ ಯೂನಿಯನ್ಸ್ ಸೆ.28ರಿಂದ 30ರ ವರೆಗೆ ರಾಷ್ಟ್ರವ್ಯಾಪಿ ಬ್ಯಾಂಕ್ ಮುಷ್ಕರಕ್ಕೆ ಕರೆನೀಡಿವೆ. ಸೆ.26 ಹಾಗೂ 27ರ ವಾರಾಂತ್ಯದ ರಜಾ ದಿನ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಈ ನಿರ್ಧಾರ ಕೈಗೊಂಡಿದೆ.

ಸಾರ್ವಜನಿಕರ ಅಗತ್ಯ ಬ್ಯಾಂಕಿಂಗ್ ಸೇವೆಗಳಿಗೆ ದೀರ್ಘಕಾಲದವರೆಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳಲು ಎಲ್ಲಾ ಸಾರ್ವಜನಿಕ ವಲಯದ ಬ್ಯಾಂಕ್‌ಗಳು ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳು ಸೆ. 27ರಂದು ಕಾರ್ಯನಿರ್ವಹಿಸಲಿವೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

## ಸದನದಲ್ಲಿ ಅನಂತ್‌ಗೆ ಅಭಿನಂದನೆ

### ಕೈ ಶಾಸಕರ ಗೈರು ಹಾಜರಿಗೆ ಆರ್.ಅಶೋಕ್ ಅಸಮಾಧಾನ

**ಬೆಂಗಳೂರು:** ದಾದಾಸಾಹೇಬ್ ಪಾಲ್ಕೆ ಪ್ರಶಸ್ತಿ ಪುರಸ್ಕೃತ ನಟ ಅನಂತನಾಗ್ ಅವರಿಗೆ ಅಭಿನಂದನೆ ಸಲ್ಲಿಸುವ ವೇಳೆ ವಿಧಾನ ಸಭೆಯಲ್ಲಿ ಆಡಳಿತ ಪಕ್ಷದ ಸದಸ್ಯರ ಗೈರು ಹಾಜರಿ ವಿರೋಧ ಪಕ್ಷ ಬಿಜೆಪಿ ಸದಸ್ಯರನ್ನು ಕೆರಳಿಸಿತು.



ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಈ ಕುರಿತು ಅಸಮಾಧಾನ ಹೊರಹಾಕಿ, ಶ್ರೇಷ್ಠ ಕಲಾವಿದನಿಗೆ ಈ ರೀತಿ ಅಗೌರವ ತೋರುವುದು ಎಷ್ಟು ಸರಿ? ಮುಖ್ಯಮಂತ್ರಿಗಳಾದರೂ ಸಭೆಯಲ್ಲಿ ಉಪಸ್ಥಿತರಿರಬಹುದಿತ್ತು ಎಂದರು.

ಮಧ್ಯ ಪ್ರವೇಶಿಸಿದ ಸಚಿವ ಕೃಷ್ಣ ಭೈರೆಗೌಡ, ಅಭಿನಂದನೆ ಪ್ರಸ್ತಾವ ಆರಂಭವಾಗಲಿ, ಆ ಹೊತ್ತಿಗೆ ಎಲ್ಲ ಸದಸ್ಯರು ಬರುತ್ತಾರೆ, ಸರ್ಕಾರದ ಪರವಾಗಿ ನಾನು ಪುಟ 2ಕ್ಕೆ

## ಸಿಇಸಿ ಜ್ಞಾನೇಶ್ ವಜಾಕ್ಕೆ ಸಿದ್ದರಾಮಯ್ಯ ಆಗ್ರಹ

**ಬೆಂಗಳೂರು:** ಚುನಾವಣಾ ಆಯೋಗದೊಳಗಿನಿಂದ ಹೊರಬರುತ್ತಿರುವ ಬೆಳವಣಿಗೆಗಳು ದೇಶದ ಪ್ರತಿಯೊಬ್ಬ ಪ್ರಜಾಪ್ರಭುತ್ವವಾದಿಯನ್ನೂ ಆತಂಕಕ್ಕೀಡು ಮಾಡುವಂತಿದೆ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಆಯೋಗದ ಮೂವರು ಸದಸ್ಯರಲ್ಲಿ ಇಬ್ಬರು ಆಯುಕ್ತರು ಕಳೆದ 10 ತಿಂಗಳಲ್ಲಿ ಕನಿಷ್ಠ 14 ಬಾರಿ ಆಯೋಗದ ನಡೆಯ ವಿರುದ್ಧ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಇದು ಭಾರತದ ಭವಿಷ್ಯ ಮತ್ತು ಪ್ರಜಾಪ್ರಭುತ್ವದ ಅಳಿವು–ಉಳಿವಿನ ಪ್ರಶ್ನೆ ಎಂದು ವಾಗ್ದಾಳಿ ನಡೆಸಿದ್ದಾರೆ.

ಸಂವಿಧಾನದ ರಕ್ಷಕರಾಗಿರುವ ರಾಷ್ಟ್ರಪತಿ ಅವರು ಜ್ಞಾನೇಶ್ ಕುಮಾರ್ ಅವರನ್ನು ತಕ್ಷಣವೇ ಪದಚ್ಯುತಗೊಳಿಸಿ, ಅವರ ವಿರುದ್ಧ ತನಿಖೆ




ನಡೆಸುವಂತೆ ಕೇಂದ್ರ ಸರ್ಕಾರಕ್ಕೆ ಆದೇಶ ನೀಡಬೇಕು. ನಿಷ್ಪಕ್ಷಪಾತ ಮತ್ತು ಪಾರದರ್ಶಕ ಮತದಾನವೇ ಭಾರತದ ಪ್ರಜಾಪ್ರಭುತ್ವದ ಆತ್ಮ. ಪ್ರಜೆಗಳ ಮತದ ಹಕ್ಕನ್ನು ರಕ್ಷಿಸಬೇಕಾದ ಜವಾಬ್ದಾರಿ ಹೊತ್ತಿರುವ ಸಾಂವಿಧಾನಿಕ ಸಂಸ್ಥೆ ಚುನಾವಣಾ ಆಯೋಗ ಎಂದು ಆಗ್ರಹಿಸಿದ್ದಾರೆ.

# ಕೇಂದ್ರ ಚುನಾವಣಾ ಆಯೋಗದಲ್ಲಿ ಆಂತರಿಕ ಬಿಕ್ಕಟ್ಟು?

## ಸಿಇಸಿ ಜ್ಞಾನೇಶ್ ಕುಮಾರ್ ವಿರುದ್ಧ ಸಿಡಿದೆದ್ದ ಇಬ್ಬರು ಆಯುಕ್ತರ ತೀವ್ರ ಅಸಮಾಧಾನ



**ನವದೆಹಲಿ:** ಮುಖ್ಯ ಚುನಾವಣಾ ಆಯುಕ್ತ (ಸಿಇಸಿ) ಜ್ಞಾನೇಶ್ ಕುಮಾರ್ ಕಾರ್ಯವೈಖರಿ ವಿರುದ್ಧ ಚುನಾವಣಾ ಆಯುಕ್ತರಾದ ಸುಖಬೀರ್ ಸಿಂಗ್ ಸಂಧು ಮತ್ತು ವಿವೇಕ್ ಜೋಶಿ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಈ ಮೂಲಕ ಕೇಂದ್ರ ಚುನವಣಾ ಆಯೋಗದ ಒಳಜಗಳ ಬೀದಿಗೆ ಬಂದಿದೆ.

ಚುನಾವಣಾ ಆಯೋಗದಲ್ಲಿ ಎಲ್ಲವೂ ಸರಿಯಿಲ್ಲ ಎಂಬುದು ಬಹಿರಂಗಗೊಂಡಿದೆ. ಇದು ಸಾರ್ವಜನಿಕರ ಆತಂಕಕ್ಕೆ ಕಾರಣವಾಗಿದೆ. ಅಲ್ಲದೆ, ಕಾಂಗ್ರೆಸ್ ನಾಯಕರು ಸಿಇಸಿ ಜ್ಞಾನೇಶ್ ಕುಮಾರ್ ವಿರುದ್ಧ ಆರೋಪಗಳ ಸುರಿಮಳೆ ಸುರಿಸಿದ್ದಾರೆ.

ಮತದಾರರ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಸೇರಿದಂತೆ ಹಲವು ಪ್ರಮುಖ ವಿಷಯಗಳಲ್ಲಿ ಮುಖ್ಯ ಚುನಾವಣಾ ಆಯುಕ್ತ

### ಏಕಪಕ್ಷೀಯ ನಿರ್ಧಾರಕ್ಕೆ ಟೀಕೆ

**ಸಂವಿಧಾನದ 324ನೇ ವಿಧಿ ಹಾಗೂ ಮುಖ್ಯ ಚುನಾವಣಾ ಆಯುಕ್ತ ಮತ್ತು ಇತರ ಚುನಾವಣಾ ಆಯುಕ್ತರ ಕಾಯ್ದೆ 2023ರ 18ನೇ ಕಲಂ ಪ್ರಕಾರ ಆಯೋಗದ ವ್ಯವಹಾರಗಳನ್ನು ಸರ್ವಾನುಮತದಿಂದ ಅಥವಾ ಬಹುಮತದ ನಿರ್ಧಾರದ ಆಧಾರದಲ್ಲಿ ನಡೆಸಬೇಕು. ಆದರೆ ಕೆಲವು ಆಡಳಿತಾತ್ಮಕ ಹಾಗೂ ಕಾರ್ಯನಿರ್ವಹಣಾ ನಿರ್ದೇಶನಗಳನ್ನು ಆಯೋಗದ ನಿರ್ಧಾರ ಎಂಬ ಹೆಸರಿನಲ್ಲಿ ಜಾರಿಗೊಳಿಸಲಾಗಿದೆ ಎಂಬುದು ಸಂಧು ಮತ್ತು ಜೋಶಿ ಅವರ ಪ್ರಮುಖ ಆರೋಪ.**

### ಸಿಇಸಿ ಕಾನೂನುಬಾಹಿರ ಕ್ರಮ

**ಆಕ್ಷೇಪಗಳ ಪೈಕಿ ಹೊಸ ಮತದಾರರ ಸೇರ್ಪಡೆಗೆ ಬಳಸುವ ಫಾರ್ಮ್ 6ರಲ್ಲಿ ಮಾಡಲಾದ ಬದಲಾವಣೆ ಪ್ರಮುಖವಾಗಿದೆ. ಹೊಸ ಮತದಾರರಾಗಿ ನೋಂದಾಯಿಸಿಕೊಳ್ಳಲು ಬಯಸುವವರು ತಾವು ಅಥವಾ ತಮ್ಮ ಪೋಷಕರು ಅಥವಾ ಅಜ್ಜ–ಅಜ್ಜಿಯರು ಹಿಂದಿನ ಎಸ್‌ಐಆರ್ ಪಟ್ಟಿಯಲ್ಲಿ ಇದ್ದರೇ ಎಂಬ ಮಾಹಿತಿಯನ್ನು ಕಡ್ಡಾಯವಾಗಿ ನೀಡಬೇಕೆಂಬ ಷರತ್ತು ಸೇರಿಸಲಾಗಿತ್ತು. ನಿಯಮಗಳಲ್ಲಿ ತಿದ್ದುಪಡಿ ಮಾಡದೆ ಅರ್ಜಿ ನಮೂನೆಯಲ್ಲಿ ಇಂತಹ ಬದಲಾವಣೆ**

## ಪ್ರತಾಪ್ ಸಿಂಹ ವಿರುದ್ಧ ಮತ್ತೊಂದು ಎಫ್‌ಐಆರ್

**ಮೈಸೂರು:** ಮಾಜಿ ಸಂಸದ ಪ್ರತಾಪ್ ಸಿಂಹ ವಿರುದ್ಧ ಮತ್ತೊಂದು ಎಫ್‌ಐಆರ್ ದಾಖಲಾಗಿದೆ. ಅಂಬೇಡ್ಕರ್ ವೆಲ್ಫೇರ್ ಅಸೋಸಿಯೇಷನ್ ಅಧ್ಯಕ್ಷ ಮಧು ನೀಡಿದ ದೂರಿನ ಆಧಾರದ ಮೇಲೆ ಟಿ. ನರಸೀಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಪ್ರತಾಪ್ ಸಿಂಹ ಅವರು ಇನ್ಸ್‌ಪೆಕ್ಟರ್ ಧನಂಜಯ್ ಅವರಿಗೆ ಬೆದರಿಕೆ ಹಾಕಿದ್ದಾರೆ ಹಾಗೂ ಅಧಿಕಾರಿ ವಿರುದ್ಧ ಅವಹೇಳನಕಾರಿ ಜಾತಿ ಸಂಬಂಧಿತ ಹೇಳಿಕೆಗಳನ್ನು ನೀಡಿದ್ದಾರೆ ಎಂದು ದೂರಿನಲ್ಲಿ ಆರೋಪಿಸಲಾಗಿದೆ.



**ಮೊದಲ ಪುಟದಿಂದ**

## ಕೈ ಶಾಸಕರ ಜಟಾಪಟಿ

ಜಟಾಪಟಿ ನಡೆಯಿತು. ಬಂಗಾರಪೇಟೆ ಶಾಸಕ ಎಸ್.ಎನ್.ನಾರಾಯಣಸ್ವಾಮಿ ಮತ್ತು ಕೆಜಿಎಫ್ ಶಾಸಕಿ ರೂಪಕಲಾ ಶಶಿಧರ್ ಮಧ್ಯೆ ನಡೆದ ಮಾತಿನ ಚಕಮಕಿ ಚರ್ಚೆಗೆ ಕಾರಣವಾಯಿತು. ನಾರಾಯಣಸ್ವಾಮಿ ಮತ್ತು ಎಸ್.ಎನ್.ಸುಬ್ಬಾರೆಡ್ಡಿ ಕುಳಿತಿದ್ದ ಆಸನದ ಮುಂದೆ ನಿಂತು ರೂಪಾ ಶಶಿಧರ್ ಅವರು ಏರುಧ್ವನಿಯಲ್ಲೇ ನಾರಾಯಣಸ್ವಾಮಿ ಜೊತೆ ವಾಗ್ವಾದ ನಡೆಸಿದರು.

ಸುಬ್ಬಾರೆಡ್ಡಿ ಮತ್ತು ನಾರಾಯಣಸ್ವಾಮಿ ಅಕ್ಕಪಕ್ಕ ಕುಳಿತು ನಗುನಗುತ್ತಾ ಮಾತನಾಡುತ್ತಿದ್ದಾಗ ಹಿಂದಿನಿಂದ ಬಂದ ರೂಪಕಲಾ, ನನ್ನನ್ನ ಅಪಮಾನ ಮಾಡ್ತಿದ್ದೀರಾ ನೀವು. ಎಲ್ಲ ಒಂದಾಗಿದ್ದೀರಿ, ಏನು ಮಾಡೋದಕ್ಕೆ ಆಗುತ್ತೆ ಎಂದು ಕೂಗಾಡಿದರು. ಅಲ್ಲದೆ, ಟೇಬಲ್ ಬಡಿದು ಆಕ್ರೋಶ ಹೊರಹಾಕಿದದರು.

## ಸದನದಲ್ಲಿ ಅನಂತ್‌ಗೆ ಅಭಿನಂದನೆ

ಮಾತನಾಡುವೆ ಎಂದರು. ಈ ಸಂದರ್ಭ ಆರ್.ಅಶೋಕ 'ಮನೆಯಲ್ಲಿರುವ ಮಂತ್ರಿಗಳು ಕಲಾಪಕ್ಕೆ ಬರಲಿ, ಪೇಮೆಂಟ್ ಕೊಟ್ಟು ಮಿನಿಸ್ಟರ್ ಆದವರು ಬೇಕಾದರೆ ಮನೆಯಲ್ಲಿಯೇ ಇರಲಿ ಎಂದು ಹೇಳಿದ್ದು ಆಡಳಿತ ಪಕ್ಷದ ಸದಸ್ಯರನ್ನು ಕೆರಳಿಸಿತು.

ಕಾಂಗ್ರೆಸ್ ನ ಕೋನರೆಡ್ಡಿ ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದರು. ಸಚಿವರ ಬಗ್ಗೆ ಈ ರೀತಿ ಅಸಂಬದ್ಧವಾಗಿ ಮಾತನಾಡುವುದು ಸರಿಯಲ್ಲ, ಕೂಡಲೇ ಇದನ್ನು ಕಡತದಿಂದ ತೆಗೆದು ಹಾಕಿ ಎಂದು ಒತ್ತಾಯಿಸಿದರು. ಈ ಎಲ್ಲ ಚರ್ಚೆ ತಾರಕಕ್ಕೇರುವುದನ್ನು ಅರಿತ ಸಭಾಧ್ಯಕ್ಷ ಜಿ.ಎಸ್. ಪಾಟೀಲ ಕಲಾಪವನ್ನು 10 ನಿಮಿಷ ಮುಂದೂಡಿದರು.

## ಸಿಇಸಿ ಕಾನೂನುಬಾಹಿರ ಕ್ರಮ

ತರುವುದು ಕಾನೂನುಬಾಹಿರ ಎಂದು ವಿವೇಕ್ ಜೋಶಿ ಎಚ್ಚರಿಸಿದ್ದರು. ಸಂಧು ಅವರು ಈ ಕ್ರಮವನ್ನು ಅನಧಿಕೃತ ಮತ್ತು ಕಾನೂನುಬಾಹಿರ ಎಂದು ಕರೆದಿದ್ದು, ತಕ್ಷಣ ಹಿಂಪಡೆಯುವಂತೆ ಒತ್ತಾಯಿಸಿದ್ದರು. ಎಸ್‌ಐಆರ್ ಪ್ರಕ್ರಿಯೆಯಲ್ಲಿ ಕರಡು ಮತದಾರರ ಪಟ್ಟಿಯಿಂದ ಕೋಟ್ಯಂತರ ಹೆಸರುಗಳನ್ನು ಅಕ್ರಮವಾಗಿ ಕೈಬಿಡಲಾಗಿದೆ ಎಂದು ಆರೋಪಿಸಲಾಗಿದೆ.

## ಕೇಂದ್ರ ಚುನಾವಣಾ ಆಯೋಗದಲ್ಲಿ ಆಂತರಿಕ ಬಿಕ್ಕಟ್ಟು?

ಜ್ಞಾನೇಶ್ ಕುಮಾರ್ ಕಾರ್ಯವೈಖರಿ ಬಗ್ಗೆ ಚುನಾವಣಾ ಆಯುಕ್ತರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಜ್ಞಾನೇಶ್ ಕುಮಾರ್ ನೇತೃತ್ವದಲ್ಲಿ ಕೈಗೊಳ್ಳಲಾದ ಹಲವು ಆಡಳಿತಾತ್ಮಕ ಮತ್ತು ನೀತಿ ನಿರ್ಧಾರಗಳಿಗೆ ಕಳೆದ 10 ತಿಂಗಳಲ್ಲಿ ಇಬ್ಬರೂ ಆಯುಕ್ತರು 14 ಬಾರಿ ಲಿಖಿತ ಆಕ್ಷೇಪ ದಾಖಲಿಸಿದ್ದಾರೆ. ವಿಶೇಷವಾಗಿ 2025ರ ನವೆಂಬರ್‌ನಿಂದ 2026ರ ಆಗಸ್ಟ್‌ವರೆಗೆ ಎಸ್‌ಐಆರ್, ಹಿರಿಯ ಅಧಿಕಾರಿಗಳ ನೇಮಕಾತಿ ಹಾಗೂ ಮತದಾರರ ಪಟ್ಟಿಗೆ ಸಂಬಂಧಿಸಿದ ಹಲವು ಮಹತ್ವದ ನಿರ್ಧಾರಗಳನ್ನು ಸಮಾಲೋಚನೆ ಇಲ್ಲದೆ ಏಕಪಕ್ಷೀಯವಾಗಿ ಕೈಗೊಳ್ಳಲಾಗಿದೆ ಎಂದು ಆರೋಪಿಸಿದ್ದಾರೆ. ಬುದು ಅವರ ಪ್ರಮುಖ ಆರೋಪವಾಗಿದೆ.

ಚುನಾವಣಾ ಆಯೋಗದ ಹೆಸರಿನಲ್ಲಿ ಸಲ್ಲಿಸಲಾದ ಈ ಮೇಲ್ಮನವಿಗಳಿಗೆ ಯಾರು ಅನುಮತಿ ನೀಡಿದರು ಮತ್ತು ಆಯೋಗದ ಪರವಾಗಿ ಅವುಗಳನ್ನು ಯಾರು ಸಲ್ಲಿಸಿದರು ಎಂಬುದನ್ನು ಸ್ಪಷ್ಟಪಡಿಸುವಂತೆ ಕೇಳಿದ್ದಾರೆ.

ಈ ಕುರಿತು ತಮಗಾಗಲಿ, ವಿವೇಕ್ ಜೋಶಿಗಾಗಲಿ ಅಥವಾ ಪಶ್ಚಿಮ ಬಂಗಾಳದ ಮುಖ್ಯ ಚುನಾವಣಾಧಿಕಾರಿಗಾಗಲಿ ಯಾವುದೇ ಮಾಹಿತಿ ನೀಡಲಾಗಿಲ್ಲ ಎಂದು ಅವರು ಹೇಳಿದ್ದಾರೆ.

## ರೈತರಿಗಾಗಿ ರಾಜೀನಾಮೆ ನಿರ್ಧಾರ:

ಪಾಟೀಲ್ ಮೇಲೆ ಒತ್ತಡ ಇರಲ್ವಾ? 224 ಕ್ಷೇತ್ರಗಳಲ್ಲಿ ಕಾಂಗ್ರೆಸ್, ಬಿಜೆಪಿ ಅಂತ ನೋಡಲ್ಲ, ಮಾನದಂಡ ಸರಿ ಇದ್ದರೆ ಘೋಷಣೆ ಮಾಡ್ತೇವೆ ಎಂದು ಸಿಎಂ ಡಿಕೆಶಿ ಹೇಳಿದರು.

## ಸಿಎಂ ಡಿಕೆಶಿಗೆ ಶಾಸನದ ಗಂಧಗಾಳಿಯೇ ಗೊತ್ತಿಲ್ಲ

ಅದಕ್ಕಿರುವ ರಕ್ಷಣೆ ಏನು? ಆ ಸಂಸ್ಥೆ ನಡೆದುಬಂದ ಹಾದಿ, ಹೆಗ್ಗಳಿಕೆ ಬಗ್ಗೆ ತಿಳಿದುಕೊಳ್ಳಿ. ಹೊಲಕ್ಕೆ ಕಳೆ ಬಿದ್ದರೆ ಅದನ್ನು ಕಿತ್ತೆಸೆಯಬೇಕು, ಹೊಲಕ್ಕೇ ವಿಷವುಣಿಸುವ ಕೆಲಸ ಆಗಬಾರದು ಎಂದು ಟೀಕಿಸಿದ್ದಾರೆ.

# ಮಾಜಿ ಸಂಸದ ಪ್ರತಾಪಸಿಂಹ ಬಂಧನಕ್ಕೆ ಆಗ್ರಹಿಸಿ ಪ್ರತಿಭಟನೆ

**ಮೈಸೂರು:** ದಲಿತರ ಸಮಾನತೆಯ ಸಂಕೇತ ನೀಲಿ ಶಾಲು ಮತ್ತು ದಲಿತ ಸಂಘರ್ಷ ಸಮಿತಿ ವಿರುದ್ಧ ಅವಹೇಳನಕಾರಿಯಾಗಿ ಮಾತನಾಡಿರುವ ಮಾಜಿ ಸಂಸದ ಪ್ರತಾಪ್ ಸಿಂಹರನ್ನು ಯುಎಪಿಎ ಕಾಯ್ದೆಯಡಿ ಬಂಧಿಸಬೇಕು, ಅವರ ಮೇಲಿರುವ ಎಲ್ಲಾ ಪ್ರಕರಣಗಳನ್ನು ಉನ್ನತಮಟ್ಟದ ತನಿಖೆಗೊಳಪಡಿಸಬೇಕು ಎಂದು ಒತ್ತಾಯಿಸಿ ದಲಿತ ಸಂಘರ್ಷ ಸಮಿತಿ ವತಿಯಿಂದ ಪ್ರತಿಭಟನೆ ನಡೆಸಲಾಯಿತು.



ನಗರದ ಪುರಭವನದ ಆವರಣದಲ್ಲಿರುವ ಅಂಬೇಡ್ಕರ್ ಪ್ರತಿಮೆ ಬಳಿ ಬುಧವಾರ ಜಮಾಯಿಸಿದ ಪ್ರತಿಭಟನಕಾರರು, ಪ್ರತಾಪ್ ಸಿಂಹ ಹಾಗೂ ಪೊಲೀಸರ ವಿರುದ್ಧ ಘೋಷಣೆಗಳನ್ನು ಕೂಗಿದರು. ಇದೇ ವೇಳೆ ದಸಂಸ ಜಿಲ್ಲಾ ಸಂಚಾಲಕ ಚೋರನಹಳ್ಳಿ ಶಿವಣ್ಣ ಮಾತನಾಡಿ, ಮೈಸೂರು ಜಿಲ್ಲೆಯ ಟಿ.ನರಸೀಪುರದಲ್ಲಿ ಗಣೇಶೋತ್ಸವದ ಹೆಸರಿನಲ್ಲಿ ಮಸೀದಿ ಮುಂದೆ ಪ್ರಚೋದಕಾರಿ ಭಾಷಣ ಮಾಡಿ, ಪೊಲೀಸ್ ಅಧಿಕಾರಿಯೊಬ್ಬರಿಗೆ ಅವಹೇಳನಕಾರಿಯಾಗಿ ಮಾತನಾಡಿರುವುದಲ್ಲದೆ ಸಮಾನತೆಯ ಸಂಕೇತದ ನೀಲಿ ಶಾಲಿನ ಬಗ್ಗೆಯೂ ಅವಮಾನಕಾರಿಯಾಗಿ ಪ್ರತಾಪ್ ಸಿಂಹ ಮಾತನಾಡಿರುವುದು ಖಂಡನೀಯ. ಈತನನ್ನು ಕೂಡಲೇ ಬಂಧಿಸದಿದ್ದರೆ ಉಗ್ರ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು. ಈತನ ಕಾನೂನು ಬಾಹಿರ ಚಟುವಟಿಕೆಗಳ ಬಗ್ಗೆ ಸಿ.ಸಿ ಟಿ.ವಿ, ಡ್ರೋಣ್ ವಿಡಿಯೋ, ಸಾಮಾಜಿಕ ಜಾಲತಾಣದ ವಿಡಿಯೋಗಳ ಸಾಕ್ಷ್ಯವನ್ನು ಆಧರಿಸಿ ಅಲ್ಲಿನ ಪೊಲೀಸರು ಸುಮೊಟೊ ಪ್ರಕರಣ ದಾಖಲಿಸಿದ್ದಾರೆ. ನಿನ್ನೆ ರಾತ್ರಿ ದಲಿತ ದೌರ್ಜನ್ಯ ಪ್ರಕರಣ ಕೂಡ ದಾಖಲಾಗಿದೆ. ಆದರೂ ಪೊಲೀಸರು ಆತನನನ್ನು ಬಂಧಿಸದೆ ನಿರ್ಲಕ್ಷ್ಯ ತೋರುತ್ತಿರುವುದು ಪೊಲೀಸರ ಮೇಲೆ ಅನುಮಾನ ಮೂಡಿಸಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ದಸಂಸ ಮುಖಂಡ ಕೆ.ವಿ.ದೇವೇಂದ್ರ ಮಾತನಾಡಿ, ಪ್ರತಾಪ್ ಸಿಂಹ ಒಬ್ಬ ಕಂತ್ರಿ. ಮನುವಾದಿ ಮನಸ್ಥಿತಿಯ ಪೊಲೀಸರು ಆತನನ್ನು ಬಂಧಿಸದೆ ಬಿಟ್ಟಿರುವುದು ಸಂವಿಧಾನ ವಿರೋಧಿ ನಡೆಯಾಗಿದೆ ಎಂದು ಹೇಳಿದರು. ಆಲಗೂಡು ಚಂದ್ರಶೇಖರ್ ಮಾತನಾಡಿ, ಮುಖ್ಯಮಂತ್ರಿಗಳಾಗಿದ್ದ ಬಿ.ಎಸ್. ಯಡಿಯೂರಪ್ಪ, ಉಮಾ ಭಾರತಿ,ಲಾಲು ಪ್ರಸಾದ್ ಯಾದವ್, ಜಯಲಲಿತ, ಅರವಿಂದ ಕೇಜ್ರಿವಾಲ್ ಸಹಿತ ಹಲವರು ಬಂಧನಕ್ಕೊಳಗಾಗಿದ್ದಾರೆ. ಅದರೆ ಒಬ್ಬ ಮಾಜಿ ಸಂಸದನನ್ನು ಬಂಧಿಸಲು ಪೊಲೀಸರು ಯಾಕಿಷ್ಟು ಮೀನಾ ಮೇಷ ಎಣಿಸುತ್ತಿದ್ದಾರೆ? ಕೂಡಲೇ ಪ್ರತಾಪ್ ಸಿಂಹ ಅವರನ್ನು ಬಂಧಿಸಿ ಎಂದು ಆಗ್ರಹಿಸಿದರು. ದಸಂಸ ಮುಖಂಡರಾದ ಎಡದೊರೆ ಮಹದೇವಯ್ಯ, ಕಿರಂಗೂರು ಸ್ವಾಮಿ, ಕೆ.ವಿ.ದೇವೇಂದ್ರ,ಸಣ್ಣ ಮಾದು, ಮುರುಡಗಳ್ಳಿ ಮಂಜುನಾಥ್, ಡಾ. ಜಗದೀಶ್, ಆಲಗೂಡು ಚಂದ್ರಶೇಖರ್, ಪ್ರದೀಪ್, ಮಹೇಶ್ ಪಿ.ಮರಳ್ಳಿ, ಸಂಜಯ್ ಕುಮಾರ್, ಶಿವು ಬಂಡಳ್ಳಿ, ಭುಗತಗಳ್ಳಿ ಸುನೀಲ್ ಬುದ್ಧ, ವರುಣಾ ಶಿವಣ್ಣ ಸೇರಿ ಹಲವರು ಭಾಗವಹಿಸಿದ್ದರು.

# ಪೌರಕಾರ್ಮಿಕರೇ ಸ್ವಚ್ಛತೆಯ ರಾಯಭಾರಿಗಳು

### ಸಂಸದ ಯದುವೀರ್ ಒಡೆಯರ್ । ಪೌರಕಾರ್ಮಿಕರ ದಿನ । 'ಗ್ರೇಟರ್ ಮೈಸೂರು' ಪ್ರಸ್ತಾಪ

**ಮೈಸೂರು:** ಪೌರಕಾರ್ಮಿಕರು ಸ್ವಚ್ಛ ಭಾರತ ಅಭಿಯಾನದ ನೈಜ ರಾಯಭಾರಿಗಳು ಹಾಗೂ ಸ್ವಚ್ಛತೆಯ ಅಸಲಿ ಶಿಲ್ಪಿಗಳಾಗಿದ್ದಾರೆ. ಇಂದು ಮೈಸೂರಿಗೆ 'ಸ್ವಚ್ಛ ನಗರಿ' ಎಂಬ ಹೆಸರು ಬಂದಿದ್ದರೆ, ಅದಕ್ಕೆ ಪೌರಕಾರ್ಮಿಕ ಸಮುದಾಯದ ಕಠಿಣ ಪರಿಶ್ರಮವೇ ಮೂಲ ಕಾರಣವಾಗಿದ್ದು, ಈ ಸಮಾಜಕ್ಕೆ ಕೃತಜ್ಞತೆ ಸಲ್ಲಿಸುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದರು.




ನಗರದ ಕಲಾಮಂದಿರದಲ್ಲಿ ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಆಯೋಜಿಸಿದ್ದ ಪೌರಕಾರ್ಮಿಕರ ದಿನಾಚರಣೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು. ಸ್ವಚ್ಛ ಭಾರತ ಅಭಿಯಾನ ಮತ್ತು ಶೌಚಾಲಯಗಳ ನಿರ್ಮಾಣದಿಂದ ದೇಶದ ಆರೋಗ್ಯ ಕ್ಷೇತ್ರದಲ್ಲಿ ಧನಾತ್ಮಕ ಬದಲಾವಣೆಯಾಗಿದೆ. ಯುನೆಸ್ಕೋ ಹಾಗೂ ವಿಶ್ವ ಆರೋಗ್ಯ ಸಂಸ್ಥೆಯ ವರದಿಗಳ ಪ್ರಕಾರ, ಸ್ವಚ್ಛತೆಯಿಂದಾಗಿ ಭಾರತದಲ್ಲಿ ಶಿಶು ಮರಣ ಪ್ರಮಾಣ ಗಣನೀಯವಾಗಿ ಇಳಿಕೆಯಾಗಿದೆ. ನಗರವು ಅತ್ಯಂತ ವೇಗವಾಗಿ ಬೆಳೆಯುತ್ತಿದ್ದು, ಕೇವಲ ಪಾರಂಪರಿಕ ಅರಮನೆ ಭಾಗವಷ್ಟೇ ಅಲ್ಲದೆ ರಿಂಗ್ ರಸ್ತೆ ಹಾಗೂ ಹೊರವಲಯಗಳಲ್ಲೂ ಸ್ವಚ್ಛತೆ ಕಾಪಾಡುವುದು ದೊಡ್ಡ ಸವಾಲಾಗಿದೆ. ಆದ್ದರಿಂದ ಮೈಸೂರು ಮಹಾನಗರ ಪಾಲಿಕೆಯನ್ನು ವಿಸ್ತರಿಸಿ 'ಗ್ರೇಟರ್ ಮೈಸೂರು' ಮಾಡುವ ಅಗತ್ಯವಿದ್ದು, ಈ ಸ್ವಚ್ಛತೆಯ ಹಿರಿಮೆಯನ್ನು ಉಳಿಸಿಕೊಳ್ಳಲು ಸರ್ಕಾರದ ಬೆಂಬಲ ಹಾಗೂ ಹೆಚ್ಚುವರಿ ಸಿಬ್ಬಂದಿಯ ಅಗತ್ಯವಿದೆ ಎಂದು ಅವರು ಪ್ರತಿಪಾದಿಸಿದರು.

ಈ ಕಾರ್ಯಕ್ರಮದಲ್ಲಿ ಮಹಾನಗರ ಪಾಲಿಕೆಯ ಹೆಚ್ಚುವರಿ ಆಯುಕ್ತೆ ವೀಣಾ, ಉಪ ಆಯುಕ್ತ ಶ್ರೀನಿವಾಸ್, ಕಂದಾಯ ಉಪ ಆಯುಕ್ತೆ ಸಿಂಧೂ, ದಾಸೇಗೌಡ, ನಗರದ ಪಂಚ ಗ್ಯಾರಂಟಿಗಳ ಅಧ್ಯಕ್ಷೆ ಪುಷ್ಪವಲ್ಲಿ, ಮಾಜಿ ಮೇಯರ್ ನಾರಾಯಣ, ಮಹಾನಗರ ಪಾಲಿಕೆ ನೌಕರರ ಸಂಘದ ಅಧ್ಯಕ್ಷ ನಾಗರಾಜ್, ಸೋಮಶೇಖರ್ ಮತ್ತಿತರರು ಉಪಸ್ಥಿತರಿದ್ದರು.

## ಪೌರಕಾರ್ಮಿಕರ ವಸತಿ ಸೌಲಭ್ಯ

ಜಿಲ್ಲಾಧಿಕಾರಿ ಜಿ. ಲಕ್ಷ್ಮೀಕಾಂತ್ ರೆಡ್ಡಿ ಮಾತನಾಡಿ, ಸಾಂಸ್ಕೃತಿಕ ನಗರಿ ಮೈಸೂರು ಇಡೀ ದೇಶದಲ್ಲೇ 'ಸ್ವಚ್ಛ ನಗರಿ' ಎಂದು ಹೆಮ್ಮೆಯಿಂದ ಗುರುತಿಸಿಕೊಳ್ಳಲು ಪೌರಕಾರ್ಮಿಕರ ನಿರಂತರ ಪರಿಶ್ರಮವೇ ಮೂಲ ಕಾರಣ. ಸಾರ್ವಜನಿಕರು ಏಳುವ ಮುನ್ನವೇ ಬೆಳಗಿನ ಜಾವ ಕೆಲಸ ಪ್ರಾರಂಭಿಸುವ ಇವರು, ಮಳೆ-ಬಿಸಿಲೆನ್ನದೆ ತಮ್ಮ ಕರ್ತವ್ಯವನ್ನು ಅತ್ಯಂತ ಅಚ್ಚುಕಟ್ಟಾಗಿ ನಿರ್ವಹಿಸುತ್ತಿದ್ದಾರೆ. ಮೈಸೂರು ಕೇವಲ ಸಾಂಸ್ಕೃತಿಕ ಮತ್ತು ಪರಂಪರೆಯ ನಗರವಾಗಿರದೆ ಕ್ಲೀನ್ ಸಿಟಿಯಾಗಿ ಹೆಸರುವಾಸಿಯಾಗಿದೆ. ಪ್ರಧಾನಮಂತ್ರಿಯವರು ಸೇರಿದಂತೆ ವಿದೇಶಿ ಗಣ್ಯರು ಹಾಗೂ ರಾಜ್ಯದ ಅಧಿಕಾರಿಗಳು ನಗರಕ್ಕೆ ಭೇಟಿ ನೀಡಿದಾಗ ಇಲ್ಲಿನ ಸ್ವಚ್ಛತೆಯನ್ನು ಮುಕ್ತಕಂಠದಿಂದ ಹೊಗಳಿದ್ದಾರೆ. ಈ ಗೌರವವು ಪೌರಕಾರ್ಮಿಕರು, ಹೆಲ್ತ್ ಇನ್ಸ್ಪೆಕ್ಟರ್‌ಗಳು, ನೈರ್ಮಲ್ಯ ಮೇಲ್ವಿಚಾರಕರು ಹಾಗೂ ಪರಿಸರ ಎಂಜಿನಿಯರ್‌ಗಳ ಶ್ರಮಕ್ಕೆ ಸಲ್ಲುತ್ತದೆ ಎಂದರು. ಜಂಬೂಸವಾರಿ ದಿನದಂದು 8 ರಿಂದ 10 ಲಕ್ಷ



ಜನರು ಸೇರುತ್ತಾರೆ; ಆಗ ರಸ್ತೆಗಳಲ್ಲೆಲ್ಲಾ ಕಸ ಬಿದ್ದಿದ್ದರೂ, ಕೇವಲ 2-3 ಗಂಟೆಗಳಲ್ಲಿ ಇಡೀ ರಸ್ತೆಗಳನ್ನು ಶೀಘ್ರವಾಗಿ ಸ್ವಚ್ಛಗೊಳಿಸಿ ಹಳೆಯ ರೂಪಕ್ಕೆ ತರುವ ಪೌರಕಾರ್ಮಿಕರ ಕಾರ್ಯಕ್ಷಮತೆ ನಿಜಕ್ಕೂ ವಿಸ್ಮಯಕಾರಿಯಾದದ್ದು. ಅವರ ಆರೋಗ್ಯ ರಕ್ಷಣೆಗೆ ಗ್ಲೌಸ್, ಮಾಸ್ಕ್ ಮುಂತಾದ ಅಗತ್ಯ ಸೌಲಭ್ಯಗಳ ಜೊತೆಗೆ, ನಗರದ ರಿಂಗ್ ರೋಡ್ ಮತ್ತು ಕೆಸರೆಯಲ್ಲಿ ಅವರಿಗಾಗಿ ಸುಸಜ್ಜಿತ ಮನೆಗಳ ನಿರ್ಮಾಣ ಕಾರ್ಯ ಪೂರ್ಣಗೊಂಡಿದೆ. ಜಿಲ್ಲಾಡಳಿತ ಹಾಗೂ ಮಹಾನಗರ ಪಾಲಿಕೆಯು ಅವರ ಕ್ಷೇಮಾಭಿವೃದ್ಧಿಗೆ ಸದಾ ಬದ್ಧವಾಗಿದೆ ಎಂದು ಭರವಸೆ ನೀಡಿದರು.

## ತ್ಯಾಜ್ಯಮುಕ್ತ ಸ್ಥಳಗಳ ನಿರ್ಮಾಣ, ಸುರಕ್ಷತೆಗೆ ಆದ್ಯತೆ

ಮಹಾನಗರ ಪಾಲಿಕೆಯ ಆಯುಕ್ತೆ ಎಂ.ಕೆ. ಸವಿತಾ ಮಾತನಾಡಿ, ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಹಮ್ಮಿಕೊಳ್ಳಲಾಗಿದ್ದ ಸ್ವಚ್ಛತಾ ಅಭಿಯಾನದ ಮೂಲಕ ನಗರದ ಸುಮಾರು 80 ಕಸ ಬೀಳುವ ಸೂಕ್ಷ್ಮ (ಜಿವಿಪಿ) ಸ್ಥಳಗಳನ್ನು ಗುರುತಿಸಿ, ಪೌರಕಾರ್ಮಿಕರ ಶ್ರಮದಿಂದ ಅವನ್ನು ಯಶಸ್ವಿಯಾಗಿ ಕಸಮುಕ್ತ ಹಾಗೂ ತ್ಯಾಜ್ಯಮುಕ್ತ ಸ್ಥಳಗಳನ್ನಾಗಿ ಪರಿವರ್ತಿಸಲಾಗಿದೆ. ಪೌರಕಾರ್ಮಿಕರ ಆರೋಗ್ಯ ಮತ್ತು ರಕ್ಷಣೆಗೆ ಮೊದಲ ಆದ್ಯತೆ ನೀಡಲಾಗಿದ್ದು, ಉತ್ತಮ ಗುಣಮಟ್ಟದ ಗ್ಲೌಸ್, ಶೂ, ಮಾಸ್ಕ್ ಹಾಗೂ ಸಮವಸ್ತ್ರಗಳನ್ನು ಒದಗಿಸಲಾಗಿದೆ. ಇದರೊಂದಿಗೆ ಅವರಿಗೆ ವಿಮಾ ಸೌಲಭ್ಯಗಳನ್ನು ಸಹ ವಿಸ್ತರಿಸಲಾಗುತ್ತಿದೆ ಎಂದು ಮಾಹಿತಿ ನೀಡಿದರು.



# ಬ್ರಾಹ್ಮಣ ಮಹಸಭಾಗೆ ಆಡಳಿತಾಧಿಕಾರಿ ನೇಮಕ



**ಮೈಸೂರುಳ:** ನಗರದ ಬ್ರಾಹ್ಮಣ ಧರ್ಮ ಸಹಾಯ ಸಭಾಗೆ ಕಾನೂನು ಬಾಹಿರವಾಗಿ ಆಡಳಿತಾಧಿಕಾರಿ ನೇಮಕ ಮಾಡಿದ್ದಾರೆ ಎಂದು ವಿಪ್ರ ಮುಖಂಡ ಎಂ.ಎನ್.ನವೀನ್ ಕುಮಾರ್ ಆರೋಪಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬ್ರಾಹ್ಮಣ ಧರ್ಮ ಸಹಾಯ ಸಭಾಗೆ ಸಂಬಂಧಿಸಿದಂತೆ ಹೈಕೋರ್ಟ್‌ನಲ್ಲಿ ಪರಿಶೀಲನೆ ಮಾಡಿ ಎಂದು ಮಾತ್ರ ಆದೇಶ ನೀಡಲಾಗಿದೆ. ಆದರೆ, ಎಲ್ಲಿಯೂ ನಿರ್ದಿಷ್ಟವಾಗಿ ಆಡಳಿತಾಧಿಕಾರಿ ನೇಮಕ ಮಾಡುವಂತೆ ಆದೇಶ ಮಾಡಿಲ್ಲ. ಬದಲಾಗಿ ನಿಬಂಧಕರ ಕಚೇರಿಯೂ ಯಾರದೋ ಮಾತು ಕೇಳಿಕೊಂಡು ಈ ನಿರ್ಧಾರಕ್ಕೆ ಬಂದಿದ್ದಾರೆ. ಇದು ಕಾನೂನು ಬಾಹಿರವಾಗಿದೆ ಎಂದು ಕಿಡಿಕಾರಿದರು.

ಈ ಹಿಂದಿನ ಚುನಾವಣೆಯಲ್ಲಿ ಸೋಲು ಕಂಡ ಕೆಲವರು ಈ ರೀತಿ ಅಧಿಕಾರಿಗಳನ್ನು ದಿಕ್ಕು ತಪ್ಪಿಸುತ್ತಿದ್ದಾರೆ. ಈ ಸಂಬಂಧ ನಾವು ಈಗಾಗಲೇ ಮುಖ್ಯಮಂತ್ರಿಗಳು ಹಾಗೂ ಮುಖ್ಯ ಕಾರ್ಯದರ್ಶಿಗಳಿಗೂ ಮನವಿ ಸಲ್ಲಿಸಿದ್ದೇವೆ. ಮತ್ತೊಂದೆಡೆ ಕಾನೂನು ಹೋರಾಟಕ್ಕೂ ಸಿದ್ಧತೆ ಮಾಡಿಕೊಂಡಿದ್ದೇವೆ ಎಂದರು. ನ್ಯಾಯಾಲಯದಲ್ಲಿ ಪರಿಶೀಲನೆ ಮಾಡಿ ಎಂದು ಸೂಚಿಸಿದರೂ, ಈವರೆಗೂ ಯಾವುದೇ ತನಿಖೆ ಮಾಡಿಲ್ಲ. ಈ ಹಿಂದಿನ ಆಡಳಿತ ಮಂಡಳಿಯೂ ತಮ್ಮ ಭ್ರಷ್ಟಾಚಾರ ಮುಚ್ಚಿ ಹಾಕಿಕೊಳ್ಳಲು ಈ ರೀತಿಕಾನೂನು ಬಾಹಿರವಾಗಿ ಆಡಳಿತಾಧಿಕಾರಿ ನೇಮಕ ಮಾಡಿಕೊಂಡಿದ್ದಾರೆ. ನಿಬಂಧಕರು ಅವರಿಗೆ ಸಾಥ್ ನೀಡುತ್ತಿದ್ದಾರೆ ಎಂದು ದೂರಿದರು. ಸುದ್ದಿಗೋಷ್ಠಿಯಲ್ಲಿ ಸಭಾದ ಚುನಾಯುತ ನಿರ್ದೇಶಕರಾದ ನರಸಿಂಹ ಪ್ರಸಾದ್, ಸುರೇಶ್, ಶ್ರೀನಿವಾಸ್, ಶ್ರೀನಾಥ್, ಕಣ್ಣಾ, ನಾಗರಾಜ್, ನಾಗೇಂದ್ರ, ಹೇಮಲತಾ, ನಟೇಶ್, ಬಿಂದು ಮಾಧವ ಮತ್ತು ಮಾಜಿ ಅಧ್ಯಕ್ಷ ಅಶ್ವಥ ನಾರಾಯಣ, ನಾಗಚಂದ್ರ, ಸಿಂಧುವಳ್ಳಿ ನಾಗರಾಜ್, ಮಂಜುನಾಥ್, ಆನಂದ್ ಉಪಸ್ಥಿತರಿದ್ದರು.

# 50:50 ಅಕ್ರಮ: ಶಾಸಕ ಶ್ರೀವತ್ಸ ಪತ್ರಕ್ಕೆ ಸ್ಪಂದನೆ

**ಮೈಸೂರು:** ಶಾಸಕ ಟಿ.ಎಸ್.ಶ್ರೀವತ್ಸ ಮನವಿಗೆ ಸ್ಪಂದಿಸಿರುವ ಸರ್ಕಾರ ಮೈಸೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ(ಎಂಡಿಎ) ಶೇ.50:50 ಅನುಪಾತದಡಿ ರದ್ದುಗೊಂಡಿರುವ ನಿವೇಶನಗಳ ಸಂಪೂರ್ಣ ಪಟ್ಟಿಯನ್ನು ಸಾರ್ವಜನಿಕವಾಗಿ ಪ್ರಕಟಿಸುವುದು, ಸಾರ್ವಜನಿಕರ ನೆರವಿಗಾಗಿ ಪ್ರತ್ಯೇಕ ಸಹಾಯವಾಣಿ ಆರಂಭಿಸಬೇಕು ಎಂದು ಎಂಡಿಎ ಆಯುಕ್ತರು ಹಾಗೂ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆಯುವ ಮೂಲಕ ಸೂಚನೆ ನೀಡುವ ಮೂಲಕ ಶಾಸಕ ಶ್ರೀವತ್ಸರ ಪತ್ರಕ್ಕೆ ಸ್ಪಂದನೆ ದೊರೆತಿದೆ.



ಶಾಸಕ ಟಿ.ಎಸ್.ಶ್ರೀವತ್ಸ ನಗರಾಭಿವೃದ್ಧಿ ಇಲಾಖೆ ಹಾಗೂ ಸರಕಾರಕ್ಕೆ ಪತ್ರ ಬರೆದು ಮೈಸೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ (ಎಂಡಿಎ) ಶೇ.50:50 ಅನುಪಾತದಡಿ ಹಂಚಿಕೆಯಾಗಿರುವ ನಿವೇಶನಗಳನ್ನು ರದ್ದುಗೊಳಿಸಿದರುವುದಕ್ಕೆ ಅಭಿನಂದನೆ ಸಲ್ಲಿಸಿರುವುದಲ್ಲದೇ ರದ್ದುಗೊಂಡ ನಿವೇಶನಗಳ ಪಟ್ಟಿಯನ್ನು ಬಿಡುಗಡೆಗೊಳಿಸುವಂತೆ ಮನವಿ ಮಾಡಿದ್ದರು. ಶಾಸಕರ ಸೆ.1ರ ಪತ್ರವನ್ನು ಉಲ್ಲೇಖಿಸಿರುವ ಸರಕಾರ, ಪತ್ರದಲ್ಲಿ ಪ್ರಸ್ತಾಪಿಸಿರುವ ವಿಷಯವನ್ನು ಚಾಲ್ತಿಯಲ್ಲಿರುವ ಕಾಯಿದೆ, ಸುತ್ತೋಲೆ ಹಾಗೂ ನಿಯಮಗಳನ್ವಯ ಪರಿಶೀಲಿಸಿ, ಅಗತ್ಯ ಕ್ರಮ ಕೈಗೊಳ್ಳುವಂತೆ ಮೈಸೂರು ಅಭಿವೃದ್ಧಿ ಪ್ರಾಧಿಕಾರ ಆಯುಕ್ತ, ನಗರ ಮತ್ತು ಗ್ರಾಮಾಂತರ ಯೋಜನಾ ಆಯುಕ್ತಾಲಯದ ಆಯುಕ್ತ ಮತ್ತು ಮೈಸೂರು ಜಿಲ್ಲಾಧಿಕಾರಿಗೆ ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ ಕೆ.ಲತಾ ಪತ್ರ ಬರೆದಿದ್ದರು. ಮುಡಾದಲ್ಲಿ 50:50 ಅನುಪಾತ ಮತ್ತು ಬದಲಿ ನಿವೇಶನ ಹಂಚಿಕೆಗೆ ಸಂಬಂಸಿದಂತೆ ಕೈಗೊಂಡಿರುವ ಕ್ರಮಗಳ ಬಗ್ಗೆ ಸಾರ್ವಜನಿಕರಿಗೆ ಸ್ಪಷ್ಟ ಮಾಹಿತಿ ದೊರೆಯುವ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ರದ್ದುಗೊಳಿಸಲಾದ ನಿವೇಶನಗಳ ವಿವರ, ಸಂಬಂತ ದಾಖಲೆಗಳು ಹಾಗೂ ಕ್ರಮದ ಸ್ಥಿತಿಗತಿಗಳನ್ನು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಬೇಕೆಂದು ಸೂಚಿಸಿದ್ದಾರೆ.

ಮುಡಾ ನಿವೇಶನ ಹಂಚಿಕೆ ಹಾಗೂ ರದ್ದತಿ ಕುರಿತಂತೆ ಸಾರ್ವಜನಿಕರಿಂದ ಬರುವ ದೂರು, ಆಕ್ಷೇಪಣೆ ಮತ್ತು ಮಾಹಿತಿ ವಿನಂತಿಗಳನ್ನು ಸ್ವೀಕರಿಸಲು ಪ್ರತ್ಯೇಕ ಸಹಾಯವಾಣಿ ಆರಂಭಿಸಲು ಸೂಚಿಸಲಾಗಿದೆ. ಇದರಿಂದ ಸಾರ್ವಜನಿಕರು ತಮ್ಮ ಸಮಸ್ಯೆಗಳನ್ನು ನೇರವಾಗಿ ಸಂಬಂಸಿದ ಅಧಿ ಕಾರಿಗಳ ಗಮನಕ್ಕೆ ತರಲು ಅನುಕೂಲವಾಗಲಿದೆ ಎಂದು ಶಾಸಕ ಶ್ರೀವತ್ಸ ತಿಳಿಸಿದ್ದಾರೆ.

# ಇಂದು ನಾನಾ ಸೇವಾಕಾರ್ಯಕ್ರಮ

**ಮೈಸೂರು:** ಸಚಿವ ರಿಜ್ವಾನ್ ಅರ್ಷದ್ ಹುಟ್ಟುಹಬ್ಬದ ಅಂಗವಾಗಿ ಅವರ ಅಭಿಮಾನಿಗಳ ಬಳಗದಿಂದ ಗುರುವಾರ (ಸೆ.24) ವಿವಿಧ ಸೇವಾ ಕಾರ್ಯ ಆಯೋಜಿಸಲಾಗಿದೆ ಎಂದು ರಿಜ್ವಾನ್ ಅರ್ಷದ್ ಅಭಿಮಾನಿಗಳ ಬಳಗದ ಅಧ್ಯಕ್ಷ ಎಸ್.ಎಂ.ಪಳನಿಸ್ವಾಮಿ ತಿಳಿಸಿದರು.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಬೆಳಿಗ್ಗೆ 10.30 ಕ್ಕೆ ಸಿಲ್ಕ್ ಫ್ಯಾಕ್ಟರಿ ಮುಂಭಾಗದ ಇಂದಿರಾ ಕ್ಯಾಂಟೀನ್ ಆವರಣದಲ್ಲಿ ಪೌರಕಾರ್ಮಿಕರಿಗೆ ಸನ್ಮಾನ, ಕೆ.ಆರ್ ಆಸ್ಪತ್ರೆಯಲ್ಲಿ ರಕ್ತದಾನ ಶಿಬಿರ, ಕೆ.ಆರ್ ಕ್ಷೇತ್ರದ 150 ಪೌರಕಾರ್ಮಿಕರಿಗೆ ಸೀರೆ ವಿತರಣೆ, ಡಿ.ದೇವರಾಜ ಅರಸು ಕಾಲೋನಿಯ ಸರ್ಕಾರಿ ಶಾಲೆಯಲ್ಲಿ ಸಸಿ ನೆಡುವುದು, 50 ಮಕ್ಕಳಿಗೆ ಪಠ್ಯ ಸಾಮಾಗ್ರಿ ವಿತರಣೆ ಹಾಗೂ ಆದಿ ಶಕ್ತಿ ಪಟ್ಟಲಮ್ಮ ದೇವಸ್ಥಾನದಲ್ಲಿ ಪೂಜೆ ಮಾಡಿ ಪ್ರಸಾದ ವಿನಿಯೋಗ ಮಾಡಲಾಗುವುದು. ನಗರ ಕಾಂಗ್ರೆಸ್ ಅಧ್ಯಕ್ಷ ಆರ್. ಮೂರ್ತಿ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಹಾಗೂ ನಾಗಣ್ಣ ಭಾಗವಹಿಸಲಿದ್ದಾರೆ ಎಂದರು. ಬಳಗದ ಪದಾಧಿಕಾರಿಗಳಾದ ಸುಬ್ರಮಣಿ, ಎಚ್.ಪಳನಿ, ಆರ್.ಶಂಕರ್, ಎಂ.ಕೆ.ಮಹದೇವ ಭಾಗವಹಿಸಿದರು.



# ಸೆ.27ಕ್ಕೆ ರ್‍ಯಾಲಿ



ಮೈಸೂರು,ಸೆ.ಇನ್ನರ್ ವೀಲ್ ಕ್ಲಬ್ ಆಫ್ ಮೈಸೂರು ವೆಸ್ಟ್ ವತಿಯಿಂದ ಇನ್ನರ್ ವೀಲ್ ಜಿಲ್ಲೆ 318ರ 57ನೇ ರ್‍ಯಾಲಿ ರಜನಿಗಂಧಾವನ್ನು ಸೆ.27 ರಂದು ಬೆಳಗ್ಗೆ 9 ಗಂಟೆಗೆ ಜಯಮ್ಮ ಗೋವಿಂದೇಗೌಡ ಕನ್ವೆನ್ಷನ್ ಹಾಲ್ ನಲ್ಲಿ ಏರ್ಪಡಿಸಲಾಗಿದೆ ಎಂದು ರ್‍ಯಾಲಿಯ ಅಧ್ಯಕ್ಷೆ ಸುಮಕೃಷ್ಣ ತಿಳಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾಧ್ಯಕ್ಷೆ ರಜಿನಿ ಭಟ್ ವಹಿಸಲಿದ್ದಾರೆ. ರಾಮ್‌ಸನ್ ಕಲಾ ಪ್ರತಿಷ್ಠಾನದ ಜ್ಞಾನೇಶ್ವರ್ ಸಿಂಗ್ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮೈಸೂರು ಮಹಾರಾಣಿಯರ ಕುರಿತು ಮಾತನಾಡಲಿದ್ದಾರೆ ಎಂದರು. ಈ ರ್‍ಯಾಲಿಯೂ ಸ್ನೇಹ, ಸೌಹಾರ್ದ, ಸೇವೆ ಮತ್ತು ನಾಯಕತ್ವದ ಆಚರಣೆಯಾಗಿದೆ. ಅಂದು ಪ್ರೇರಣದಾಯಕ ಭಾಷಣಗಳು, ಸಾಂಸ್ಕೃತಿಕ ಹಾಗೂ ಮನರಂಜನಾ ಕಾರ್ಯಕ್ರಮ, ಆಟಗಳು ಸೇರಿದಂತೆ ಇತರ ಚಟುವಟಿಕೆಗಳು ನಡೆಯಲಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ನೇತ್ರಾವತಿ, ಸವಿತಾ ಶ್ರೀಕಾಂತ್, ಶಶಿಕಲಾ ಸುರೇಶ್, ಸಾಯಿಲತಾ, ಶಾಲಿನಿ ಚಾರಿ ಉಪಸ್ಥಿತರಿದ್ದರು.

# ಎಫ್‌ಆರ್‌ಪಿ ದರ ಏರಿಕೆ ಮಾಡದಿದ್ದರೆ ಹೋರಾಟ

**ಮೈಸೂರು:** ಕಬ್ಬಿನ ಎಫ್ ಆರ್ ಪಿ ದರ ಏರಿಕೆ ಮಾಡುವಂತೆ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿರನ್ನು ರಾಜ್ಯ ಕಬ್ಬು ಬೆಳೆಗಾರ ಸಂಘ ಪದಾಧಿಕಾರಿಗಳು ನವದೆಹಲಿಯ ಕಚೇರಿಯಲ್ಲಿ ಇದೇ ತಿಂಗಳ ಮೂರನೇ ತಾರೀಕಿನಂದು ಭೇಟಿ ಮಾಡಿ ಚರ್ಚಿಸಿ ಮನವಿ ಪತ್ರ ನೀಡಿ ಒತ್ತಾಯಿಸಲಾಗಿದ್ದು, ಬೆಲೆ ಏರಿಕೆ ಮಾಡದಿದ್ದರೆ ಉಗ್ರ ಹೋರಾಟ ಮಾಡಲಾಗುವುದು ಎಂದು ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ತಿಳಿಸಿದರು.

ನಗರದ ಜಲದರ್ಶಿನಿಯಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಕನಿಷ್ಠ 10.25 ಇಳುವರಿಗೆ 4500ರೂಗೆ 11.25 ಇಳುವರಿಗೆ 4850.ರೂಗೆ ನಂತರದ 12.25 ಇಳುವರಿಗೆ 5200 ರೂ 13.25 ಇಳುವರಿಗೆ 5550 ರೂ ನಿಗದಿ ಮಾಡಬೇಕು. ಕಬ್ಬಿನ ಎಫ್‌ಆರ್‌ಪಿ ದರವನ್ನು ರೈತರ ಹೊಲದಲ್ಲಿನ ದರ ಎಂದು ಬದಲಾಯಿಸಬೇಕು ಒತ್ತಾಯಿಸಿದರು. ಅ.10 ಒಳಗೆ ಏರಿಕೆ ಮಾಡದಿದ್ದರೆ ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿರುದ್ಧ ರಾಜ್ಯಾದ್ಯಂತ ಬೀದಿಗೆ ಇಳಿದು ಹೋರಾಟಕ್ಕೆ ಕರೆ ನೀಡಲಾಗುವುದು ಎಂದರು.

ರಾಜ್ಯ ಸರ್ಕಾರ ಕಬ್ಬು ಸಾಗಾಣಿಕೆ ಕಟಾವು ಕೂಲಿ 800 ಎಂದು ನಿಗದಿ ಮಾಡಿದೆ. ಸಕ್ಕರೆ ಕಾರ್ಖಾನೆಗಳು ಹೆಚ್ಚು ಹಣ ಕಡಿತ ಮಾಡಿದರೆ ರೈತರು ಜಿಲ್ಲಾಧಿಕಾರಿಗೆ ದೂರು ಕೊಡಿ. ರಾಜ್ಯ ಸರ್ಕಾರ ತಮಿಳುನಾಡು ಮಾದರಿಯಲ್ಲಿ ಎಸ್‌ಎಪಿ ದರ ಹೆಚ್ಚುವರಿ 800 ರೂ ನಿಗದಿ ಮಾಡಬೇಕು ಎಂದು ಕಬ್ಬು



ಖರೀದಿ ಮಂಡಳಿ ಸಭೆಯಲ್ಲಿ ಸಕ್ಕರೆ ಸಚಿವ ರುದ್ರಪ್ಪ ಲಮಾಣಿ, ಆಹಾರ ಸಚಿವ ರಿಜ್ವಾನ್ ಹರ್ಷದ್ ಗೆ ಒತ್ತಾಯಿಸಲಾಗಿದೆ. ಬರಪಿಡಿತ ಪ್ರದೇಶದ ರೈತರ ಸಾಲ ನವೀಕರಣ. ಹೊಸ ಸಾಲ ವಿತರಣೆ ಯೋಜನೆ ನರ್ಬಡ್ ನಲ್ಲಿ ಹಳೆಯ ಯೋಜನೆ ರೈತರಿಗೆ ಸಹಕಾರಿಯಲ್ಲ. ಬರಗಾಲ ಪಿಡಿತ ಪ್ರದೇಶದ ರೈತರ ಬೆಳೆ ಸಾಲ ಮನ್ನಾ ಮಾಡಬೇಕು. 177 ತಾಲೂಕುಗಳಲ್ಲಿ ಬರ ಘೋಷಣೆಯಾದರೂ ಇನ್ನೂ ಬೆಳೆ ನಷ್ಟ ಬರ ಪರಿಹಾರ ಸಮೀಕ್ಷೆ ನಡೆಸಿಲ್ಲ ಸರ್ಕಾರ ರೈತರ ವಿಷಯದಲ್ಲಿ ಈ ರೀತಿ ನಾಟಕ ಆಡಬಾರದು ಬೆಳೆ ನಷ್ಟ ಪರಿಹಾರ ಕೂಡಲೇ ಬಿಡುಗಡೆ ಮಾಡಲಿ ಎಂದರು. ಪತ್ರಿಕಾಗೋಷ್ಠಿಯಲ್ಲಿ ರಾಜ್ಯ ಸಂಘಟನಾ ಕಾರ್ಯದರ್ಶಿ ಹತ್ತಳ್ಳಿ ದೇವರಾಜ್, ರಾಜ್ಯ ಸಂಚಾಲಕ ಬರಡನಪುರ ನಾಗರಾಜ್, ಜಿಲ್ಲಾ ಉಪಾಧ್ಯಕ್ಷ ನೀಲಕಂಠಪ್ಪ ಇನ್ನಿತರರು ಇದ್ದರು.



## ಕೃಷ್ಣ ವಂದನ

ಸ್ನೇಹಾ ಆನಂದ್



### ಹೇ ಕೃಷ್ಣಾ !

ಜೋ, ಜೋ ರಂಗನ್ನ, ಜೋ, ಜೋ ಕೃಷ್ಣನ್ನ,
ತೂಗಿರೆ ಯದುಕುಲ ತಿಲಕನ್ನ |
ಪುಟ್ಟ ಕಾಲನು ಇಟ್ಟು, ಬೆಣ್ಣೆ ಕದ್ದ ಚೋರನ್ನ
ತೂಗಿರೆ ಯಾದವ ಕಂದನ್ನ ||

ದೇವಕಿಯ ಒಡಲಲಿ ಹುಟ್ಟಿ,
ಯಶೋದೆಯ ಮಡಿಲಲಿ ಬೆಳೆದ,
ಮಮತೆಯ ಮುದ್ದು ಬಾಲನ್ನ ತೂಗಿರೆ |
ಮಾವ ಕಂಸನ ಕೊಂದು
ರಕ್ಕಸಿ ಪೂತನಿ ವಿಷ ಹಾಲ ಕುಡಿದು
ದಕ್ಕಿಸಿಕೊಂಡ ಚಿನ್ನನ್ನ ತೂಗಿರೆ ||

ಮಣ್ಣು ಮುಕ್ಕಿದ, ತನ್ನ ಪುಟ್ಟ ಬಾಯೊಳು,ತಾಯಿ ಯಶೋದಾ
ದೇವಿಗೆ, ಜಗವ ತೋರಿಸಿದ ತುಂಟ ಬಂಟನ್ನ ತೂಗಿರೆ |
ಗೋಪಿಯರ ಸಂಗದಲಿ ಚೇಷ್ಟೆ
ಮಾಡುತ,ರಾಧೆಯ ಮನವ ಕದ್ದ ಚೋರನ್ನ ತೂಗಿರೆ ||

ಗೋವುಗಳ ಕಾಯುತ, ಕೊಳಲನೂದವ ಗೋವರ್ಧನ
ಗಿರಿಯನೆತ್ತಿದವನ,
ಧರೆಯೊಡೆಯ ಪೋರನ್ನ ತೂಗಿರೆ |
ಜೋ,ಜೋ ಎನುತ ಲಾಲಿಯ ಹಾಡಿ ಪುಟ್ಟ ಪಾದಕೆ ತೊಟ್ಟ ಚಿನ್ನದ
ಗೆಜ್ಜೆಯ ಕಾಲಿಗೆ ವಂದಿಸುತ, ಜಗದೊಡೆಯ ಶ್ರೀಕೃಷ್ಣನ್ನ ತೂಗಿರೆ ||

# ರಸ್ತೆಬದಿ ಅಂಗಡಿಗಳ ತೆರವು




ಗುಂಡ್ಲುಪೇಟೆ: ಪಟ್ಟಣದ ಕೋರ್ಟ್ ರಸ್ತೆಯಲ್ಲಿ ಸಾರ್ವಜನಿಕರಿಗೆ ಹಾಗೂ ವಾಹನ ಸಂಚಾರಕ್ಕೆ ತೊಂದರೆಯಾಗುವಂತೆ ಅಳವಡಿಸಲಾಗಿದ್ದ ಅನಧಿಕೃತ ರೆಡಿಮೇಡ್ ಕಬ್ಬಿಣದ ಪೆಟ್ಟಿಗೆ (ಬಂಕ್) ಅಂಗಡಿಯನ್ನು ಪುರಸಭೆ ಅಧಿಕಾರಿಗಳು ಬುಧವಾರ ಬೆಳಗ್ಗೆ ಕ್ರೇನ್ ಮೂಲಕ ತೆರವುಗೊಳಿಸಿದರು.

ಕೋರ್ಟ್ ರಸ್ತೆ ಬದಿಯಲ್ಲಿ ಅನುಮತಿ ಪಡೆಯದೆ ರಾತ್ರೋರಾತ್ರಿ ಕಬ್ಬಿಣದ ಪೆಟ್ಟಿಗೆಯನ್ನು ಅಳವಡಿಸಿ ಅಂಗಡಿ ಆರಂಭಿಸಲು ಸಿದ್ಧತೆ ನಡೆಸಲಾಗಿತ್ತು. ಈ ಕುರಿತು ಸಾರ್ವಜನಿಕರಿಂದ ಪುರಸಭೆಗೆ ದೂರುಗಳು ಬಂದ ಹಿನ್ನೆಲೆಯಲ್ಲಿ, ಮುಖ್ಯಾಧಿಕಾರಿ ಶರವಣ ಎಸ್. ಅವರ ಸೂಚನೆಯ ಮೇರೆಗೆ ಅಧಿಕಾರಿಗಳು ಕಾರ್ಯಾಚರಣೆ ನಡೆಸಿ ಅನಧಿಕೃತ ಬಂಕ್ ಅನ್ನು ತೆರವುಗೊಳಿಸಿ ಜಪ್ತಿ ಮಾಡಿದರು.

ಪುರಸಭೆಯ ಕಿರಿಯ ಇಂಜಿನಿಯರ್ ಮಂಜುನಾಥ್ ಹಾಗೂ ಪರಿಸರ ಇಂಜಿನಿಯರ್ ಮಹೇಶ್ ಅವರ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಯಿತು. ಹಿರಿಯ ಆರೋಗ್ಯ ನಿರೀಕ್ಷಕ ಪರಮೇಶ್, ಮೇಲ್ವಿಚಾರಕರಾದ ಸಿದ್ದರಾಜು, ಮೂರ್ತಿ, ಬಿಲ್ ಕಲೆಕ್ಟರ್‌ಗಳಾದ ಪುಟ್ಟಸ್ವಾಮಿ, ರವಿ, ರಮೇಶ್ ಸೇರಿದಂತೆ ಪೌರಕಾರ್ಮಿಕರು ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು. ಸಾರ್ವಜನಿಕ ರಸ್ತೆ ಹಾಗೂ ಫುಟ್‌ಪಾತ್‌ಗಳನ್ನು ಅತಿಕ್ರಮಿಸಿ ಅನಧಿಕೃತವಾಗಿ ಅಂಗಡಿ ಅಥವಾ ಇತರೆ ನಿರ್ಮಾಣಗಳನ್ನು ಅಳವಡಿಸಿದರೆ ತೆರವುಗೊಳಿಸಿ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಪುರಸಭೆ ಅಧಿಕಾರಿಗಳು ಎಚ್ಚರಿಕೆ ನೀಡಿದ್ದಾರೆ

# 10,593 ಆಕ್ಷೇಪಣೆಗಳ ಅರ್ಜಿ ಸಲ್ಲಿಕೆ

ರಾಮನಗರ: ಜಿಲ್ಲೆಯಲ್ಲಿ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆ ಭಾಗವಾಗಿ ಆಗಸ್ಟ್ 24 ರಂದು ಪ್ರಕಟವಾಗಿರುವ ಕರಡು ಮತದಾರರ ಪಟ್ಟಿಗೆ ಆಕ್ಷೇಪಣೆ ಸಲ್ಲಿಸಲು 2026ರ ಆಗಸ್ಟ್ 24 ರಿಂದ ಸೆ. 23ರ ವರೆಗೆ ಕಾಲಾವಕಾಶ ಕಲ್ಪಿಸಲಾಗಿತ್ತು, ಅದರಂತೆ ಜಿಲ್ಲೆಯಲ್ಲಿ ಇದೂವರೆಗೆ ಒಟ್ಟು 10,593 ಹಕ್ಕು ಮತ್ತು ಆಕ್ಷೇಪಣೆ ಅರ್ಜಿಗಳು ಸಲ್ಲಿಕೆಯಾಗಿವೆ ಎಂದು ಜಿಲ್ಲಾ ಚುನಾವಣಾಧಿಕಾರಿಗಳೂ ಆಗಿರುವ ಜಿಲ್ಲಾಧಿಕಾರಿ ಯಶವಂತ್ ವಿ. ಗುರುಕರ್ ಅವರು ತಿಳಿಸಿದ್ದಾರೆ.



ಈ ಸಂಬಂಧ ಅವರು ಪತ್ರಿಕಾ ಪ್ರಕಟಣೆ ಹೊರಡಿಸಿದ್ದಾರೆ. ಫಾರಂ ನಂಬರ್ 6ರ (18-19 ವರ್ಷದ ಯುವ ಮತದಾರರು) ನಮೂನೆಯಲ್ಲಿ 2,126 ಯುವ ಮತದಾರರು, ಫಾರಂ ನಂಬರ್ 6ರ (20 ವರ್ಷ ಮೇಲ್ಪಟ್ಟವರು) 2,875 ಸೇರಿ ಒಟ್ಟಾರೆ ಫಾರಂ ನಂಬರ್ 6ರಲ್ಲಿ 5,001 ಅರ್ಜಿಗಳು ಸಲ್ಲಿಕೆಯಾಗಿವೆ. ಫಾರಂ ನಂಬರ್ 6ಎ ರಲ್ಲಿ 2, ಫಾರಂ ನಂಬರ್ 7ರಲ್ಲಿ 765 ಹಾಗೂ ಫಾರಂ ನಂಬರ್ 8ರಲ್ಲಿ 4,825 ಅರ್ಜಿಗಳು ಸಲ್ಲಿಕೆಯಾಗಿವೆ. ಒಟ್ಟಾರೆ ಜಿಲ್ಲೆಯಲ್ಲಿ ಒಟ್ಟು 10,593 ಅರ್ಜಿಗಳು ಸಲ್ಲಿಕೆಯಾಗಿವೆ ಎಂದು ತಿಳಿಸಿದ್ದಾರೆ.

2026ರ ಅಕ್ಟೋಬರ್ 22ರ ವರೆಗೆ ಹಕ್ಕು ಮತ್ತು ಆಕ್ಷೇಪಣೆಗಳ ಅರ್ಜಿಗಳ ವಿಲೇವಾರಿ ಕಾರ್ಯ ನಡೆಯಲಿದೆ. 2026ರ ಅಕ್ಟೋಬರ್ 27ರಂದು ಅಂತಿಮ ಮತದಾರರ ಪಟ್ಟಿ ಪ್ರಕಟಗೊಳ್ಳಲಿದೆ, ಇದುವರೆಗೆ ನೋ ಮ್ಯಾಪಿಂಗ್ ಹಾಗೂ ಅನಾಮಲಿಸ್ (2002ಕ್ಕೆ ಮ್ಯಾಪಿಂಗ್‌ನಲ್ಲಿ ವ್ಯತ್ಯಾಸ ಕಂಡುಬಂದ ಪ್ರಕರಣಗಳು) ಒಳಗೊಂಡಂತೆ 19,696 ಮತದಾರರಿಗೆ ನೋಟೀಸ್ ತಲುಪಿಸಲಾಗಿದ್ದು, 17,653 ನೋಟೀಸ್‌ಗಳ ವಿಚಾರಣೆ ನಡೆಸಲಾಗಿದೆ. 2,043 ವಿಚಾರಣೆ ಬಾಕಿಯಿದೆ ಎಂದವರು ತಿಳಿಸಿದ್ದಾರೆ.

# ಅಗತ್ಯಕ್ಕಿಂತ ಸ್ವಂತ ಪರಿಶ್ರಮ ಮುಖ್ಯ

## ಮುರುಗೇಶ್ ಆರ್.ನಿರಾಣಿ ಹೇಳಿಕೆ | ಎಂಆರ್‌ಎನ್ ಸೌಹಾರ್ದ ಕ್ರೆಡಿಟ್ ಸಹಕಾರಿ ಸಂಘ ಉದ್ಘಾಟನೆ

ರಾಮನಗರ: ಗಾಡ್‌ಫಾದರ್‌ಗಳು ನೆಪ ಮಾತ್ರಕ್ಕೆ. ಸಾಧಿಸುವ ಗುರಿ ಮತ್ತು ಛಲವಿದ್ದರೆ ಗಾಡ್‌ಫಾದರ್‌ಗಳ ಅಗತ್ಯವಿಲ್ಲ ಎಂದು ವಿಜಯ (ಎಂ.ಆರ್.ಎನ್) ಸೌಹಾರ್ದ ಕ್ರೆಡಿಟ್ ಸಹಕಾರಿ ಸಂಘದ ಸಂಸ್ಥಾಪಕ ಅಧ್ಯಕ್ಷರಾದ ಮಾಜಿ ಸಚಿವ ಮುರುಗೇಶ್ ಆರ್ ನಿರಾಣಿ ಹೇಳಿದರು.

ನಗರದಲ್ಲಿ ವಿಜಯ (ಎಂ.ಆರ್.ಎನ್) ಸೌಹಾರ್ದ ಕ್ರೆಡಿಟ್ ಸಹಕಾರಿ ಸಂಘದ 74ನೇ ಶಾಖೆಯನ್ನು ರಾಮನಗರದಲ್ಲಿ ಉದ್ಘಾಟಿಸಿ ಅವರು ಮಾತನಾಡಿದರು. ನರೇಂದ್ರ ಮೋದಿ, ಹೆಚ್.ಡಿ.ದೇವೇಗೌಡ, ಬಿ.ಎಸ್. ಯಡಿಯೂರಪ್ಪ, ಡಿ.ಕೆ.ಶಿವಕುಮಾರ್, ಸಿದ್ದರಾಮಯ್ಯ ಅವರುಗಳು ಸಹ ತಮ್ಮ ಸ್ವಸಾಮರ್ಥ್ಯದಿಂದಲೇ ಉನ್ನತ ಸ್ಥಾನಗಳನ್ನು ಅಲಂಕರಿಸಿದ್ದಾರೆ. ಛಲ ಇದ್ದರೆ ಗುರಿ ತಲುಪಬಹುದು ಎಂದರು.

ತಾವು ಕೈಗಾರಿಕೆಯನ್ನು ಮೊದಲು ಸ್ಥಾಪಿಸಲು 10 ಲಕ್ಷ ರೂಗಳನ್ನು ಕೆ.ಎಸ್.ಎಫ್.ಸಿಯಿಂದ ಸಾಲ ಪಡೆದಿದ್ದಾಗಿ, 25 ವರ್ಷದಲ್ಲಿ ಅತಿ ಹೆಚ್ಚು ಸಕ್ಕರೆಯನ್ನು ಉತ್ಪಾದಿಸುವ ಕಾರ್ಖಾನೆಯಾಗಿದೆ. ರಾಜ್ಯದ ದಕ್ಷಿಣ ಭಾಗದ 5 ಜಿಲ್ಲೆಗಳಲ್ಲಿ 35 ಸಾವಿರ ಟನ್ ಸಕ್ಕರೆ ಉತ್ಪಾದನೆಯಾಗುತ್ತಿದೆ. ನಿರಾಣಿ ಗ್ರೂಪ್‌ನ ಕಾರ್ಖಾನೆಗಳು 1 ಲಕ್ಷ ಟನ್ ಸಕ್ಕರೆ ಉತ್ಪಾಧಿಸುತ್ತಿದೆ. ದೇಶದಲ್ಲೇ ತಮ್ಮ ಕಾರ್ಖಾನೆಗಳಲ್ಲಿ ಅತಿ ಹೆಚ್ಚು ಪ್ರಮಾಣದಲ್ಲಿ ಎಥನಾಲ್ ಉತ್ಪಾದನೆಯಾಗುತ್ತಿದೆ. ಇಂದು ಪೆಟ್ರೋಲ್‌ಗೆ ಶೇ 20 ಎಥನಾಲ್ ಬಳಕೆಯಾಗುತ್ತಿದ್ದು, ಕಚ್ಚಾ ತೈಲ ಆಮದಿನ ಮೇಲೆ 20 ಲಕ್ಷ ಕೋಟಿ ರೂ ಉಳಿತಾಯವಾಗುತ್ತಿದೆ ಎಂದರು.

140 ಟನ್ ಸಿಎನ್‌ಜಿ ಉತ್ಪಾದಿಸುವ ಅವಕಾಶವಿದೆ. ದೇಶವ್ಯಾಪ್ತಿಯಲ್ಲಿ 1 ಸಾವಿರ ಪೆಟ್ರೋಲ್ ಬಂಕುಗಳನ್ನು ಸ್ಥಾಪಿಸಲು ಪ್ರಧಾನಿ ಮೋದಿ ಅವರು ಅವಕಾಶ ನೀಡಿದ್ದಾರೆ ಎಂದರು. ಮುಂದಿನ ದಿನಗಳಲ್ಲಿ ಬಯೋ ಡೀಗ್ರೆಡೆಬಲ್ ಪ್ಲಾಸ್ಟಿಕ್ ಮತ್ತು ವಿಮಾನದಲ್ಲಿ ಬಳಸುವ ಇಂಧನದ ಉತ್ಪಾದನೆ ನಮ್ಮ ಗುರಿ ಎಂದರು. ಇದೆಲ್ಲ ರೈತರ ಕೃಷಿ ಬೆಳೆಗಳಿಂದ ಉತ್ಪತ್ತಿಯಾಗುವ ತ್ಯಾಜ್ಯದಿಂದ ಉತ್ಪಾದಿಸಲಾಗುವುದು. ವೇಸ್ಟ್ ಟು ವೆಲ್ತ್ ನಮ್ಮ ಉದ್ದೇಶ ಎಂದರು. ಕಾರ್ಯಕ್ರಮದಲ್ಲಿ ಬೇವೂರು ಮಠದ ಮೃತ್ಯುಂಜಯ ಶಿವಾಚಾರ್ಯ ಸ್ವಾಮೀಜಿ, ಮೇಲಣ ಗವಿ ಮಠದ ಮಲಯ ಶಾಂತಮುನಿ ಶಿವಾಚಾರ್ಯ ಸ್ವಾಮೀಜಿ ಆಶೀರ್ವಚನ ನೀಡಿದರು. ಡಾ.ಪುಣ್ಯವತಿ ಮುಖಂಡರಾದ ಬೀಮಾಶಂಕರ್, ಡಾ.ಚೇತನ್, ಪೋಲೀಸ್ ರುದ್ರೇಶ್, ಬಿಡದಿ ನಂಜುಂಡಸ್ವಾಮಿ ಇದ್ದರು.




### ಬಹುರಾಷ್ಟ್ರೀಯ ಮತ್ತು ರಾಷ್ಟ್ರೀಯ ಬ್ಯಾಂಕುಗಳೊಂದಿಗೆ ಪೈಪೋಟಿ – ಬಿ.ಸಿ.ಪಾಟೀಲ್

ಮಾಜಿ ಸಚಿವರಾದ ಬಿ.ಸಿ.ಪಾಟೀಲ್ ಮಾತನಾಡಿ ಕಬ್ಬಿನ ನಾಡಿನಿಂದ ರೇಷ್ಮೆನಾಡಿಗೆ ಬ್ಯಾಂಕ್ ವಿಸ್ತರಣೆ ಆಗಿದೆ. ಸಾಧಿಸಬೇಕಾದ್ದು ಬಹಳಷ್ಟು ಎನ್ನುವ ನಿರಾಣಿ ಅವರ ಮಾತಿನಂತೆ ಬೆಂಗಳೂರು ದಕ್ಷಿಣ ಜಿಲ್ಲೆಗೆ ನಿರಾಣಿ ಅವರು ಆಗಮಿಸಿದ್ದು, ಇದುವರೆಗೆ 72 ಸಾವಿರ ಜನರಿಗೆ ವಿವಿಧ ಉದ್ಯಮಗಳಲ್ಲಿ ಉದ್ಯೋಗ ಕೊಟ್ಟಿದ್ದಾರೆ. ಈ ಭಾಗದ ರೈತರಿಗೆ ಕೈ ಗೆಟುವ ರೀತಿಯಲ್ಲಿ ಸಹಕಾರಿ ಬ್ಯಾಂಕ್ ಸೇವೆ ಸಲ್ಲಿಸಲಿ, ಬಹುರಾಷ್ಟ್ರೀಯ ಕಂಪನಿಗಳ ಜೊತೆ ಸೌಹಾರ್ಧ ಸಹಕಾರ ಬ್ಯಾಂಕ್ ಸ್ಪರ್ಧೆ ಮಾಡುತ್ತಿದೆ. ನಿರಾಣಿ ಅವರ ಕನಸ್ಸುಗಳು ಸಾಕಾರವಾಗಲಿ ಎಂದು ಶುಭ ಕೋರಿದರು. ಆಂದ್ರ ಪ್ರದೇಶದಲ್ಲಿ ವಿಮಾನಕ್ಕೆ ಪೂರೈಸುವ ಮಿಥೆಲ್ ತಯಾರಿಕೆಗೆ 400 ಎಕರೆ ಪ್ರದೇಶ ನೀಡಿದ್ದಾರೆ. ಕಬ್ಬಿನ ಬೆಳೆಯಿಂದಲೇ ಇಂತಹ ಅವಿಷ್ಕಾರ ನಿರಾಣಿಯವರ ದೂರದೃಷ್ಟಿಯನ್ನು ತೋರಿಸುತ್ತದೆ ಎಂದು ಅವರ ಕಾರ್ಯವನ್ನು ಶ್ಲಾಘಿಸಿದರು. ಪೋಲೀಸ್ ರುದ್ರೇಶ್ ಮಾತನಾಡಿ ಸಹಕಾರ ಬ್ಯಾಂಕ್ ಸ್ಥಾಪನೆಯೊಂದಿಗೆ ಉದ್ಯೋಗ ಕಲ್ಪಿಸಿಕೊಡುವ ಜೊತೆಗೆ ಉದ್ಯೋಗ ಬೇಡ ಉದ್ಯಮಿಯಾಗು ಎನ್ನುವ ಮುರುಗೇಶ್ ನಿರಾಣಿ ಅವರ ಮಾತು ಜಿಲ್ಲೆಯಲ್ಲಿ ಸಾರ್ಥಕವಾಗಲಿದೆ. ತಮ್ಮೆಲ್ಲರ ಸಹಕಾರವಿರಲಿ ಎಂದರು.

### ಕೆಲಸದ ಸಮಯವನ್ನು ಮೀರಿ ಬ್ಯಾಂಕ್ ಸೇವೆ

2007ರಲ್ಲಿ ಮುಧೋಳದಲ್ಲಿ ವಿಜಯ ಸೌಹಾರ್ದ ಕ್ರೆಡ್ರಿಟ್ ಸಹಕಾರಿ ಸಂಘ ಆರಂಭವಾಗಿದೆ. ಇಂದು ರಾಮನಗರದಲ್ಲಿ 74ನೇ ಶಾಖೆಯನ್ನು ಉದ್ಘಾಟಿಸಲಾಗಿದೆ. 75ನೇ ಶಾಖೆಯನ್ನು ಮೈಸೂರಿನಲ್ಲಿ ಉದ್ಘಾಟನೆ ಯಾಗಲಿದೆ. 125 ಶಾಖೆಗಳನ್ನು ಸ್ಥಾಪಿಸುವ ಗುರಿ ಇದೆ ಎಂದು ಸಹಕಾರಿ ಸಂಘದ ಸಂಸ್ಥಾಪಕ ಅಧ್ಯಕ್ಷ ಮುರುಗೇಶ್ ಆರ್ ನಿರಾಣಿ ತಿಳಿಸಿದರು. ಬ್ಯಾಂಕು ಸಾಮಾನ್ಯ ಜನತೆ, ರೈತರಿಗೆ ಉತ್ತಮ ಸೇವೆಯನ್ನು ನೀಡಲಿದೆ. ಕೆಲಸದ ಸಮಯ, ರಜೆಗಳನ್ನು ಲೆಕ್ಕಿಸದೆ ಗ್ರಾಹಕರಿಗೆ ಸೇವೆ ಲಭಿಸಲಿದೆ. ಸ್ಥಿರ ಠೇವಣಿ ಮೇಲೆ ಅನ್ಯ ಬ್ಯಾಂಕುಗಳಿಗಿಂತ ಹೆಚ್ಚು ಬಡ್ಡಿ ದರವನ್ನು ನೀಡುತ್ತಿದ್ದೇವೆ ಎಂದರು. ಆರಂಭದಲ್ಲಿ 400 ಸದಸ್ಯರಿಂದ 10 ಲಕ್ಷ ರೂ ಬಂಡವಾಳದೊಂದಿಗೆ ಸಹಕಾರಿ ಸಂಘ ಆರಂಭವಾಯಿತು. ಇದೀಗ 2ಲಕ್ಷಕ್ಕೂ ಅಧಿಕ ಸಂಖ್ಯೆಯ ಸದಸ್ಯರಿದ್ದಾರೆ. 21.60 ಕೋಟಿ ರೂ ಶೇರು ಬಂಡವಾಳ ಹೊಂದಿದೆ. 2025-26ನೇ ಸಾಲಿನಲ್ಲಿ 65 ಸಾವಿರ ಕೋಟಿ ರೂ ವ್ಯವಹಾರ ನಡೆದಿದೆ. ಸ್ಥಿರ ಠೇವಣಿ ಮೇಲೆ ಶೇ 11.5 ಬಡ್ಡಿ ನೀಡುತ್ತಿದೆ ಎಂದು ಬ್ಯಾಂಕಿನ ಪ್ರಗತಿಯ ಬಗ್ಗೆ ಮಾಹಿತಿ ಕೊಟ್ಟರು.

### ಮಂಡ್ಯ ಸಕ್ಕರೆ ಕಾರ್ಖಾನೆ ನಿರ್ವಹಣೆ ಟೆಂಡರ್ ಆಹ್ವಾನಿಸಲಿ

ಪಾಂಡವಪುರ ಸಕ್ಕರೆ ಕಾರ್ಖಾನೆಯನ್ನು ನಿರಾಣಿ ಗ್ರೂಪ್ ನಿರ್ವಹಿಸುತ್ತಿದೆ. ಲಾಭದತ್ತ ಮುನ್ನಡೆಯುತ್ತಿದೆ. ಮಂಡ್ಯ ಸಕ್ಕರೆ ಕಾರ್ಖಾನೆಯ ನಿರ್ವಹಣೆಗೆ ಸರ್ಕಾರ ಇ ಟೆಂಡರ್ ಕರೆಯಲಿ, ಯಾರಾದರೂ ನಿರ್ವಹಣೆ ಮಾಡಲಿ, ಒಟ್ಟಾರೆ ಕಾರ್ಖಾನೆ ಮತ್ತು ಕಾರ್ಮಿಕರಿಗೆ ನೆರವಾಗಬೇಕು ಎನ್ನುವುದು ಸರ್ಕಾರಕ್ಕೆ ನನ್ನ ಸಲಹೆ ಎಂದರು.

### ಮಂಡ್ಯ ಸಕ್ಕರೆ ಕಾರ್ಖಾನೆಯನ್ನು ನಿರ್ವಹಿಸಿ

ಮೃತ್ಯುಂಜಯ ಸ್ವಾಮೀಜಿ

ಬೇವೂರು ಮಠದ ಶ್ರೀ ಮೃತ್ಯುಂಜಯ ಸ್ವಾಮೀಜಿ ತಮ್ಮ ಆಶೀರ್ವಚನದ ವೇಳೆ ಮಾತನಾಡಿ, ನಿರಾಣಿ ಗ್ರೂಪ್ ಕಾರ್ಖಾನೆಯವರು ಸರ್ಕಾರಿ ಸೌಮ್ಯದಲ್ಲಿದ್ದ ಪಾಂಡವಪುರ, ಶ್ರೀರಂಗಪಟ್ಟಣದ ಸಕ್ಕರೆ ಕಾರ್ಖಾನೆಗಳ ನಿರ್ವಹಣೆ ಮಾಡುತ್ತಿದ್ದು ಉತ್ತಮವಾಗಿ ನಡೆಸುತ್ತಿದ್ದಾರೆ. ಮುರುಗೇಶ್ ನಿರಾಣಿ ಅವರು ಮಂಡ್ಯ ಸಕ್ಕರೆ ಕಾರ್ಖಾನೆಯ ನಿರ್ವಹಣೆಯನ್ನು ಪಡೆದುಕೊಂಡು ರೈತರಿಗೂ ಅನುಕೂಲ ಮಾಡಿ ಕೊಡುವ ಚಿಂತನೆ ಮಾಡಬೇಕು. ನಮ್ಮ ಭಾಗದ ಸಹಕಾರಿಗಳಿಗೆ, ರೈತರಿಗೆ ಹೊಸ ಶಾಖೆ ಉತ್ತಮ ಸೇವೆ ಒದಗಿಸಲಿ ಎಂದು ಶುಭ ಹಾರೈಸಿದರು.

# ಸರ್ಕಾರದ್ದು ದಪ್ಪ ಚರ್ಮ: ಮುರುಗೇಶ್ ಆರ್ ನಿರಾಣಿ

ರಾಮನಗರ: ಈ ಸರ್ಕಾರದ್ದು ದಪ್ಪ ಚರ್ಮ. ವಿರೋಧ ಪಕ್ಷದವರು ಹೇಳುತ್ತಿರುವ ಮಾತುಗಳನ್ನು ಈ ಸರ್ಕಾರ ಆಲಿಸುತ್ತಿಲ್ಲ. ವಿರೋಧ ಪಕ್ಷಗಳು ದುರ್ಬಲವಲ್ಲ ಎಂದು ಮಾಜಿ ಸಚಿವ ಮುರುಗೇಶ್ ಆರ್ ನಿರಾಣಿ ಪ್ರತಿಕ್ರಿಯಿಸಿದರು.

ನಗರದಲ್ಲಿ ವಿಜಯ ಸೌಹಾರ್ದ ಕ್ರೆಡಿಟ್ ಸಹಕಾರಿ ಸಂಘವನ್ನು ಉದ್ಘಾಟಿಸಿದ ನಂತರ ಅವರು ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದರು. ಕಾಂಗ್ರೆಸ್ ಸರ್ಕಾರದ ಆಡಳಿತವನ್ನು ಪ್ರಶ್ನಿಸುವ ವಿಚಾರದಲ್ಲಿ ವಿರೋಧ ಪಕ್ಷಗಲು ದುರ್ಬಲವಾಗಿವೆ ಎಂದು ಮಾಧ್ಯಮ ಪ್ರತಿನಿಧಿಗಳ ಪ್ರಶ್ನೆಗೆ ಅವರು ಪ್ರತಿಕ್ರಿಯಿಸಿದರು.

ಆರ್ಥಿಕ ಪರಿಸ್ಥಿತಿ ಸರಿಯಿಲ್ಲ ಎಂದು ರಾಜ್ಯ ಆರ್ಥಿಕ ಇಲಾಖೆ ಹೇಳಿದೆ. ಆದರೂ ಮಂಗಳೂರಿನಲ್ಲಿ ಹಲವಾರು ಕೋಟಿ ರೂಗಳ ಯೋಜನೆಯನ್ನು ಸಿಎಂ ಡಿಕೆಶಿ ಅವರು ಘೋಷಿಸಿದ್ದಾರೆ. ಈ ಹಿಂದೆ ಆಡಳಿತದಲ್ಲಿದ್ದ ಎಲ್ಲ ಸರ್ಕಾರಗಳು ಜಾರಿ ಮಾಡಿರುವ ಯೋಜನೆಗಳನ್ನು ಪೂರ್ಣಗೊಳಿಸಿದ ನಂತರ ಹೊಸ ಯೋಜನೆಗಳನ್ನು ಘೋಷಿಸಲಿ ಎಂದರು.

ರಾಜ್ಯ ಸರ್ಕಾರದಲ್ಲಿ ಹಣ ಇಲ್ಲ ಎಂಬುದು ಸಿಎಂ ಡಿಕೆಶಿ ಅವರಿಗೂ ಗೊತ್ತಿದೆ. ಬಿಜೆಪಿ ಪಕ್ಷ ಯಾವ ಜಿಲ್ಲೆಯಲ್ಲಿ ಪ್ರಬಲವಾಗಿದೆಯೋ ಅಲ್ಲಿ ಹೋಗಿ ಸುಳ್ಳು ಹೇಳುತ್ತಿದ್ದಾರೆ. ಹಾಲಿಗೆ ಸಬ್ಸಿಡಿ ಘೋಷಿಸಿದ್ದರು. ಅದನ್ನೇ ಸರಿಯಾಗಿ ಪಾವತಿ ಮಾಡುತ್ತಿಲ್ಲ. ಸರ್ಕಾರದ ಆರ್ಥಿಕ ಪರಿಸ್ಥಿತಿಯ ಶ್ವೇತ ಪತ್ರ ಹೊರಡಿಸುವಮತೆ ನಮ್ಮ ಪಕ್ಷದ ಹಿರಿಯರು ಸರ್ಕಾರವನ್ನು ಆಗ್ರಹಿಸುತ್ತಿದ್ದಾರೆ. ಇಡೀ ರಾಜ್ಯದಲ್ಲಿ ಮಳೆ ಕೊರತೆ ಆಗಿದೆ ಎಲ್ಲಾ 224 ತಾಲ್ಲೂಕುಗಳನ್ನು ಬರ ಪೀಡಿತ ಎಂದು ಘೋಷಿಸಬೇಕು ಎಂದರು.



#### ಆಡಳಿತದಲ್ಲಿ ಬಿಗಿ ಕಳೆದು ಕೊಂಡಿದೆ ಕಾಂಗ್ರೆಸ್ – ಬಿ.ಸಿ.ಪಾಟೀಲ್

ಈ ವೇಳೆ ಹಾಜರಿದ್ದ ಮಾಜಿ ಶಾಸಕ ಬಿ.ಸಿ.ಪಾಟೀಲ್ ಮಾತನಾಡಿ, ಗದಗ ಜಿಲ್ಲೆಯಲ್ಲಿ ಸಿಎಂ ಡಿಕೆಶಿ ಅವರು ಬರ ಪರಿಸ್ಥಿತಿಯನ್ನು ವೀಕ್ಷಿಸಿದ್ದರು. ಆದರೆ ಬರ ಪೀಡಿತ ಪಟ್ಟಿಯಲ್ಲಿ ಗದಗ ಜಿಲ್ಲೆ ಕಾಣಿಸಿಕೊಳ್ಳಲೇ ಇಲ್ಲ. ಅಂದರೆ ಅಲ್ಲಿನ ಅಧಿಕಾರಿಗಳು ನಿರ್ಲಕ್ಷವಹಿಸಿದ್ದಾರೆ ಎಂದಾಯಿತು. ಕಾಂಗ್ರೆಸ್ ಸರ್ಕಾರ ಆಡಳಿತದಲ್ಲಿ ಬಿಗಿ ಕಳೆದುಕೊಂಡಿದೆ ಎಂದರು. ಮುಖ್ಯಮಂತ್ರಿಗಳಿಗೆ ಬಿಡದಿ ಟೌನ್ ಶಿಪ್ ಬಗ್ಗೆ ಕಾಳಜಿ ಇದೆ, ಆದರೆ ರೈತರ ಬಗ್ಗೆ ಇಲ್ಲ ಎಂದು ಕುಟುಕಿದರು. ರಾಜ್ಯದ ಆರ್ಥಿಕ ಸ್ಥಿತಿ ಎಲ್ಲವೂ ಸರಿಯಿಲ್ಲ ಎಂದು ಆರ್ಥಿಕ ಇಲಾಖೆ ತಿಳಿಸಿದೆ. ಮುಂದಿನ ದಿನಗಳಲ್ಲಿ ಅಧಿಕಾರಿಗಳಿಗೆ ವೇತನ ಕೊಡಲು ಸಹ ಹಣ ಇರೋಲ್ಲ ಎಂದು ಹೇಳಿದೆ. ಆದರೆ ಮುಖ್ಯಮಂತ್ರಿಗಳು ಇದನ್ನು ಒಪ್ಪುತ್ತಿಲ್ಲ ಎಂದರು.

# ಫಿರ್ದೋಸ್ ಸುಲ್ತಾನಗೆ ಚಿನ್ನ



ರಾಮನಗರ: ಜಿಲ್ಲಾ ಮಟ್ಟದ ಟೇಕ್ವಾಂಡೋ ಕ್ರೀಡಾ ಕೂಟದಲ್ಲಿ ಇಲ್ಲಿನ ಜಾನಪದ ಲೋಕದ ಬಳಿ ಇರುವ ಬಿಜಿಎಸ್ ಪದವಿ ಪೂರ್ವ ಕಾಲೇಜಿನಲ್ಲಿ ದ್ವಿತಿಯ ಪಿಯೂ ವ್ಯಾಸಂಗ ಮಾಡುತ್ತಿರುವ ಫಿರ್ದೋಸ್ ಸುಲ್ತಾನ ಎಂಬ ವಿದ್ಯಾರ್ಥಿನಿ ಬಾಲಕಿಯಿರ 46 ಕೆಜಿ ತೂಕದ ವಿಭಾಗದಲ್ಲಿ ಚಿನ್ನದ ಪದಕ ಗಳಿಸಿದ್ದಾರೆ.

ಜಿಲ್ಲಾಡಳಿತ. ಜಿಲ್ಲಾ ಪಂಚಾಯತ್. ತಾಲ್ಲೂಕು ಪಂಚಾಯಿತಿ. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಬೆಂಗಳೂರು ದಕ್ಷಿಣ ಜಿಲ್ಲಾ ಟೇಕ್ವಾಂಡೋ ಸಂಸ್ಥೆ ರಾಮನಗರ ಸಹಯೋಗದೊಂದಿಗೆ ಕ್ರೀಡಾ ಕೂಟವನ್ನು ಆಯೋಜಿಸಲಾಗಿತ್ತು. ಛತ್ತೀಸ್‌ಘಡ, ರಾಯಪುರದಲ್ಲಿ ನಡೆದ ಇಂಟರ್‌ನ್ಯಾ?ನಲ್ ವರ್ಲ್ಡ್ ಸ್ಕೂಲ್ ಗೇಮ್ಸ್ ನಲ್ಲಿ ಟೇಕ್ವೊಂಡೋ ಸ್ಪರ್ಧೆಯಲ್ಲಿ ಕರ್ನಾಟಕದಿಂದ ಪ್ರತಿನಿಧಿಸಿದ ಈಕೆ ಅಲ್ಲಿ ರಜತ ಪದಕ ಗೆಳಿಸಿದ್ದರು. ಚಿನ್ನದ ಪದಕ ಗಳಿಸಿದ ವಿದ್ಯಾರ್ಥಿನಿಯನ್ನು ಬಿಜಿಎಸ್ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಸುರೇಶ್ ಎಂ. ಸಿ ಹಾಗೂ ಸಿಬ್ಬಂದಿ ವರ್ಗ ಅಭಿನಂದಿಸಿದ್ದಾರೆ.

ನ್ಯಾಯಾಧೀಶರಾದ ಈಶ್ವರ್ ಅಭಿಮತ | ತಾಲೂಕು ಮಟ್ಟದ ಮಹಿಳಾ ವಿಚಾರಗೋಷ್ಠಿ ಕಾರ್ಯಕ್ರಮ

# ಮಹಿಳೆಯರ ಸಮಾನತೆ, ಸಂರಕ್ಷಣೆಗಾಗಿ ಅನೇಕ ಕಾನೂನುಗಳಿವೆ

ಚಾಮರಾಜನಗರ: ಮಹಿಳೆಯರ ಸಮಾನತೆ, ಸಂರಕ್ಷಣೆಗಾಗಿ ದೇಶದಲ್ಲಿ ಅನೇಕ ಕಾನೂನುಗಳಿವೆ. ಅವುಗಳನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಹಿರಿಯ ಸಿವಿಲ್ ನ್ಯಾಯಾಧೀಶ,ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯ ದರ್ಶಿ ಈಶ್ವರ್ ಸಲಹೆ ನೀಡಿದರು.

ನಗರದ ಶ್ರೀಶಿವಕುಮಾರಸ್ವಾಮಿ ಭವನದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ.ಟ್ರಸ್ಟ್ ಚಾಮರಾಜನಗರ ತಾಲೂಕು, ಪದ್ಮವಿಭೂಷಣ ಡಾ.ಡಿ.ವೀರೇಂದ್ರ ಹೆಗ್ಗಡೆಯವರು ಹಾಗೂ ಮಾತೃಶ್ರೀ ಡಾ. ಹೇಮಾವತಿ ವೀರೇಂದ್ರ ಹೆಗಡೆಯವರ ಮಾರ್ಗದರ್ಶನಗಳೊಂದಿಗೆ ಮಹಿಳಾ ಜ್ಞಾನವಿಕಾಸ ಕಾರ್ಯಕ್ರಮದಡಿಯಲ್ಲಿ ಹಮ್ಮಿಕೊಂಡಿರುವ ತಾಲೂಕು ಮಟ್ಟದ ಮಹಿಳಾ ವಿಚಾರಗೋಷ್ಠಿ ಕಾರ್ಯಕ್ರಮವನ್ನು ಉದ್ಘಾಟಿಸಿ, ಮಹಿಳಾ ದೌರ್ಜನ್ಯ ಕಾಯಿದೆ ಅಡಿಯಲ್ಲಿ ಇರುವ ಮಾಹಿತಿಗಳು, ನೊಂದ ಮಹಿಳೆಯರಿಗೆ ಸರ್ಕಾರದಿಂದ ಸಿಗುವ ಸೌಲಭ್ಯಗಳ ಕುರಿತು ಮಾತನಾಡಿದರು. ಮಹಿಳೆಯರ ಸಮಾನತೆ, ಸಂರಕ್ಷಣೆಗಾಗಿ ದೇಶದಲ್ಲಿ ಅನೇಕ ಕಾನೂನುಗಳಿದ್ದು, ಮಹಿಳೆಯರ ಹಕ್ಕುಗಳನ್ನು ರಕ್ಷಿಸಲು, ತಾರತಮ್ಮವನ್ನು ತಡೆಯಲು, ಅವರಿಗೆ ಸುರಕ್ಷಿತ ವಾತಾವರಣವನ್ನು ನಿರ್ಮಿಸಲು ಸಹಾಯ ಮಾಡುತ್ತವೆ. ಕಾನೂನಿನ ಮುಂದೆ ಎಲ್ಲರೂ ಸಮಾನರು.ಎಲ್ಲರಿಗೂ ಸಮಾನ ರಕ್ಷಣೆ ಸಿಗುತ್ತದೆ ಎಂದರು. ಸಣ್ಣಪುಟ್ಟ ವಿಚಾರಗಳಿಗೆ ಕಾನೂನನ್ನು ದುರುಪಯೋಗಪಡಿಸಿಕೊಂಡು ಸಂಸಾರ ಹಾಳು ಮಾಡಿ ಕೊಳ್ಳಬೇಡಿ. ಮಕ್ಕಳಿಗೆ ಶಿಕ್ಷಣ ಕೊಡಿಸಿ ಅವರ ಭವಿಷ್ಯ ರೂಪಿಸಬೇಕು. ಬಾಲ್ಯವಿವಾಹ ನಿಲ್ಲಿಸಬೇಕು. ವರದಕ್ಷಿಣೆ ಕೇಳುವುದು, ಕೊಡುವುದು, ತೆಗೆದುಕೊಳ್ಳುವುದು ಅಪರಾಧವಾಗಿದೆ. ಎಂದರು.



ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ.ಟ್ರಸ್ಟ್‌ನ ಜಿಲ್ಲಾ ನಿರ್ದೇಶಕ ಎ.ದಿನೇಶ್ ಮಾತನಾಡಿ. ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ.ಟ್ರಸ್ಟ್, ಈ ಭಾಗಕ್ಕೆ ಬಂದು 12 ವರ್ಷಗಳು ಆಗಿದೆ. ಭಾರತದ ಸಂಸ್ಕೃತಿಯಲ್ಲಿ ಮಹಿಳೆಯರಿಗೆ ವಿಶೇಷ ಸ್ಥಾನಮಾನ ನೀಡಲಾಗಿದೆ. ಅನಾದಿಕಾಲದಿಂದಲ್ಲೂ ಮಹಿಳೆಯರು ಮೊದಲ ಗುರು ಎಂದರು. ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ಈ ಭಾಗದಲ್ಲಿ ಅನೇಕ ಸಹಾಯ ಸಂಘಗಳನ್ನು ಮಾಡಿ, ಆರ್ಥಿಕ ವ್ಯವಹಾರಗಳನ್ನು ತಿಳಿಸಿಕೊಟ್ಟಿದೆ. ಪದ್ಮವಿಭೂಷಣ ಡಾ.ಡಿ.ವೀರೇಂದ್ರ ಹೆಗ್ಗಡೆಯವರು ಹಾಗೂ ಡಾ. ಹೇಮಾವತಿ ವಿರೇಂದ್ರ ಹೆಗ್ಗಡೆಯವರು ಗ್ರಾಮೀಣ ಪ್ರದೇಶ ಹೆಣ್ಣು ಮಕ್ಕಳು ತಮ್ಮ ಜೀವನವನ್ನು ತಮ್ಮ ಕಾಲಮೇಲೆ ನಡೆಸಿ, ಆರ್ಥಿಕ ಸ್ವಾವಲಂಬಿಯಾಗಬೇಕು. ಎಂಬ ಉದ್ದೇಶದಿಂದ ಜ್ಞಾ ವಿಕಾಸ ಕಾರ್ಯಕ್ರಮ ಮಾಡಿದರು. ತಾಲೂಕಿನಲ್ಲಿ 25 ಕೇಂದ್ರಗಳನ್ನು ಮಾಡಿ ಆರೋಗ್ಯ, ಶಿಕ್ಷಣ, ಪೌಷ್ಟಿಕ ಆಹಾರ, ಸರ್ಕಾರಿ ಸೌಲಭ್ಯಗಳು, ಕಾನೂನು, ಗ್ರಾಮ ನೈರ್ಮಲ್ಯ ಕುರಿತು ಅರಿವು ಮೂಡಿಸಲಾಗುತ್ತದೆ ಎಂದರು. ಸೈಬರ್ ಪೊಲೀಸ್ ಠಾಣೆಯ ಉಪಅಧೀಕ್ಷಕ ಎಂ. ಎಸ್.ಪ್ರವನ್‌ಕುಮಾರ್ ಸೈಬರ್ ಅಪರಾಧಗಳ ಬಗ್ಗೆ ಮಾಹಿತಿ ನೀಡಿದರು. ನಗರಸಭೆ ಸದಸ್ಯ ನೀಲಮ್ಮ ಅಧ್ಯಕ್ಷತೆ ವಹಿಸಿದ್ದರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಿದ್ದಶೆಟ್ಟಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಡಿಯಲ್ಲಿ ಸಿಗುವ ಸೌಲಭ್ಯಗಳು ಮತ್ತು ಪಡೆದುಕೊಳ್ಳುವ ವಿಧಾನಗಳ ಬಗ್ಗೆ ಮಾತನಾಡಿದರು. ಕಾರ್ಯಕ್ರಮದಲ್ಲಿ ತಾಲೂಕು ಯೋಜನಾಧಿಕಾರಿ ರವಿಚಂದ್ರ , ಪ್ರಾದೇಶಿಕ ವ್ಯಾಪ್ತಿಯ ಯೋಜನಾಧಿಕಾರಿ ಮೂಕಾಂಬಿಕ ಸಮನ್ವಯಾಧಿಕಾರಿ ಅನಿತಾ, ಮೇಲ್ವಿಚಾರಕರು, ಸೇವಾ ಪ್ರತಿನಿಧಿ ಭಾಗವಹಿಸಿದ್ದರು.

# ಹೊಯ್ಸಳ ಮತ್ತು ಕೆಳದಿ ಚೆನ್ನಮ್ಮ ಪ್ರಶಸ್ತಿಗೆ ಅರ್ಜಿ ಆಹ್ವಾನ

ಮೈಸೂರು:- ಕರ್ನಾಟಕ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವತಿಯಿಂದ 2026-27ನೇ ಸಾಲಿನ ಹೊಯ್ಸಳ ಮತ್ತು ಕೆಳದಿ ಚೆನ್ನಮ್ಮ ರಾಜ್ಯ ಪ್ರಶಸ್ತಿಗಾಗಿ ಅರ್ಹ ಮಕ್ಕಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ನಾವೀನ್ಯತೆ ಮತ್ತು ತಾರ್ಕಿಕ ಸಾಧನೆ ಕ್ಷೇತ್ರಗಳಲ್ಲಿ ಅಸಾಧಾರಣ ಸಾಧನೆ ಮಾಡಿದ 05 ರಿಂದ 18 ವರ್ಷದೊಳಗಿನ ಬಾಲಕರಿಗೆ ಈ ಪ್ರಶಸ್ತಿಯನ್ನು ನೀಡಲಾಗುತ್ತಿದ್ದು, ಸದರಿ 02 ಕ್ಷೇತ್ರಗಳಿಂದ ಪ್ರಶಸ್ತಿಗೆ ಆಯ್ಕೆಯಾಗುವ ಮಕ್ಕಳಿಗೆ ತಲಾ ರೂ.10,000 ಗಳ ನಗದು ಬಹುಮಾನ ಮತ್ತು ಪ್ರಶಸ್ತಿ ಪತ್ರ ನೀಡಿ ಗೌರವಿಸಲಾಗುತ್ತದೆ.

ಅರ್ಹ ಮಕ್ಕಳು ಅಕ್ಟೋಬರ್ 03 ರ ಸಂಜೆ 5.30 ರೊಳಗೆ ಉಪ ನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸ್ತ್ರೀಶಕ್ತಿ ಭವನ, ಕೃಷ್ಣದೇವರಾಯ ವೃತ್ತ, ವಿಜಯನಗರ 2ನೇ ಹಂತ, ಮೈಸೂರು-17 ಇಲ್ಲಿ ಅರ್ಜಿ ನಮೂನೆಯನ್ನು ಪಡೆದು ಕನ್ನಡ ಭಾಷೆಯಲ್ಲಿ ಭರ್ತಿ ಮಾಡಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 0821-2495432 ನ್ನು ಸಂಪರ್ಕಿಸಬಹುದೆಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ

# ಜಿಲ್ಲಾದ್ಯಂತ ಎ.ಎನ್.ಪಿ.ಆರ್. ಕ್ಯಾಮೆರಾಗಳ ಅಳವಡಿಕೆ; ವಾಹನ ಸವಾರರೇ ಎಚ್ಚರ




ಚಾಮರಾಜನಗರ: ಸಾರ್ವಜನಿಕ ಸುರಕ್ಷತೆ ಹಾಗೂ ರಸ್ತೆ ಸಂಚಾರವನ್ನು ಸುಗಮಗೊಳಿಸುವ ಉದ್ದೇಶದಿಂದ ಚಾಮರಾಜನಗರ ಜಿಲ್ಲಾ ಪೊಲೀಸ್ ವತಿಯಿಂದ ಜಿಲ್ಲೆಯಾದ್ಯಂತ ಎ.ಎನ್.ಪಿ.ಆರ್. (ಂಣಣಂಟಚಿಣುಛಿ ಓಣಟಭಜಡಿ ಕಟಚಿಣಜ ಖಜಛಿಠಿರಂಟಿಣುಐಂಟಿ) ಕ್ಯಾಮೆರಾಗಳನ್ನು ಪ್ರಮುಖ ಹೆದ್ದಾರಿಗಳಲ್ಲಿ ಅಳವಡಿಸಲಾಗಿದೆ.

ಎ.ಎನ್.ಪಿ.ಆರ್ ಕ್ಯಾಮೆರಾಗಳ ಮೂಲಕ ವಾಹನಗಳ ನಂಬರ್ ಪ್ಲೇಟ್‌ಗಳನ್ನು ಸ್ವಯಂ ಚಾಲಿತವಾಗಿ ಗುರುತಿಸಿ ಸಂಚಾರಿ ಉಲ್ಲಂಘನೆಗಳನ್ನು ಪರಿಣಾಮಕಾರಿಯಾಗಿ ಪತ್ತೆಹಚ್ಚಲು ಹಾಗು ಅಗತ್ಯ ಕಾನೂನು ಕ್ರಮ ಕೈಗೊಳ್ಳಲು ಇದು ಸಹಕಾರಿಯಾಗಿರುತ್ತದೆ. ವಿಶೇಷವಾಗಿ ಹೆಲ್ಮೆಟ್ ಧರಿಸದೆ, ಸೀಟ್ ಬೆಲ್ಟ್ ಧರಿಸದೇ, ದ್ವಿಚಕ್ರವಾಹನದಲ್ಲಿ ಇಬ್ಬರಿಗಿಂತ ಹೆಚ್ಚು ಜನರು ಸವಾರಿಮಾಡುವುದು, ವಾಹನ ಚಾಲನೆ ಮಾಡುವಾಗ ಮೊಬೈಲ್ ಫೋನ್ ಬಳಕೆಮಾಡಿ ಸಂಚಾರಿ ನಿಯಮಗಳನ್ನು ಉಲ್ಲಂಘನೆಮಾಡುವ ವಾಹನ ಚಾಲಕರುಗಳನ್ನು ವಿಶೇಷವಾಗಿ ಗುರುತಿಸಿ ಸದರಿ ವಾಹನಗಳ ಮಾಲೀಕರ ವಿಳಾಸಕ್ಕೆ ದಂಡ ವಿಧಿಸಿದ ಪೊಲೀಸ್ ನೋಟೀಸ್‌ಗಳನ್ನು ಅಂಚೆ ಮೂಲಕ ಕಳುಹಿಸಲಾಗುವುದು ಹಾಗೂ ವಾಹನ ಮಾಲೀಕರ ಮೊಬೈಲ್ ಸಂಖ್ಯೆಗೆ ದಂಡ ವಿಧಿಸಿರುವ ಬಗ್ಗೆ ಎಸ್.ಎಂ.ಎಸ್. ಮೂಲಕ ಮಾಹಿತಿ ನೀಡಲಾಗುವುದು.

ಎ.ಎನ್.ಪಿ.ಆರ್. ಕ್ಯಾಮೆರಾ ವ್ಯವಸ್ಥೆಯು ವಾಹನಗಳ ಸಂಚಾರವನ್ನು ಪರಿಣಾಮಕಾರಿಯಾಗಿ ಮೇಲ್ವಿಚಾರಣೆ ಮಾಡುವುದರ ಜೊತೆಗೆ ಕಳುವಾದ ವಾಹನಗಳು ಹಾಗೂ ಕಾನೂನು ಬಾಹಿರ ಚಟುವಟಿಕೆಗಳಿಗೆ ಸಂಬಂಧಿಸಿದ ವಾಹನಗಳನ್ನು ಪತ್ತೆಹಚ್ಚಲು ಸಹಾ ನೆರವಾಗುತ್ತದೆ.

ಸಾರ್ವಜನಿಕರು ಸಂಚಾರಿ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಿ ಹೆಲ್ಮೆಟ್ ಮತ್ತು ಸೀಟ್ ಬೆಲ್ಟ್ ಧರಿಸಿ, ವೇಗದ ಮಿತಿಯನ್ನು ಪಾಲಿಸಿ, ವಾಹನ ಚಾಲನೆ ಮಾಡುವಾಗ ಮೊಬೈಲ್ ಫೋನ್ ಬಳಸದೇ ಸುರಕ್ಷಿತವಾಗಿ ಸಂಚರಿಸಿ ಎಂಬ ಸಂದೇಶದ ಮೂಲಕ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಮುತ್ತುರಾಜು ಅವರು ಸಾರ್ವಜನಿಕರಿಗೆ ಸೂಚನೆ ನೀಡಿರುತ್ತಾರೆ.

# ಧಮ್ಮದ ಹಾದಿಯಲ್ಲಿ ನಡೆದರೆ ಬದುಕಿಗೆ ಶಾಂತಿ

**ಸುಭಾಷ್ ಮಾಡ್ರಹಳ್ಳಿ ಅಭಿಮತ | ಗುಂಡ್ಲುಪೇಟೆಯಲ್ಲಿ ಧಮ್ಮ ಪಯಣ ಜಾಗೃತಿ ಜಾಥಾ**




ಗುಂಡ್ಲುಪೇಟೆ: ಭಗವಾನ್ ಬುದ್ಧರ ಶಾಂತಿ, ಕರುಣೆ ಹಾಗೂ ಮೈತ್ರಿಯ ಸಂದೇಶವನ್ನು ಸಮಾಜದಲ್ಲಿ ಪಸರಿಸುವ ಮೂಲಕ ನೆಮ್ಮದಿಯ ಬದುಕು ಕಟ್ಟಿಕೊಳ್ಳಲು ಸಾಧ್ಯ. ಅಂತರರಾಷ್ಟ್ರೀಯ ಮಹಾ ಬೌದ್ಧ ಸಮ್ಮೇಳನವು ಈ ಸಂದೇಶವನ್ನು ಜನರಿಗೆ ತಲುಪಿಸುವ ವೇದಿಕೆಯಾಗಲಿದೆ ಎಂದು ಅಂತರರಾಷ್ಟ್ರೀಯ ಮಹಾ ಬೌದ್ಧ ಸಮ್ಮೇಳನ ಆಚರಣಾ ಸಮಿತಿ ಸದಸ್ಯ ಸುಭಾಷ್ ಮಾಡ್ರಹಳ್ಳಿ ಹೇಳಿದರು.

ತಾಲ್ಲೂಕಿನ ಪಡಗೂರು ಗ್ರಾಮ ವ್ಯಾಪ್ತಿಯಲ್ಲಿ ಅಂತರರಾಷ್ಟ್ರೀಯ ಮಹಾ ಬೌದ್ಧ ಸಮ್ಮೇಳನದ ಅಂಗವಾಗಿ ನಡೆಯುತ್ತಿರುವ 'ಧಮ್ಮ ಪಯಣ' ಜಾಗೃತಿ ಜಾಥಾದ ನೇತೃತ್ವ ವಹಿಸಿ ಅವರು ಮಾತನಾಡಿದರು.

ಭಗವಾನ್ ಬುದ್ಧರ ಶಾಂತಿ, ಕರುಣೆ ಮತ್ತು ಮೈತ್ರಿ ಮನೋಭಾವ ಸಮಾಜಕ್ಕೆ ತಂಗಾಳಿಯಂತೆ ನೆಮ್ಮದಿ ನೀಡುತ್ತದೆ. ಇಂತಹ ಮಾನವೀಯ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಅಗತ್ಯವಿದೆ. ಇದೇ ಕಾರಣಕ್ಕಾಗಿ ಡಾ. ಬಿ.ಆರ್. ಅಂಬೇಡ್ಕರ್ ಅವರು ಜನರಿಗೆ ಧಮ್ಮದ ಹಾದಿಯನ್ನು ತೋರಿಸಿಕೊಟ್ಟಿದ್ದಾರೆ ಎಂದರು.

**ಧಮ್ಮದ ಮಾರ್ಗವೇ ನೆಮ್ಮದಿಯ ಬದುಕಿಗೆ ದಾರಿ**

ಪೂಜ್ಯ ಸುಗಾತಪಾಲ ಭಂತೇಜಿ ಮಾತನಾಡಿ, ತಿಸರಣ ಹಾಗೂ ಪಂಚಶೀಲಗಳು ನಮ್ಮ ಬದುಕಿಗೆ ಅಮೂಲ್ಯ ರತ್ನಗಳಿದ್ದಂತೆ. ಜ್ಞಾನ, ಸತ್ಯ ಮತ್ತು ಸಂಘದ ಮಾರ್ಗದಲ್ಲಿ ನಡೆಯುವ ಮೂಲಕ ಉತ್ತಮ ಜೀವನ ರೂಪಿಸಿಕೊಳ್ಳಬೇಕು. ದುರ್ಮಾರ್ಗದ ಬದುಕು ನೆಮ್ಮದಿಯನ್ನು ಕಸಿದುಕೊಳ್ಳುತ್ತದೆ. ಆದ್ದರಿಂದ ಧಮ್ಮದ ಮಾರ್ಗವನ್ನು ಅನುಸರಿಸುವ ಮೂಲಕ ಶಾಂತಿ ಮತ್ತು ನೆಮ್ಮದಿಯ ಬದುಕು ಕಟ್ಟಿಕೊಳ್ಳಬೇಕು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಸಹಾಯಕ ನಿರ್ದೇಶಕ ನಂಜುಂಡಯ್ಯ, ನಿವೃತ್ತ ಉಪನ್ಯಾಸಕ ಮಹದೇವಯ್ಯ ಹುಲಸುಗುಂದಿ, ನಿವೃತ್ತ ಸಹಾಯಕ ಸಬ್‌ಇನ್ಸ್‌ಪೆಕ್ಟರ್ ಕೃಷ್ಣಮೂರ್ತಿ, ಮಾಜಿ ಗ್ರಾ.ಪಂ. ಅಧ್ಯಕ್ಷೆ ಸರೋಜ, ಮಾಜಿ ಸದಸ್ಯ ಮನು, ನವೀನ್, ಮಹದೇವ, ಕರಿಯಪ್ಪ, ಸುರೇಶ್, ಚಿಕ್ಕಮುದ್ದಯ್ಯ, ಪ್ರಸಾದ್, ನಟರಾಜ್, ವಿಷಕಂಠ ಸೇರಿದಂತೆ ಹಿರಿಯ ಮುಖಂಡರು ಹಾಗೂ ಹಲವರು ಉಪಸ್ಥಿತರಿದ್ದರು.

# 26ಕ್ಕೆ ಡಾ.ಅರ್ಜುನಪುರಿ ಅಪ್ಪಾಜಿಗೌಡ, ಡಾ.ಪಾ.ಶ.ಶ್ರೀನಿವಾಸ ದತ್ತಿ ಪ್ರಶಸ್ತಿ ಪ್ರದಾನ

ಮಂಡ್ಯ:ಡಾ.ಅರ್ಜುನಪುರಿ ಅಪ್ಪಾಜಿಗೌಡ ಅಭಿಮಾನಿ ಬಳಗ, ಶ್ರೀಮತಿ ಸುಶೀಲಾ ಮತ್ತು ಡಾ. ಪಾ.ಶ. ಶ್ರೀನಿವಾಸ ಅಭಿಮಾನಿ ಬಳಗ ಹಾಗೂ ಕರ್ನಾಟಕ ಅಖಿಲ ಕರ್ನಾಟಕ ಕರಾವಳಿ ಸಾಂಸ್ಕೃತಿಕ ಒಕ್ಕೂಟ (ರಿ.), ಮಂಡ್ಯ ಇವರ ಸಹಯೋಗದಲ್ಲಿ ಡಾ. ಅರ್ಜುನಪುರಿ ಅಪ್ಪಾಜಿಗೌಡ ಸ್ಮಾರಕ 10ನೇ ದತ್ತಿ ಪ್ರಶಸ್ತಿ ಮತ್ತು ಶ್ರೀಮತಿ ಸುಶೀಲಾ ಹಾಗೂ ಡಾ. ಪಾ.ಶ. ಶ್ರೀನಿವಾಸ ಸ್ಮಾರಕ 7ನೇ ದತ್ತಿ ಪ್ರಶಸ್ತಿ ಪ್ರದಾನ ಸಮಾರಂಭವು ಸೆ. 29ರ ಶನಿವಾರ ಬೆಳಿಗ್ಗೆ 11 ಗಂಟೆಗೆ ನಗರದ ಗಾಂಧಿಭವನದಲ್ಲಿ ನಡೆಯಲಿದೆ.

ಸಮಾರಂಭದ ಅಧ್ಯಕ್ಷತೆಯನ್ನು ಪಿಇಟಿ ಸಮೂಹ ಸಂಸ್ಥೆಯ ನಿರ್ದೇಶಕರು ಹಾಗೂ ಪ್ರಶಸ್ತಿ ಸಮಿತಿ ಅಧ್ಯಕ್ಷರಾದ ಡಾ. ರಾಮಲಿಂಗಯ್ಯ ವಹಿಸಲಿದ್ದಾರೆ.ಡಾ. ಅರ್ಜುನಪುರಿ ಅಪ್ಪಾಜಿಗೌಡ ಪತ್ರಕರ್ತರ ಪ್ರಶಸ್ತಿಗೆ ಮದ್ದೂರಿನ ಹಿರಿಯ ಪತ್ರಕರ್ತರಾದ ಶಿವನಂಜಯ್ಯ ಮತ್ತು ಡಾ. ಪಾ.ಶ. ಶ್ರೀನಿವಾಸ ಸಾಹಿತ್ಯ ಪ್ರಶಸ್ತಿಗೆ ಚಿಂತಕರು ಹಾಗೂ ಲೇಖಕರಾದ ಶ್ರೀಮತಿ ಕೆ. ಲಕ್ಷ್ಮಿ ಅವರನ್ನು ಆಯ್ಕೆ ಮಾಡಲಾಗಿದೆ. ಪ್ರಖ್ಯಾತ ಶಸ್ತ್ರ ತಜ್ಞ ವೈದ್ಯರಾದ ಡಾ. ನಂದೀಶ್ ವಿ.ಎಲ್. ಅವರು ಪ್ರಶಸ್ತಿ ವಿತರಣೆ ಮಾಡಲಿದ್ದು, ನಿವೃತ್ತ ವಿಷಯ ಪರಿವೀಕ್ಷಕರಾದ ನಂಜರಾಜು ಅಭಿನಂದನಾ ನುಡಿಗಳನ್ನಾಡಲಿದ್ದಾರೆ. ಕರಾವಳಿ ಒಕ್ಕೂಟದ ಅಧ್ಯಕ್ಷರಾದ ಸುಧಾಕರಶೆಟ್ಟಿ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಇದೇ ವೇದಿಕೆಯಲ್ಲಿ ಡಾ. ಪ್ರದೀಪ್‌ಕುಮಾರ್ ಹೆಬ್ರಿ ಅವರ "ಸಾಹಿತ್ಯವೇ ಬದುಕ ರಸದೌತಣ" ಕೃತಿಯನ್ನು ಸಾಹಿತಿ ಡಾ.ಎಸ್. ಶ್ರೀನಿವಾಸ ಶೆಟ್ಟಿ ಅವರು ಲೋಕಾರ್ಪಣೆ ಮಾಡಲಿದ್ದಾರೆ.

# ಕಾಯಿಲೆ ಪತ್ತೆಗೆ ಹೊಸ ಆಶಾಕಿರಣ




ಮೈಸೂರು: ಅಲ್ಜೈಮರ್ಸ್ ಕಾಯಿಲೆ ಹಾಗೂ ಡಿಮೆನ್ಷಿಯಾದ ಆರಂಭಿಕ ಹಂತವನ್ನು ಗುರುತಿಸುವಲ್ಲಿ ಇತ್ತೀಚಿನ ರಕ್ತ ಆಧಾರಿತ ಬಯೋ ಮಾರ್ಕರ್ ಪರೀಕ್ಷೆಗಳು ಮಹತ್ವದ ಬೆಳವಣಿಗೆಯಾಗಿವೆ ಎಂದು ನವದೆಹಲಿ ಅಲ್ಜೈಮರ್ಸ್ ಅಂಡ್ ರಿಲೇಟೆಡ್ ದಿಸೋರ್ಡರ್ಸ್ ಸೊಸೈಟಿ ಆಫ್ ಇಂಡಿಯಾ ರಾಷ್ಟ್ರೀಯ ಕಾರ್ಯದರ್ಶಿ ಹಾಗೂ ಮೈಸೂರು ಘಟಕದ ಅಧ್ಯಕ್ಷ ಡಾ. ಹನುಮಂತಾಚಾರ್ ಜೋಶಿ ಹೇಳಿದರು.

ರೋಟರಿ ಮೈಸೂರು ನಲ್ಲಿ ವಿಶ್ವ ಅಲ್ಜೈಮರ್ಸ್ ದಿನಾಚರಣೆಯನ್ನು ಆಯೋಜಿಸಿದ್ದ ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಮಾತನಾಡಿದರು. ವಿಶೇಷವಾಗಿ ರಕ್ತದಲ್ಲಿನ ಕೆಲ ಜೈವಿಕ ಸೂಚಕಗಳ ಪ್ರಮಾಣವನ್ನು ಅಳೆಯುವ ಪರೀಕ್ಷೆಗಳು ಅಲ್ಜೈಮರ್ಸ್ ಕಾಯಿಲೆಗೆ ಸಂಬಂಧಿಸಿದ ಮೆದುಳಿನ ಬದಲಾವಣೆಗಳನ್ನು ಗುರುತಿಸಲು ನೆರವಾಗುತ್ತಿವೆ. ಅಲ್ಜೈಮರ್ಸ್ ಕಾಯಿಲೆಯಲ್ಲಿ ಮೆದುಳಿನಲ್ಲಿ ಉಂಟಾಗುತ್ತವೆ. ಈ ಬದಲಾವಣೆಗಳು ನೆನಪಿನ ಶಕ್ತಿ ಮತ್ತು ಚಿಂತನಾ ಸಾಮರ್ಥ್ಯ ಕುಸಿಯುವ ಮುನ್ನವೇ ಆರಂಭವಾಗಬಹುದು ಎಂದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಮಹಾರಾಜ ತಾಂತ್ರಿಕ ಸಂಸ್ಥೆ ಪ್ರಾಂಶುಪಾಲ ಮುರುಳಿ ಮರಗುಣಿತನ ತುಂಬಾ ಅಪಾಯಕಾರಿಯಾಗಿದೆ. ಹಲವಾರು ಹಿರಿಯರು ಚಿಕ್ಕಪುಟ್ಟ ಕಾರ್ಯಗಳನ್ನು ಮಾಡಲು ಕಷ್ಟಪ ಡುತ್ತಾರೆ. ವ್ಯಕ್ತಿಗೆ ತನ್ನ ಇರುವಿಕೆಯ ನೆನಪೆ ಇಲ್ಲದಿದ್ದರೆ ಜೀವನ ತುಂಬಾ ಕಷ್ಟವಾಗುತ್ತದೆ ಎಂದರು.

ಡಾ.ಎಸ್.ಪಿ.ಯೋಗಣ್ಣ ಮಾತನಾಡಿ ಈಗೀಗ ಡಿಮನ್ಸಿಯ ರೋಗಿಗಳ ಸಂಖ್ಯೆ ಹೆಚ್ಚಾಗುತ್ತಿದ್ದು ದೈನಂದಿನ ಚಟುವಟಿಕೆಗಳಲ್ಲಿ ನಾವು ಸಾಮಾಜಿಕ ಜಾಲತಾಣಗಳು ಮೊಬೈಲ್ ಫೋನ್ನ ಅತಿಯಾದ ಉಪಯೋಗ ಕಾರಣವಾಗುತ್ತಿದೆ. ಆರಂಭಿಕ ಹಂತದಲ್ಲೇ ಇದನ್ನು ಗುರಿತಿಸದಿದ್ದರೆ ಇದೊಂದು ಸಾಮಾಜಿಕ ಪಿಡುಗಾಗುವ ಸಾಧ್ಯತೆಗಳಿದೆ ಎಂದು ಹೇಳಿದರು.

# ಪೌರಕಾರ್ಮಿಕರ ಸೇವೆ ಅನನ್ಯ



ಚಾಮರಾಜನಗರ: ಸಮಾಜದ ಆರೋಗ್ಯ ಮತ್ತು ಸ್ವಚ್ಛತೆಗಾಗಿ ದಿನವಿಡೀ ನಿರಂತರ ಶ್ರಮಿಸುವ ಪೌರಕಾರ್ಮಿಕರ ಸೇವೆ ಅನನ್ಯ ಎಂದು ಜಿಲ್ಲಾಧಿಕಾರಿ ಶ್ರೀರೂಪ ಹೇಳಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಪೌರಕಾರ್ಮಿಕರ ದಿನಾಚರಣೆ ಅಂಗವಾಗಿ ಜಿಲ್ಲಾಡಳಿತ ಮತ್ತು ಜಿಲ್ಲಾ ನಗರಾಭಿವೃದ್ಧಿ ಕೋಶ, ನಗರಸಭೆ ವತಿಯಿಂದ ನಡೆದ ಪೌರಕಾರ್ಮಿಕರ ಕ್ರೀಡಾಕೂಟಕ್ಕೆ ಚಾಲನೆ ನೀಡಿ ಮಾತನಾಡಿ.ಪೌರಕಾರ್ಮಿಕರ ಕಠಿಣ ಪರಿಶ್ರಮದಿಂದ ಪಟ್ಟಣದಲ್ಲಿ ಸ್ವಚ್ಛ ವಾತಾವರಣ ನೆಲೆಸಿದೆ. ಎಲ್ಲ ಪೌರಕಾರ್ಮಿಕರು ಅತ್ಯಂತ ಸಂಭ್ರಮ ಹಾಗೂ ಲವಲವಿಕೆಯಿಂದ ಸ್ಪರ್ಧೆಗಳಲ್ಲಿ ಪಾಲ್ಗೊಂಡಿರುವುದು ಸಂತಸ ತಂದಿದೆ. ಎಲ್ಲರಿಗೂ ಶುಭವಾಗಲಿ ಎಂದು ಪೌರಕಾರ್ಮಿಕ ದಿನಾಚರಣೆ ಶುಭಾಶಯ ಕೋರಿದರು.

ಪುರುಷ ಹಾಗೂ ಮಹಿಳಾ ಪೌರಕಾರ್ಮಿಕರಿಗಾಗಿ ಮ್ಯೂಸಿಕಲ್ ಚೇರ್, ಲೆಮನ್ ಸ್ಪೂನ್, ಗುಂಡು ಎಸೆತ ಹಾಗೂ ಮಹಿಳೆಯರ ಓಟದ ಸ್ಪರ್ಧೆ ಸೇರಿದಂತೆ ಮುಂತಾದ ಆಟೋಟ ಸ್ಪರ್ಧೆ ಆಯೋಜಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಪೌರಾಯುಕ್ತ ಪರಶುರಾಮ ಛಲವಾದಿ, ಆರೋಗ್ಯ ಅಧಿಕಾರಿ ಮಂಜುನಾಥ್, ಪುಷ್ಪಾ, ಎಇಇ ರೂಪ, ವ್ಯವಸ್ಥಾಪಕ ಸುಧಾರಾಣಿ, ಸಿನಿಯರ್ ಪ್ರೋಗ್ರಾಮ್ ಸಿದ್ದಪ್ಪಾಜಿ, ಲೆಕ್ಕಾ ಪರಿಶೋಧಕಿ ಮಂಗಳಗೌರಿ, ದ್ವಿತೀಯ ದರ್ಜೆ ಸಹಾಯಕ ಚಿತ್ರ, ಕ್ರೀಡಾ ಸಮಿತಿ ಸದಸ್ಯ ವಿ.ಶ್ರೀ ನಿವಾಸಪ್ರಸಾದ್, ಪೌರ ಸೇವಾ ನೌಕರರ ಸಂಘದ ಅಧ್ಯಕ್ಷ ಪಳನಿಸ್ವಾಮಿ ನಿತಿನ್, ಪ್ರಸಾದ್, ಎಲ್ಲಾ ಸಿಬ್ಬಂದಿವರ್ಗ ಹಾಗೂ ಪೌರಕಾರ್ಮಿಕರು ಹಾಜರಿದ್ದರು.

# ಡಿಸಿಸಿ ಬ್ಯಾಂಕ್‌ಗೆ 5.70 ಕೋಟಿ ಲಾಭ

## ಆರ್ಥಿಕ ಸಾಧನೆ, ಲಾಭದ ವಿವರ | ಚಾ.ನಗರದಲ್ಲಿ ಪ್ರಥಮ ವಾರ್ಷಿಕ ಮಹಾಸಭೆ

ಚಾಮರಾಜನಗರ: ನಗರದ ನಂದಿ ಭವನದಲ್ಲಿ ಪ್ರಥಮವಾಗಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನ 2025-26ನೇ ಸಾಲಿನ ಸರ್ವ ಸದಸ್ಯರ 72ನೇ ವಾರ್ಷಿಕ ಮಹಾಸಭೆಯನ್ನು ಆಯೋಜಿಸಲಾಗಿತ್ತು.

ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಬ್ಯಾಂಕಿನ ಅಧ್ಯಕ್ಷ ದೊಡ್ಡಸ್ವಾಮೇಗೌಡ ಅವರು, ಪ್ರಸ್ತುತ ವರ್ಷದಲ್ಲಿ ಬ್ಯಾಂಕಿನ 31 ಶಾಖೆಗಳಲ್ಲಿ ರೂ. 1083.87 ಕೋಟಿ ಠೇವಣಿ ಹಾಗೂ ರೂ. 101.05 ಕೋಟಿ ಷೇರು ಬಂಡವಾಳ ಹೊಂದಲಾಗಿದೆ. ರೂ. 2071.36 ಕೋಟಿ ಕೃಷಿ ಮತ್ತು ಕೃಷಿಯೇತರ ಸಾಲ ಹೊರಬಾಕಿ ಇದ್ದು, ಬ್ಯಾಂಕು 2025-26ನೇ ಸಾಲಿಗೆ ರೂ. 5.70 ಕೋಟಿ ನಿವ್ವಳ ಲಾಭ ಗಳಿಸಿದೆ. ಸಹಕಾರಿ ಬ್ಯಾಂಕಿಂಗ್ ಉದ್ದಿಮೆಗೆ ಅನೇಕ ಸ್ಪರ್ಧೆಗಳು ಎದುರಾಗಿದ್ದರೂ, ಬ್ಯಾಂಕು ತನ್ನ ಹಣಕಾಸು ಸಾಮರ್ಥ್ಯವನ್ನು ಬಲಪಡಿಸಿಕೊಂಡು ಪ್ರಗತಿ ಪಥದಲ್ಲಿ ಸಾಗುತ್ತಿದೆ. ಚಾಮರಾಜನಗರ ಜಿಲ್ಲೆಯಲ್ಲಿ ಪ್ರಥಮ



ವಾಗಿ ವಾರ್ಷಿಕ ಮಹಾಸಭೆಯನ್ನು ಆಯೋಜನೆ ಮಾಡಿರುವುದು ಸಂತಸ ತಂದಿದೆ ಎಂದು ಹರ್ಷ ವ್ಯಕ್ತಪಡಿಸಿದರು.

**ವಾರ್ಷಿಕ ವರದಿ ಮಂಡನೆ**

ಸಭೆಯಲ್ಲಿ ಕೇಂದ್ರ ಬ್ಯಾಂಕಿನ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಡಾ. ಶಂಕರ್ ಬಲ್ಲೇನಹಳ್ಳಿ ಅವರು ವಾರ್ಷಿಕ ವರದಿಯನ್ನು ಮಂಡಿಸಿ ಅನುಮೋದನೆ ಪಡೆದುಕೊಂಡರು. ಈ ವಾರ್ಷಿಕ

### ಕೃಷಿ ಹಾಗೂ ಕೃಷಿಯೇತರ ಕ್ಷೇತ್ರಗಳಿಗೆ ಸಾಲ ಸೌಲಭ್ಯ

ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ 30 ಸಾವಿರ ರೂ. ಷೇರು ಬಂಡವಾಳದೊಂದಿಗೆ 1955ನೇ ಸಾಲಿನಲ್ಲಿ ಪ್ರಾರಂಭವಾಯಿತು. ಮೈಸೂರಿನಲ್ಲಿ ಕೇಂದ್ರ ಕಚೇರಿಯನ್ನು ಹೊಂದಿರುವ ಈ ಬ್ಯಾಂಕು, ಬಹುಮುಖ್ಯವಾಗಿ ಕೃಷಿ ಕ್ಷೇತ್ರಕ್ಕೆ ಹೆಚ್ಚಿನ ಸಾಲ ಸೌಲಭ್ಯ ನೀಡುತ್ತಿದೆ. 2025-26ನೇ ಸಾಲಿಗೆ ಎರಡೂ ಜಿಲ್ಲೆಗಳಲ್ಲಿರುವ 293 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ 1,07,476 ರೈತರಿಗೆ ರೂ. 1280.24 ಕೋಟಿ ಶೂನ್ಯ ಬಡ್ಡಿದರದಲ್ಲಿ ಕೃಷಿ ಸಾಲ ಹಾಗೂ ರೂ. 9.35 ಕೋಟಿ ಮಧ್ಯಮಾವಧಿ ಸಾಲವನ್ನು ಶೇ. 3ರ ದರದಲ್ಲಿ ವಿತರಿಸಲಾಗಿದೆ. ಸಂಘಗಳನ್ನು ಬಹುಪಯೋಗಿ ಸೇವಾ ಸಹಕಾರ ಸಂಘಗಳನ್ನಾಗಿ ಪರಿವರ್ತಿಸಲು ಯೋಜನೆ ಜಾರಿಗೆ ತರಲಾಗಿದ್ದು, ಗೋದಾಮು ನಿರ್ಮಾಣ, ಕೃಷಿ ಯಂತ್ರೋಪಕರಣಗಳ ಖರೀದಿ ಹಾಗೂ ಇತರೆ ಉದ್ದೇಶಗಳಿಗಾಗಿ ರೂ. 0.21 ಕೋಟಿ ಸಾಲ ನೀಡಲಾಗಿದೆ. ಇದರೊಂದಿಗೆ ಗೃಹ ನಿರ್ಮಾಣ ಮತ್ತು ಗೃಹ ಖರೀದಿ, ವಾಹನ ಸಾಲ, ವೈಯಕ್ತಿಕ ಸಾಲ, ನಿವೇಶನ ಖರೀದಿ, ಚಿನ್ನಾಭರಣ ಅಡಮಾನ ಹಾಗೂ ಇತರೆ ಕೃಷಿಯೇತರ ಉದ್ದೇಶಗಳಿಗೆ ರೂ. 843.71 ಕೋಟಿ ಸಾಲ ನೀಡಲಾಗಿದೆ. ನಬಾರ್ಡ್ ಹಾಗೂ ರಾಜ್ಯ ಸರ್ಕಾರ ರೂಪಿಸಿದ ಸ್ವ-ಸಹಾಯ ಗುಂಪುಗಳ ರಚನೆ ಹಾಗೂ ಬ್ಯಾಂಕ್ ಸಂಪರ್ಕ ಯೋಜನೆಯಡಿ ಬಹುತೇಕ ಸ್ವ-ಸಹಾಯ ಗುಂಪುಗಳಿಗೆ ರೂ. 9.20 ಕೋಟಿ ಸಾಲ ವಿತರಿಸಲಾಗಿದೆ ಎಂದು ಮಾಹಿತಿ ನೀಡಿದರು.

### ಕೋರ್ ಬ್ಯಾಂಕಿಂಗ್, ತಂತ್ರಜ್ಞಾನ ಅಳವಡಿಕೆ

ಬ್ಯಾಂಕಿನ ವ್ಯವಹಾರಗಳನ್ನು ಸಂಪೂರ್ಣವಾಗಿ ಕೋರ್ ಬ್ಯಾಂಕಿಂಗ್ ತಂತ್ರಜ್ಞಾನದಡಿ ಗಣಕೀಕರಣಗೊಳಿಸಲಾಗಿದ್ದು, ಗ್ರಾಹಕರು ಯಾವುದೇ ಶಾಖೆಯಲ್ಲಾದರೂ ವ್ಯವಹಾರ ನಡೆಸಬಹುದಾಗಿದೆ. ಗ್ರಾಹಕರಿಗೆ ಅನುಕೂಲವಾಗುವಂತೆ ದೇಶಾದ್ಯಂತ ಹಣ ವರ್ಗಾವಣೆ ಮಾಡುವ ಆರ್‌ಟಿಜಿಎಸ್ (RTGS), ನೆಫ್ಟ್ (NEFT), ಪಿಒಎಸ್ (POS), ಮೊಬೈಲ್ ಬ್ಯಾಂಕಿಂಗ್ (Mobile Banking), ಐಎಂಪಿಎಸ್ (IMPS), ಯುಪಿಐ (ಎಟಿಎಂ, ಗೂಗಲ್ ಪೇ, ಫೋನ್ ಪೇ, ಕ್ಯೂಆರ್ ಕೋಡ್) ಸೌಲಭ್ಯಗಳನ್ನು ಒದಗಿಸಲಾಗಿದೆ. ಎರಡು ಜಿಲ್ಲೆಗಳ 279 ಸಂಘಗಳ ಪೈಕಿ 218 ಸಂಘಗಳು 2025-26ನೇ ಸಾಲಿಗೆ ಸಂಪೂರ್ಣ ಗಣಕೀಕರಣಗೊಂಡು ಕಾರ್ಯನಿರ್ವಹಿಸುತ್ತಿವೆ. ಕರ್ನಾಟಕ ರಾಜ್ಯದಲ್ಲೇ ಮೊಟ್ಟಮೊದಲು ಗಣಕೀಕರಣ ಲೆಕ್ಕ ಪರಿಶೋಧನೆಯನ್ನು ಪೂರ್ಣಗೊಳಿಸಿದ್ದಕ್ಕಾಗಿ ಮೈಸೂರು ಜಿಲ್ಲೆಯ ಕೆ.ಆರ್. ನಗರ ತಾಲೂಕಿನ ಚನ್ನಂಗೆರೆ ಮತ್ತು ಚಾಮರಾಜನಗರ ತಾಲೂಕಿನ ಹೆಗ್ಗೋಠಾರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಭಾರತ ಸರ್ಕಾರದ ಸಹಕಾರ ಸಚಿವಾಲಯ ಗುರುತಿಸಿ ಪುರಸ್ಕರಿಸಿದೆ ಎಂದು

### ಸದಸ್ಯರ ಅಸಮಾಧಾನ

ಸದಸ್ಯರ ಪ್ರಶ್ನೆಗಳಿಗೆ ಉತ್ತರಿಸಿದ ಅಧ್ಯಕ್ಷರು, ನಬಾರ್ಡ್ ಸೂಚನೆಯಂತೆ ಚಾಮರಾಜನಗರ ಜಿಲ್ಲೆಗೆ ಪ್ರತ್ಯೇಕ ಬ್ಯಾಂಕ್ ಮಾಡುವ ಪ್ರಕ್ರಿಯೆ ಪ್ರಗತಿಯಲ್ಲಿದೆ ಎಂದು ಭರವಸೆ ನೀಡಿದರು. ಇದಕ್ಕೆ ನಿರ್ದೇಶಕ ಆರ್. ನರೇಂದ್ರ ಧ್ವನಿಗೂಡಿಸಿ, ಈ ಬಾರಿ ಚಾಮರಾಜನಗರದಲ್ಲಿ ಪ್ರತ್ಯೇಕ ಡಿಸಿಸಿ ಬ್ಯಾಂಕ್ ಆಗಲಿದೆ ಎಂದರು. ಚಾಮರಾಜನಗರ ಮತ್ತು ಮೈಸೂರು ನಡುವೆ ತಾರತಮ್ಯ ಮಾಡಲಾಗುತ್ತಿದೆ ಹಾಗೂ ಚಾಮರಾಜನಗರ ಜಿಲ್ಲೆಯ ಸಂಘಗಳಿಗೆ ಸಾಲ ನೀಡುವಲ್ಲಿ ವಿಳಂಬ ಮಾಡಲಾಗುತ್ತಿದೆ ಎಂಬ ಸದಸ್ಯರ ಆರೋಪಕ್ಕೆ, ಲಿಖಿತವಾಗಿ ಅರ್ಜಿ ನೀಡಿದರೆ ಕ್ರಮ ವಹಿಸುವುದಾಗಿ ಅಧ್ಯಕ್ಷರು ತಿಳಿಸಿದರು. ಸಂಘದ ಸದಸ್ಯರಾದ ಕೆರೆಹಳ್ಳಿ ನವೀನ್, ಡಿ. ನಾಗೇಂದ್ರ, ಪು. ಶ್ರೀನಿವಾಸನಾಯಕ, ಪಿ. ವೃಷಭೇಂದ್ರಪ್ಪ, ಕಿಲಕೆರೆ ಬಸವರಾಜು ಮುಂತಾದವರು ಮಾತನಾಡಿ, ಎಂಡಿಸಿಸಿ ಬ್ಯಾಂಕಿನ ಅಧಿಕಾರಿಗಳ ಲೋಪ ಹಾಗೂ ಸಂಘಕ್ಕೆ ಆಗುತ್ತಿರುವ ಅನ್ಯಾಯಗಳ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು. ನಿರ್ದೇಶಕರು ಹಾಗೂ ಅಧ್ಯಕ್ಷರ ಗೌರವಧನ ಹೆಚ್ಚಳ ಮಾಡಿರುವುದು ಸರಿಯಲ್ಲ, ಅದನ್ನು ಕಡಿತಗೊಳಿಸಿ ಷೇರಿಗೆ ಹೆಚ್ಚಿನ ಲಾಭಾಂಶ ನೀಡಬೇಕೆಂದು ಒತ್ತಾಯಿಸಿದರು. ಜೊತೆಗೆ ಬರ ಬಡ್ಡಿ ಹಾಗೂ ಸಾಲ ಮನ್ನಾ ಮಾಡುವಂತೆಯೂ ಆಗ್ರಹಿಸಿದರು.

ಮಹಾಸಭೆಯಲ್ಲಿ ಸಂಘದ ಉಪಾಧ್ಯಕ್ಷ ವೈ.ಎಂ. ಜಯರಾಮು, ನಿರ್ದೇಶಕರುಗಳಾದ ಆರ್. ನರೇಂದ್ರ, ಎಸ್.ಚಂದ್ರಶೇಖರ್, ಬಿ.ಎಸ್.ಸದನಂದ, ಎಂ. ಕೆಂಚಪ್ಪ, ಜಿ.ಎನ್.ಮಂಜುನಾಥ್, ಇ.ಸಿ.ಲೋಕೇಶ್, ಟಿ.ಪಿ.ಬೋರೇಗೌಡ, ಬೀರೇಂದ್ರ, ರಾಜಣ್ಣ, ಕೇಂದ್ರ ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕ ವಿನೋದಕುಮಾರ್ ಹಾಗೂ ಸಂಘದ ಸದಸ್ಯರು ಉಪಸ್ಥಿತರಿದ್ದರು.

# ಚಿರತೆ ದಾಳಿ: ಮೇಕೆಗಳು ಬಲಿ

ಚಾಮರಾಜನಗರ: ಹನೂರು ತಾಲೂಕಿನ ಬಸಪ್ಪನ ದೊಡ್ಡಿ ಗ್ರಾಮದಲ್ಲಿ ಚಿರತೆ ದಾಳಿ ಮಾಡಿ ನಾಲ್ಕು ಮೇಕೆಗಳನ್ನು ಕೊಂದು ಹಾಕಿರುವ ಘಟನೆ ಬುಧವಾರ ಬೆಳಗಿನ ಜಾವ ನಡೆದಿದೆ.ಗ್ರಾಮದ ಶಿವಮ್ಮ, ಗಂಡ ಚೆನ್ನೇಗೌಡ ಎಂಬುವರಿಗೆ ಸೇರಿದ 4 ಮೇಕೆಗಳ ಮೇಲೆ ಚಿರತೆ ದಾಳಿ ಮಾಡಿದೆ.

ಬೆಳಗಿನ ಜಾವ ಮೇಕೆಗಳು ಕೊಟ್ಟಿಗೆಯಲ್ಲಿದ್ದಾಗ ದಾಳಿ ಮಾಡಿ ಕೊಂದು ಹಾಕಿ ಪರಾರಿಯಾಗಿದೆ. ಬೆಳಿಗ್ಗೆ ನೋಡಿದಾಗ ಘಟನೆ ಬೆಳಕಿಗೆ ಬಂದಿದೆ.ಮಾಹಿತಿ ತಿಳಿದು ಸ್ಥಳಕ್ಕೆ ಅರಣ್ಯ ಇಲಾಖೆಯ ಅಧಿಕಾರಿ ಡಿ.ಆರ್.ಓ ನಂದೀಶ್ ಅವರ ತಂಡ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.ಕಳೆದ ಒಂದು ತಿಂಗಳಿನಿಂದ ಈ ಭಾಗದಲ್ಲಿ ಚಿರತೆ ಓಡಾಟ ಹೆಚ್ಚಾಗಿದ್ದು, ಈಗಾಗಲೇ ಹಲವು ಜಾನುವಾರುಗಳ ಮೇಲೆ ದಾಳಿ ನಡೆದಿದೆ. ಆದ್ದರಿಂದ ಕೂಡಲೇ ಚಿರತೆಯನ್ನು ಸೆರೆ ಹಿಡಿಯಲು ಅರಣ್ಯ ಇಲಾಖೆ ಬೋನ್ ಅಳವಡಿಸಬೇಕು ಮತ್ತು ಮೃತ ಮೇಕೆಗಳಿಗೆ ಸೂಕ್ತ ಪರಿಹಾರ ನೀಡಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ. ಸದ್ಯ ಅರಣ್ಯ ಇಲಾಖೆ ಸಿಬ್ಬಂದಿ ಗ್ರಾಮದಲ್ಲಿ ಕಾಲು ಗುರುತುಗಳ ಪರಿಶೀಲನೆ ನಡೆಸುತ್ತಿದ್ದಾರೆ.



# ಗಣೇಶಮೂರ್ತಿ ವಿಸರ್ಜನಾ ಮೆರವಣಿಗೆ



**ಚಾಮರಾಜನಗರ** : ತಾಲೂಕಿನ ಬದನಗುಪ್ಪೆ ಗ್ರಾಮದಲ್ಲಿ ನಾಯಕ ಸಮುದಾಯದ ವತಿಯಿಂದ 21ನೇ ವರ್ಷದ ಗಣೇಶಮೂರ್ತಿ ವಿಸರ್ಜನಾ ಮಹೋತ್ಸವ ಅದ್ದೂರಿಯಾಗಿ ನಡೆಯಿತು.

ಗ್ರಾಮದ ನಾಯಕರ ಬೀದಿಯ ಶ್ರೀರಾಮಮಂದಿರದಲ್ಲಿ ಶ್ರೀ ವಿದ್ಯಾಗಣಪತಿ ಮಂಡಳಿ, ನಾಯಕ ಸಮುದಾಯದ ವತಿಯಿಂದ ಗೌರಿಗಣೇಶ ಹಬ್ಬದ ಅಂಗವಾಗಿ ಪ್ರತಿಷ್ಠಾಪಿಸಿದ ಗಣೇಶಮೂರ್ತಿಗೆ 9 ದಿನಗಳಿಂದ ಪೂಜೆ ಸಲ್ಲಿಸಿ ಇಂದು ತೆರೆದ ಅಲಂಕೃತ ವಾಹನದಲ್ಲಿ ಕೂರಿಸಿ ವಿಶೇಷ ಅಲಂಕಾರ ಮಾಡಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಾಂಸ್ಕೃತಿಕ ಕಲಾತಂಡಗಳೊಂದಿಗೆ ಮೆರವಣಿಗೆ ನಡೆಸಿ, ಬೆಂಡರವಾಡಿ ಕೆರೆಯಲ್ಲಿ ವಿಸರ್ಜಿಸಲಾಯಿತು. ಇದೇ ಸಂದರ್ಭದಲ್ಲಿ ಸಾರ್ವಜನಿಕರಿಗೆ ಪ್ರಸಾದ ವಿತರಿಸಲಾಯಿತು. ಮೆರವಣಿಗೆಯಲ್ಲಿ ಕೇರಳದ ನಾಸಿಕ್ ಡೋಲು, ಬ್ಯಾಂಡ್ ಸೆಟ್ ಹಾಗೂ ವಿವಿಧ ಕಲಾತಂಡಗಳ ಮೆರಗು ನೀಡಿತು. ಮೆರವಣಿಗೆಯಲ್ಲಿ ನಾಯಕ ಜನಾಂಗದ ಯಜಮಾನರುಗಳು ಕುಲಸ್ಥರು ಯುವಕರು ಹಾಗೂ ಗ್ರಾಮಸ್ಥರು ಭಾಗವಹಿಸಿದ್ದರು.

**ಕೆ ವೀರಭದ್ರಸ್ವಾಮಿ ಅಭಿಮತ**

# ಸೌಹಾರ್ದ ಸಹಕಾರ ಸಂಘಗಳಿಂದ ಆರ್ಥಿಕ ಸ್ವಾಸ್ಥ್ಯ

ಚಾಮರಾಜನಗರ, ಚಾಮರಾಜನಗರದ ಶ್ರೀ ಅಕ್ಷಯಶ್ರೀ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಲಿಮಿಟೆಡ್‌ನ. 2025-26ನೇ ಸಾಲಿನ ಸರ್ವಸದಸ್ಯರ ಮಹಾಸಭೆ ಮಂಗಳವಾರ ನಡೆಯಿತು.

ಇಲ್ಲಿನ ಭ್ರಮರಾಂಬ ಬಡಾವಣೆಯಲ್ಲಿರುವ ಸಂಘದ ಕಚೇರಿ ಆವರಣದಲ್ಲಿ ನಡೆದ ಸಭೆಯ ಅಧ್ಯಕ್ಷತೆ ವಹಿಸಿದ್ದ ಸಂಘದ ಅಧ್ಯಕ್ಷ ಕೆ ವೀರಭದ್ರಸ್ವಾಮಿ ಮಾತನಾಡಿ ಸಮಾಜದ ಆರ್ಥಿಕ ಸ್ವಾಸ್ಥ್ಯ ಕಾಪಾಡುವಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರ ಪ್ರಮುಖ ಪಾತ್ರ ವಹಿಸಿದೆ. ಬಡ ಹಾಗು ಮಧ್ಯಮವರ್ಗದ ಜನರ ಆರ್ಥಿಕ ಚಟುವಟಿಕೆಗಳಿಗೆ ಅನುಕೂಲವಾಗುವಂತೆ ನಮ್ಮ ಶ್ರೀ ಅಕ್ಷಯಶ್ರೀ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಲಿಮಿಟೆಡ್ ಸಾಲ ಸೌಲಭ್ಯ ನೀಡುತ್ತಾ ಬಂದಿದೆ. ಕಳೆದ 11 ವರ್ಷಗಳ ಹಿಂದೆ ಸ್ಥಾಪನೆಯಾದ ನಮ್ಮ ಸೌಹಾರ್ದ ಸಹಕಾರಿ ಸಂಘ ನೂರಾರು ಮಂದಿಯ ಜೀವನೋಪಾಯಕ್ಕೆ ಬೆನ್ನೆಲುಬಾಗಿ ನಿಂತಿದೆ ಎಂದರು.




ಸೌಹಾರ್ದ ಸಹಕಾರ ಸಂಘಗಳಿಗೆ ಸರ್ಕಾರದ ಯಾವುದೇ ಸವಲತ್ತು ಸಿಗುವುದಿಲ್ಲ, ಸದಸ್ಯರೇ ಮಾಲೀಕರಾಗಿದ್ದು ಷೇರುದಾರರಾಗುವ ಮೂಲಕ ಹಾಗು ನಿಶ್ಚಿತ ಠೇವಣೆ ಹಾಗು ಪಿಗ್ಮಿ ಕಟ್ಟುವ ಮೂಲಕ ಸೌಹಾರ್ದ ಸಹಾಕಾರ ಸಂಘಗಳನ್ನು ಇನ್ನಷ್ಟು ಬಲಗೊಳಿಸಬೇಕು ಎಂದು ಅವರು ಮನವಿ ಮಾಡಿದರು. ರಾಜ್ಯದಲ್ಲಿ 6557 ಸೌಹಾರ್ದ ಸಹಕಾರ ಸಂಘಗಳಿದ್ದು 65 ಲಕ್ಷಕ್ಕು ಹೆಚ್ಚು ಸದಸ್ಯರಿದ್ದಾರೆ. ಉತ್ತರ ಕರ್ನಾಟಕ ಭಾಗದಲ್ಲಿ ಸೌಹಾರ್ದ ಸಹಕಾರ ಸಂಘಗಳು ಕೇವಲ ಸಾಲಸೌಲಭ್ಯ ಅಷ್ಟೇ ಅಲ್ಲದೆ ಉತ್ಪಾದನಾ ವಲಯಕ್ಕು ತಮ್ಮ ಕಾರ್ಯಚಟುವಟಿಕೆಗಳನ್ನು ವಿಸ್ತರಿಸಿ ತಮ್ಮದೇ ಆದ ಛಾಪು ಮೂಡಿಸಿದ್ದು ಅನುಕರಣೀಯವಾಗಕವೆ ಎಂದರು

ಇತರೆ ಕ್ಷೇತ್ರದ ಬ್ಯಾಂಕ್‌ಗಳಿಗಿಂತ ಸೌಹಾರ್ದ ಸಹಕಾರ ಸಂಘಗಳಲ್ಲಿ ಸರಳವಾಗಿ ಸಾಲಸೌಲಭ್ಯ ಪಡೆಯಬಹುದಾಗಿದ್ದು ಬಡ ಹಾಗು ಮಧ್ಯಮ ವರ್ಗದ ಜನರು ಇದನ್ನು ಸದುಪಯೋಗಪಡಿಸಿಕೊಂಡು ಆರ್ಥಿಕವಾಗಿ ಅಭಿವೃದ್ಧಿ ಹೊಂದುವಂತೆ ಅವರು ಮನವಿ ಮಾಡಿದರು ಸಭೆಯಲ್ಲಿ 2024-25 ನೇ ಸಾಲಿನ ವಾರ್ಷಿಕ ಮಹಾಸಭೆಯ ನಡಾವಳಿಗಳನ್ನು ಅಂಗೀಕರಿಸಿ 2025-26ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸಲಾಯಿತು. 2026_27 ನೇ ಸಾಲಿನ ಅಂದಾಜು ಆಯವ್ಯಯ ಪತ್ರವನ್ನು ಸಭೆಯಲ್ಲಿ ಅನುಮೋದಿಸಲಾಯಿತು ಸಭೆಯಲ್ಲಿ ಕರ್ನಾಟಕ ಅಭಿವೃದ್ಧಿ ಹೋರಾಟ ಸಮಿತಿಯ ಕಾನೂನು ಸಲಹೆಗಾರರಾದ ವಕೀಲ ಮಹದೇವಸ್ವಾಮಿ, ನವ್ಯಕರ್ನಾಟಕ ಸೌಹಾರ್ದ ಸಹಕಾರ ಸಂಘದ ಅಧ್ಯಕ್ಷ ನಂಜುಂಡಸ್ವಾಮಿ, ಜಿಲ್ಲಾ ಕಾರ್ಯನಿರತ ಪತ್ರಕರ್ತ ಸಂಘದ ಅಧ್ಯಕ್ಷ ಆರ್ ಎನ್ ಸಿದ್ದಲಿಂಗಸ್ವಾಮಿ, ಶ್ರೀ ಅಕ್ಷಯಶ್ರೀ ಸೌಹಾರ್ದ ಸಹಕಾರ ಸಂಘದ ಉಪಾಧ್ಯಕ್ಷ ಲಿಂಗಪ್ಪ, ಎಸ್ ಎಂ ನಂದೀಶ್, ಎಂ ನಂಜುಂಡಸ್ವಾಮಿ, ಕರ್ನಾಟಕ ಅಭಿವೃದ್ಧಿ ಹೋರಾಟ ಸಮಿತಿ ಕಾರ್ಯದರ್ಶಿ ಮಲ್ಲೇಶ್ ಮೊದಲಾದವರು ಇದ್ದರು

# ಬರಗಾಲದಿಂದ ಸಂಕಷ್ಟದಲ್ಲಿರುವ ರೈತರ ಸಾಲ ಮನ್ನಾ ಮಾಡಿ: ಸಿ.ವೈ.ಅಭಿಲಾಷ್



**ಕೆ.ಆರ್.ನಗರ:** ರಾಜ್ಯದಲ್ಲಿ ಬರಗಾಲ ಆವರಿಸಿದ್ದು ರೈತರ ಸಾಲವನ್ನು ಮನ್ನಾ ಮಾಡುವ ಮೂಲಕ ಸರ್ಕಾರವು ರೈತರ ನೆರವಿಗೆ ಧಾವಿಸಬೇಕೆಂದು ತಾಲೂಕಿನ ಚನ್ನಂಗೆರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಸಿ.ವೈ.ಅಭಿಲಾಶ್ ಮನವಿ ಮಾಡಿದರು.

ಅವರು ತಾಲೂಕಿನ ಚನ್ನಂಗೆರೆ ಪಿಎಸಿಎಸ್ ನ 2025 – 26ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಉದ್ಘಾಟಿಸಿ ಮಾತನಾಡಿದರು.

ಸಂಘದಿಂದ 2025 – 26ನೇ ಸಾಲಿನಲ್ಲಿ ಆರು ಕೋಟಿ 65 ಲಕ್ಷ ಹಾಗೂ 2026 – 27ನೇ ಸಾಲಿನಲ್ಲಿ ಮೂರು ಕೋಟಿ 66 ಲಕ್ಷ ರೂಗಳ ಕೆಸಿಸಿ, ದ್ವಿಚಕ್ರ ಮತ್ತು ನಾಲ್ಕು ಚಕ್ರದ ವಾಹನ, ಹೈನುಗಾರಿಕೆ ಸಾಲ ಸೇರಿದಂತೆ ವಿವಿಧ ಸಾಲಗಳನ್ನು ವಿತರಣೆ ಮಾಡಲಾಗಿದ್ದು ಸಂಘವು

2025 – 26ನೇ ಸಾಲಿನಲ್ಲಿ ಐದು ಲಕ್ಷ ರೂಗಳ ನಿವ್ವಳ ಲಾಭ ಗಳಿಸಿದೆ ಎಂದರು.

ಸಂಘದ ಎಲ್ಲಾ ದಾಖಲೆಗಳನ್ನು ಗಣಕೀಕೃತ ಉತ್ತಮವಾಗಿ ಮಾಡುವ ಮೂಲಕ ರಾಜ್ಯದಲ್ಲಿ ಉತ್ತಮ ಸಂಘ ಎಂಬ ಪುರಸ್ಕಾರವನ್ನು ನಮ್ಮ ಸಂಘವು ಪಡೆದಿರುವುದು ಸಂಘದ ಪಾರದರ್ಶಕ ಆಡಳಿತ ವ್ಯವಸ್ಥೆಗೆ ಹಿಡಿದ ಕೈಗನ್ನಡಿಯಾಗಿದೆ ಇದಕ್ಕೆ ಸಹಕಾರ ನೀಡಿದ ಸಂಘದ ಆಡಳಿತ ಮಂಡಳಿಯವರು, ಸಿಬ್ಬಂದಿ ವರ್ಗದವರು ಹಾಗೂ ಸಂಘದ ಸರ್ವ ಸದಸ್ಯರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇವೆ ಎಂದರು.

ಮುಂದಿನ ದಿನಗಳಲ್ಲಿ ಸಂಘದ ಸದಸ್ಯರುಗಳಿಗೆ ಹೆಚ್ಚಿನ ಸಾಲ ಸೌಲಭ್ಯಗಳು, ಗೊಬ್ಬರ ಸೇರಿದಂತೆ ವಿವಿಧ ಅನುಕೂಲವಾಗುವಂತಹ ಕಾರ್ಯಕ್ರಮಗಳನ್ನು ರೂಪಿಸಿ ಅವುಗಳನ್ನು ಅನುಷ್ಠಾನ ಮಾಡುವ ಮೂಲಕ ಸಂಘದ ಬೆಳವಣಿಗೆಯೊಂದಿಗೆ ಸದಸ್ಯರ ಅಭಿವೃದ್ಧಿಗೆ ಶ್ರಮಿಸಲಾಗುವುದು. ಸಂಘದ ಸರ್ವ ಸದಸ್ಯರುಗಳು ಕೂಡ ಯಶಸ್ವಿನಿ ಯೋಜನೆಯಲ್ಲಿ ನೊಂದಣಿ ಮಾಡಿಕೊಳ್ಳುವ ಮೂಲಕ ಅದರ ಲಾಭವನ್ನು ಪಡೆದುಕೊಳ್ಳಬೇಕೆಂದರು.

ಈ ಸಂದರ್ಭದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳು, ರೈತರುಗಳು ಹಾಗೂ ಗಣ್ಯರುಗಳನ್ನು ಸನ್ಮಾನಿಸಲಾಯಿತು.

ಸಭೆಯಲ್ಲಿ ಸಂಘದ ಉಪಾಧ್ಯಕ್ಷ ಶಂಕರನಾಯಕ, ನಿರ್ದೇಶಕರುಗಳಾದ ಸಿ.ಎಚ್.ಕುಮಾರ, ಚಲುವಯ್ಯ, ಸಿ.ಜಿ.ತಮ್ಮೇಗೌಡ, ಪುಟ್ಟೇಗೌಡ, ಸಿ.ಕೆ. ಮಲ್ಲಿಕಾರ್ಜುನ, ಸೈಯದ್ ಇಸ್ರಾರ್, ಸಿ.ಆರ್. ರಘುನಾಥ್, ಮಾಜಿ ನಿರ್ದೇಶಕ ನರಸಿಂಹೇಗೌಡ, ಸಹಕಾರ ಅಭಿವೃದ್ಧಿ ಅಧಿಕಾರಿ ಎಸ್.ರವಿ, ಸಂಘದ ಸಿಇಓ ಆರ್.ಮಂಜು, ಸಿಬ್ಬಂದಿಗಳಾದ ಹೆಚ್.ಪಿ.ರಾಜೇಶ್, ಕೆ.ಎನ್.ಧನಲಕ್ಷ್ಮಿ, ಶಿಕ್ಷಕ

ಸಿ.ಎನ್.ಪ್ರಭು, ಮುಖಂಡರುಗಳಾದ ಧನಂಜಯ, ಅರವಿಂದ, ಗಂಗಾಧರ, ಕೃಷ್ಣೆಗೌಡ, ಈ.ಚಂದ್ರು, ಅಭಿಜಿತ್, ವೀರಪ್ಪಾಜಿ, ಲೋಕೇಶ್, ಶಿವರಾಮು, ಮಂಜು, ರೇವಣ್ಣ, ಹಲಗೇಗೌಡ, ಪ್ರಮೋದ, ಕಿಟ್ಟಿ, ಸಿ.ಜೆ.ರವಿ, ಪ್ರಕಾಶ್ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

# ಎನ್ ಆರ್ ಎಲ್ ಎಂ ಯೋಜನೆ ವಿಫಲ

## ಆದೇಶ ಉಲ್ಲಂಘಿಸಿ ಸಿಬ್ಬಂದಿ ವಜಾ: ರುದ್ರಮ್ಮ ಆರೋಪ

**ಮಂಡ್ಯ:** ಕೌಶಲ್ಯಾಭಿವೃದ್ಧಿ ಇಲಾಖೆಯ ಓಖಐಒ ಯೋಜನೆಯಲ್ಲಿ ಹಲವಾರು ಸಿಬ್ಬಂದಿಗಳನ್ನು ನೇಮಕ ಮಾಡಲು ಆದೇಶ ಇದ್ದರೂ ಆದೇಶ ಉಲ್ಲಂಘಿಸಿ ವಜಾ ಮಾಡಲಾಗಿದೆ. ಜಿಲ್ಲೆಗೆ ಬಿಡುಗಡೆಯಾದ ಅನುದಾನಗಳು ಜಿಲ್ಲಾ ಪಂಚಾಯತಿನಲ್ಲೇ ಉಳಿದುಕೊಂಡಿವೆ. ಗ್ರಾಮ ಪಂಚಾಯತಿ ಮಟ್ಟದ ಒಕ್ಕೂಟಗಳ ಖಾತೆಗೆ ಜಮಾ ಆಗಬೇಕಾಗಿತ್ತು, ಆದರೆ ಅರ್ಧದಷ್ಟು ಹಣ ಜಮಾ ಆಗಿಲ್ಲ. ಇದರಿಂದ ಸ್ವ–ಸಹಾಯ ಸಂಘದ ಮಹಿಳಾ ಫಲಾನುಭವಿಗಳಿಗೆ ಅನುದಾನ ತಲುಪಿಲ್ಲ. ಸರ್ಕಾರದ ಮಹಿಳಾ ಶ್ರೇಯೋಭಿವೃದ್ಧಿ ಯೋಜನೆಗಳು ಮಹಿಳಾ ಮಟ್ಟದವರೆಗೆ ತಲುಪುತ್ತಿಲ್ಲ. ಹೀಗಾಗಿ ಮಂಡ್ಯ ಜಿಲ್ಲೆಯಲ್ಲಿ ಓಖಐಒ ಸಂಪೂರ್ಣ ವಿಫಲವಾಗಿದೆ ಎಂದು ರಾಜ್ಯ ಮಟ್ಟದ ಸಖಿಯರ ಮಹಾ ಒಕ್ಕೂಟದ ರಾಜ್ಯಾಧ್ಯಕ್ಷೆ ರುದ್ರಮ್ಮ (ಶಿವಮೊಗ್ಗ) ಆರೋಪಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು 2011 ರಿಂದ ರಾಜ್ಯ ಮತ್ತು ಕೇಂದ್ರ ಸರ್ಕಾರದ 60:40 ಅನುದಾನದಲ್ಲಿ ಯೋಜನೆ ನಡೆಯುತ್ತಿದೆ. ಇದರಲ್ಲಿ ಪಶುಸಖಿ, VRP, ಘನತ್ಯಾಜ್ಯ ವಿಲೇವಾರಿ ಘಟಕದ ಮಹಿಳಾ ಡ್ರೈವರ್ ಗಳು, ಸ್ವಚ್ಛತಾಗಾರರು, MBKಸೇರಿದಂತೆ ಹಲವು ಸಿಬ್ಬಂದಿಗಳು ಗ್ರಾಮೀಣ ಮಹಿಳೆಯರ ಶ್ರೇಯೋಭಿವೃದ್ಧಿಗೆ ಆದೇಶದ ಪ್ರಕಾರ ಅನುದಾನ ಬಿಡುಗಡೆ ಕೆಲಸ ಮಾಡುತ್ತಾರೆ ಎಂದರು.

ಎಂಬಿಕೆ ಆಯ್ಕೆಗೆ ಪಿಯುಸಿ ಪಾಸ್, ಸ್ಥಳೀಯ ನಿವಾಸಿ, ಸಂಘದ ಸದಸ್ಯೆ, ಸಾಲ ವಸೂಲಿ ಮತ್ತು ಬಿಡುಗಡೆ ಅನುಭವ ಇರಬೇಕು. ವಜಾ ಮಾಡುವಾಗಲೂ ಅದೇ ಫೋರಂನಲ್ಲಿ ತೆಗೆಯಬೇಕು ಎಂದರು

**ಅರಕೆರೆ ಪ್ರಕರಣ – ಮುಖ್ಯ ಆರೋಪ:**
ಶ್ರೀರಂಗಪಟ್ಟಣ ತಾಲೂಕಿನ ಅರಕೆರೆ ಗ್ರಾಮಪಂಚಾಯತಿಯಲ್ಲಿ 27 ಜನ ಸದಸ್ಯರ ಸಮಿತಿ ಇದ್ದರೂ ಸಮಿತಿ ಸಭೆ ಕರೆಯದೆ ಒಬ್ಬರೇ ಗ್ರಾ.ಪಂ ಅಧ್ಯಕ್ಷರು ಏಕಾಏಕಿ ನೋಟಿಸ್ ಕೊಟ್ಟು ಒಃಪಿ ಅವರನ್ನು ವಜಾ ಮಾಡಿದ್ದಾರೆ. 4 ದಿನದ ಹಿಂದೆ "ನೀನು ಒಳ್ಳೆ ಕೆಲಸಗಾರ್ತಿ" ಎಂದು ಹೊಗಳಿ, ಯಾವುದೇ ಪ್ರಕಟಣೆ, ಸುತ್ತಮುತ್ತಲಿನ ಹಳ್ಳಿಗಳಿಗೆ ಮಾಹಿತಿ ನೀಡದೆ, ಅರ್ಜಿ ಕರೆಯದೆ, ಪಿಯುಸಿ ಆಗದವರನ್ನು ತರುವ ಪ್ರಯತ್ನ ನಡೆದಿದೆ ಎಂದು ದೂರಿದರು.

**ಸೇಡಿನ ಕ್ರಮ:** ಒಕ್ಕೂಟದ ಪದಾಧಿಕಾರಿಗಳು (ಅಧ್ಯಕ್ಷರು, ಕಾರ್ಯದರ್ಶಿ, ಖಜಾಂಚಿ) ಪ್ರತಿ 2 ವರ್ಷಕ್ಕೊಮ್ಮೆ ಕಾನೂನು ಪ್ರಕಾರ ಬದಲಾಗಬೇಕು. ಆದರೆ ಜಿಲ್ಲೆಯಲ್ಲಿ ಬದಲಾವಣೆ ಆಗುತ್ತಿಲ್ಲ, ಪಾರದರ್ಶಕತೆ ಇಲ್ಲ, ಅವ್ಯವಹಾರ ಜಾಸ್ತಿಯಾಗಿದೆ. ನಾವು ಹೋರಾಟ ಮಾಡಿ ಬದಲಾವಣೆ ಮಾಡಿ ಎಂದು ಇಲಾಖೆಗೆ ಮನವಿ ಕೊಟ್ಟಾಗ ಇಲಾಖೆ ಬದಲಾವಣೆಗೆ ಆದೇಶ ಮಾಡಿತ್ತು. ಆ ಕ್ರಿಯೆ ಶುರುವಾದಾಗ "ನೀವು ನಮ್ಮನ್ನೇ ಬದಲಾಯಿಸೋದಾದರೆ ನಾವು ನಿಮ್ಮನ್ನೇ ಬದಲಾಯಿಸ್ತೀವಿ" ಎಂದು ಸೇಡು ತೀರಿಸಿಕೊಳ್ಳಲು ಅರಕೆರೆಯಲ್ಲಿ ಈ ವಜಾ ಮಾಡಲಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾಧ್ಯಕ್ಷೆ ನಿಮಿತಾ, ಶಶಿಕಲಾ, ಮಮತಾ ಮತ್ತಿತರರು ಉಪಸ್ಥಿತರಿದ್ದರು.




# ಶಿವಾನಂದ ತಗಡೂರುಗೆ ರಾಜ್ಯ ನಾಟಕ ಅಕಾಡೆಮಿ ಪ್ರಶಸ್ತಿ ಪ್ರದಾನ

**ಬೆಂಗಳೂರು:** ಕರ್ನಾಟಕ ಕಾರ್ಯ ನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷರು, ಹಿರಿಯ ಪತ್ರಕರ್ತರು ಹಾಗೂ ರಂಗಕರ್ಮಿ ಶಿವಾನಂದ ತಗಡೂರು ಅವರಿಗೆ ರಾಜ್ಯ ನಾಟಕ ಅಕಾಡೆಮಿಯ ವಾರ್ಷಿಕ ಪ್ರಶಸ್ತಿಯನ್ನು ವಿಧಾನ ಪರಿಷತ್ ಉಪಸಭಾಪತಿ ಉಮಾಶ್ರೀ ಅವರು ಪ್ರದಾನ ಮಾಡಿದರು.




ರವೀಂದ್ರ ಕಲಾಕ್ಷೇತ್ರದಲ್ಲಿ ನಡೆದ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ಉಮಾಶ್ರೀ, ?ರಂಗಭೂಮಿ ಯಾವ ಕಾಲಕ್ಕೂ ತನ್ನ ಜೀವಂತಿಕೆಯನ್ನು ಕಳೆದುಕೊಳ್ಳುವುದಿಲ್ಲ. ನಾನೂ ಕೂಡ ರಂಗಭೂಮಿ ಕಲಾವಿದೆಯಾಗಿ ಬೆಳೆದು ಈ ಎತ್ತರದ ಸ್ಥಾನಕ್ಕೆ ಬಂದಿದ್ದೇನೆ. ರಂಗಭೂಮಿಯ ಮೂಲಕ ಬೆಳೆದು ಬಂದಿರುವ ಎಲ್ಲ ಕಲಾವಿದರಿಗೂ ರಾಜ್ಯ ಸರ್ಕಾರದ ಪರವಾಗಿ ಅಭಿನಂದನೆಗಳು? ಎಂದು ಹೇಳಿದರು.

ಸಮಾರಂಭದಲ್ಲಿ ಹಿರಿಯ ನಟ ಹಾಗೂ ವಿಧಾನ ಪರಿಷತ್ ಮಾಜಿ ಸದಸ್ಯ ಮುಖ್ಯಮಂತ್ರಿ ಚಂದ್ರು, ನಾಟಕ ಅಕಾಡೆಮಿ ಅಧ್ಯಕ್ಷ ಡಾ. ಕೆ.ವಿ. ನಾಗರಾಜಮೂರ್ತಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ. ಪುರುಷೋತ್ತಮ ಬಿಳಿಮಲೆ, ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಮುಕುಂದರಾಜ್, ಹಿರಿಯ ರಂಗಕರ್ಮಿ ಶ್ರೀನಿವಾಸ ಜಿ. ಕಪ್ಪಣ್ಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಡಾ. ವಸುಂಧರಾ ಹಾಗೂ ರಿಜಿಸ್ಟ್ರಾರ್ ನೀಲಮ್ಮ, ಶೇಖ್ ಮಾಸ್ತರ ಉಪಸ್ಥಿತರಿದ್ದರು.

ಸಮಾರಂಭದಲ್ಲಿ ರಾಜ್ಯ ನಾಟಕ ಅಕಾಡೆಮಿಯ ವಾರ್ಷಿಕ ಪ್ರಶಸ್ತಿಗಳು ಹಾಗೂ ವಿವಿಧ ದತ್ತಿನಿಧಿ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು.

# ಆಯುರ್ವೇದ ಪದ್ಧತಿ ಕಾಯಿಲೆ ತಡೆಯುವ ಜೀವನ ವಿಧಾನ; ಡಾ.ಶ್ಯಾಮ್ ಪ್ರಸಾದ್

**ಮಡಿಕೇರಿ:** ಆಯುರ್ವೇದವು ಕೇವಲ ಕಾಯಿಲೆ ಬಂದ ನಂತರ ಚಿಕಿತ್ಸೆ ನೀಡುವ ಪದ್ಧತಿಯಲ್ಲ, ಆರೋಗ್ಯ ಕಾಪಾಡಿಕೊಂಡು ಕಾಯಿಲೆ ತಡೆಗಟ್ಟುವ ಜೀವನ ವಿಜ್ಞಾನವಾಗಿದೆ ಎಂದು ಕುಶಾಲನಗರ ಯೋಗಕ್ಷೇಮ ಆಸ್ಪತ್ರೆಯ ಆಯುರ್ವೇದ ವೈದ್ಯರಾದ ಡಾ.ಶ್ಯಾಮ್ ಪ್ರಸಾದ್ ಅವರು ಹೇಳಿದರು.

ಕೊಡಗು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಮತ್ತು ಆಯುಷ್ ಇಲಾಖೆ ಸಂಯುಕ್ತ ಆಶ್ರಯದಲ್ಲಿ 'ಆರೋಗ್ಯಕರ ನಾಳೆಗಾಗಿ ಆಯುರ್ವೇದ' ಎಂಬ ಘೋಷವಾಕ್ಯದೊಂದಿಗೆ ನಗರದ ಜಿಲ್ಲಾ ಸರ್ಕಾರಿ ಆಯುರ್ವೇದ ಆಸ್ಪತ್ರೆಯಲ್ಲಿ ಬುಧವಾರ ನಡೆದ 11 ನೇ ರಾಷ್ಟ್ರೀಯ ಆಯುರ್ವೇದ ದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಉಪನ್ಯಾಸ ನೀಡಿದರು.

'ಆಯು' ಎಂದರೆ ಜೀವನ ಅಥವಾ ಆಯಸ್ಸು ಹಾಗೂ 'ವೇದ' ಎಂದರೆ ವಿಜ್ಞಾನ. ಜೀವನ ಹೇಗೆ ಆರೋಗ್ಯಕರವಾಗಿ ನಡೆಸಬೇಕು ಎಂಬುದನ್ನು ತಿಳಿಸಿಕೊಡುವುದೇ ಆಯುರ್ವೇದದ ಪ್ರಮುಖ ಉದ್ದೇಶವಾಗಿದೆ. ನಮ್ಮ ಹಿರಿಯರು ಅನುಭವದ ಮೂಲಕ ತಿಳಿದುಕೊಂಡು, ಪೀಳಿಗೆಯಿಂದ ಪೀಳಿಗೆಗೆ ಅನುಸರಿಸಿಕೊಂಡು ಬಂದಿರುವ ಆಹಾರ ಪದ್ಧತಿ, ಜೀವನಶೈಲಿ ಹಾಗೂ ಮನೆ ಮದ್ದುಗಳಲ್ಲಿಯೂ ಆಯುರ್ವೇದದ ತತ್ವಗಳು ಅಡಕವಾಗಿವೆ ಎಂದು ವಿವರಿಸಿದರು.

ಪ್ರಸ್ತುತ ಜೀವನಶೈಲಿಯಿಂದಾಗಿ ಮಧುಮೇಹ, ಬೊಜ್ಜು ಸೇರಿದಂತೆ ಹಲವು ಜೀವನಶೈಲಿ ಆಧಾರಿತ ಕಾಯಿಲೆಗಳು ಹೆಚ್ಚುತ್ತಿವೆ. ಕಾಯಿಲೆ ಬಂದ ನಂತರ ಚಿಕಿತ್ಸೆ ಪಡೆಯುವುದಕ್ಕಿಂತ ಮುನ್ನೆಚ್ಚರಿಕೆ ವಹಿಸುವುದು ಅತ್ಯಂತ ಮುಖ್ಯ. ಆರೋಗ್ಯಕರ ಆಹಾರ, ಸಮಯಕ್ಕೆ ಸರಿಯಾಗಿ ಊಟ, ಸಮರ್ಪಕ ನಿದ್ರೆ ಹಾಗೂ ನಿಯಮಿತ ಜೀವನಶೈಲಿಯನ್ನು ಅಳವಡಿಸಿಕೊಂಡರೆ ಹಲವು ಆರೋಗ್ಯ ಸಮಸ್ಯೆ ದೂರವಿಡಬಹುದು ಎಂದರು.



ಜೀರ್ಣಶಕ್ತಿಯನ್ನು ಉತ್ತಮವಾಗಿ ಕಾಪಾಡಿಕೊಳ್ಳುವುದು ಆರೋಗ್ಯದ ಪ್ರಮುಖ ಅಂಶವಾಗಿದೆ. ಹಸಿವು ಮತ್ತು ನಿದ್ರೆಯ ಬಗ್ಗೆ ಪ್ರತಿಯೊಬ್ಬರೂ ಗಮನಹರಿಸಬೇಕು ಎಂದು ಸಲಹೆ ನೀಡಿದರು.

ಇಂದಿನ ದಿನಗಳಲ್ಲಿ ಒತ್ತಡ, ಆತಂಕ ಹಾಗೂ ಖಿನ್ನತೆಯಂತಹ ಸಮಸ್ಯೆಗಳೂ ಹೆಚ್ಚುತ್ತಿವೆ. ದೈನಂದಿನ ಜೀವನದಲ್ಲಿ ಸೂಕ್ತ ವಿಶ್ರಾಂತಿ ಪಡೆಯುವುದು, ಸಾಧ್ಯವಾದಷ್ಟು ನೈಸರ್ಗಿಕ ವಾತಾವರಣದಲ್ಲಿ ಸಮಯ ಕಳೆಯುವುದು ಹಾಗೂ ಆರೋಗ್ಯಕರ ಆಹಾರ ಪದ್ಧತಿ ಅನುಸರಿಸುವುದು ಅಗತ್ಯವಾಗಿದೆ ಎಂದು ಡಾ.ಶ್ಯಾಮ್ ಪ್ರಸಾದ್ ಅವರು ಹೇಳಿದರು.

ಆಯುರ್ವೇದದ ಆರೋಗ್ಯಕರ ಜೀವನಶೈಲಿಯ ಕುರಿತು ಆಶಾ ಹಾಗೂ ಅಂಗನವಾಡಿ ಕಾರ್ಯಕರ್ತೆಯರು ಜನರಲ್ಲಿ ಜಾಗೃತಿ ಮೂಡಿಸುವಲ್ಲಿ ಪ್ರಮುಖ ಪಾತ್ರ ವಹಿಸಬೇಕು. ಪ್ರತಿಯೊಬ್ಬರೂ ತಮ್ಮ ಆರೋಗ್ಯದ ಬಗ್ಗೆ ಕಾಳಜಿ ವಹಿಸುವುದರ ಜೊತೆಗೆ ಕುಟುಂಬ ಮತ್ತು ಸಮಾಜದ ಆರೋಗ್ಯ ಕಾಪಾಡುವ ನಿಟ್ಟಿನಲ್ಲಿ ಮುನ್ನೆಚ್ಚರಿಕಾ ಕ್ರಮ ಅನುಸರಿಸಬೇಕು ಎಂದರು.

'ಸ್ವಸ್ಥ ಭವಿಷ್ಯಕ್ಕಾಗಿ ಆಯುರ್ವೇದ' ಎಂಬ ಆಶಯದಂತೆ, ಭವಿಷ್ಯದ ಆರೋಗ್ಯವನ್ನು ಕೇವಲ ಆಸ್ಪತ್ರೆಗಳು ಮತ್ತು ಚಿಕಿತ್ಸೆಗಳ ಮೇಲೆ ಅವಲಂಬಿಸದೆ, ಆರೋಗ್ಯಕರ ತಾಯ್ತನ, ಪೌಷ್ಟಿಕ ಆಹಾರ, ಉತ್ತಮ ಅಡುಗೆ ಪದ್ಧತಿ ಹಾಗೂ ಸರಿಯಾದ ಜೀವನಶೈಲಿಯ ಮೂಲಕ ಕಾಪಾಡಿಕೊಳ್ಳಬೇಕು. ಆಸ್ಪತ್ರೆಗಳು ಮುಖ್ಯವಾಗಿ ಕಾಯಿಲೆ ಬಂದಾಗ ಚಿಕಿತ್ಸೆ ನೀಡುವ ಸ್ಥಳವಾಗಿದ್ದು, ಕಾಯಿಲೆ ಬರದಂತೆ ಮುನ್ನೆಚ್ಚರಿಕೆ ವಹಿಸುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದು ಡಾ.ಶ್ಯಾಮ್ ಪ್ರಸಾದ್ ಅವರು ತಿಳಿಸಿದರು. ನೀಮಾ ಸಂಸ್ಥೆಯ ಡಾ.ರಾಜಾರಾಮ್ ಅವರು ಮಾತನಾಡಿ, ಆಯುರ್ವೇದವು ಕೇವಲ ಕಾಯಿಲೆಗಳಿಗೆ ಚಿಕಿತ್ಸೆ ನೀಡುವ ಪದ್ಧತಿಯಲ್ಲ, ಆರೋಗ್ಯವನ್ನು ಕಾಪಾಡಿಕೊಳ್ಳುವ ಸಮಗ್ರ ಜೀವನಶೈಲಿಯಾಗಿದೆ. ಪ್ರಕೃತಿ ಮತ್ತು ದೇಹದ ನಡುವಿನ ಸಮತೋಲನ ಕಾಪಾಡಿಕೊಳ್ಳುವ ಮೂಲಕ ಆರೋಗ್ಯಕರ ಜೀವನ ನಡೆಸಲು ಆಯುರ್ವೇದ ಮಾರ್ಗದರ್ಶನ ನೀಡುತ್ತದೆ ಎಂದು ಹೇಳಿದರು. ಇಂದಿನ ಆಧುನಿಕ ಜೀವನಶೈಲಿಯಿಂದಾಗಿ ಒತ್ತಡ, ಆಹಾರ ಪದ್ಧತಿಯ ಬದಲಾವಣೆ ಹಾಗೂ ನಿದ್ರೆಯ ಕೊರತೆಯಂತಹ ಸಮಸ್ಯೆಗಳು ಹೆಚ್ಚಾಗುತ್ತಿವೆ. ಇಂತಹ ಸಂದರ್ಭದಲ್ಲಿ ಸರಿಯಾದ ಆಹಾರ, ನಿಯಮಿತ ಜೀವನಕ್ರಮ, ಯೋಗ, ವ್ಯಾಯಾಮ ಹಾಗೂ ಪ್ರಕೃತಿಗೆ ಹೊಂದಿಕೊಂಡ ಜೀವನಶೈಲಿಗೆ ಆಯುರ್ವೇದದಲ್ಲಿ ಮಹತ್ವ ನೀಡಲಾಗಿದೆ ಎಂದರು. ಆಯುರ್ವೇದವು ರೋಗದ ಲಕ್ಷಣಗಳ ಜೊತೆಗೆ ವ್ಯಕ್ತಿಯ ದೇಹಪ್ರಕೃತಿ, ಆಹಾರ ಪದ್ಧತಿ ಹಾಗೂ ಜೀವನಶೈಲಿಯನ್ನು ಪರಿಗಣಿಸಿ ಆರೋಗ್ಯ ಸಂರಕ್ಷಣೆಗೆ ಒತ್ತು ನೀಡುತ್ತದೆ ಎಂದು ತಿಳಿಸಿದರು.

ಆಯುರ್ವೇದದ ಔಷಧಿಯನ್ನು ತಜ್ಞ ವೈದ್ಯರ ಸಲಹೆಯೊಂದಿಗೆ ಮಾತ್ರ ಬಳಸಬೇಕು. ಸ್ವಯಂ ಚಿಕಿತ್ಸೆ ಮಾಡಿಕೊಳ್ಳದೆ, ಅಗತ್ಯವಿದ್ದಾಗ ಅರ್ಹ ವೈದ್ಯರನ್ನು ಸಂಪರ್ಕಿಸುವುದು ಮುಖ್ಯ. ಆರೋಗ್ಯಕರ ಆಹಾರ ಮತ್ತು ಶಿಸ್ತಿನ ಜೀವನಶೈಲಿಯೊಂದಿಗೆ ಆಯುರ್ವೇದದ ತತ್ವ ಅಳವಡಿಸಿಕೊಂಡರೆ ದೈಹಿಕ ಹಾಗೂ ಮಾನಸಿಕ ಕ್ಷೇಮವನ್ನು ಕಾಪಾಡಿಕೊಳ್ಳಲು ನೆರವಾಗುತ್ತದೆ. ಜೊತೆಗೆ ಸಮಾಜದಲ್ಲಿಯೂ ಆರೋಗ್ಯದ ಕುರಿತು ಜಾಗೃತಿ ಮೂಡಿಸಬೇಕು ಎಂದು ಡಾ.ರಾಜಾರಾಮ್ ಕರೆ ನೀಡಿದರು.

ನಗರಸಭೆ ಅಧ್ಯಕ್ಷರಾದ ಪಿ.ಕಲಾವತಿ ಅವರು ಆಯುರ್ವೇದವು ಕೇವಲ ರೋಗ ನಿವಾರಣೆ ಮಾಡುವ ವೈದ್ಯ ಪದ್ಧತಿಯಲ್ಲ, ಅದು ಸೌಹಾರ್ದಯುತ ಮತ್ತು ಆರೋಗ್ಯಕರ ಜೀವನ ನಡೆಸುವ ಜೀವನ ಶೈಲಿಯಾಗಿದೆ. ಇಂದಿನ ಒತ್ತಡದ ಬದುಕಿನಲ್ಲಿ ನೈಸರ್ಗಿಕ ಆರೋಗ್ಯ ರಕ್ಷಣೆಗೆ ಆಯುರ್ವೇದ ಪದ್ಧತಿಯನ್ನು ಅಳವಡಿಸಿಕೊಳ್ಳುವುದು ಅಗತ್ಯ ಎಂದು ತಿಳಿಸಿದರು.

ಜಿಲ್ಲಾ ಆಯುಷ್ ಅಧಿಕಾರಿ ಡಾ.ಶೈಲಜಾ ಜಿ ಅವರು, ದಿನದ ಮಹತ್ವದ ಕುರಿತು ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ನಗರಸಭೆ ಸದಸ್ಯರಾದ ಸಬಿತ, ಆಶಾ ಕಾರ್ಯಕರ್ತೆಯರು, ಇಲಾಖೆ ವೈದ್ಯಾಧಿಕಾರಿಗಳು, ಸಿಬ್ಬಂದಿಗಳು ಹಾಜರಿದ್ದರು. ಆಯುಷ್ ಇಲಾಖೆಯ ದಿಶಾ ಪ್ರಾರ್ಥಿಸಿದರು, ಡಾ.ಸರಸ್ವತಿ ಸ್ವಾಗತಿಸಿದರು, ಡಾ.ಪಲ್ಲವಿ ನಾಯಕ್ ನಿರೂಪಿಸಿದರು, ಡಾ.ಸೌಪರ್ಣಿಕ ಉಪನ್ಯಾಸಕರ ಪರಿಚಯ ಮಾಡಿದರು. ಡಾ.ಕೆ.ಜಿ.ಶುಭ ವಂದಿಸಿದರು. ಕಾರ್ಯಕ್ರಮದಲ್ಲಿ ದಿನನಿತ್ಯದ ಬದುಕಿನಲ್ಲಿ ಬಳಸಬಹುದಾದ ಪ್ರಮುಖ ಗಿಡಮೂಲಿಕೆಗಳು ಹಾಗೂ ಮನೆಮದ್ದುಗಳ ಕುರಿತು ಜಾಗೃತಿ ಮೂಡಿಸುವ ಸಲುವಾಗಿ ಗಿಡಮೂಲಿಕೆಗಳ ಪ್ರದರ್ಶನ ನಡೆಯಿತು. ಇದೇ ಸಂದರ್ಭ ಪ್ರತಿಜ್ಞಾ ವಿಧಿ ಬೋಧಿಸಲಾಯಿತು.

# ಪೋಷಣ ಮಾಸಾಚರಣೆ ಅರಿವು ಕಾರ್ಯಕ್ರಮ

**ಮಡಿಕೇರಿ:** ಮಕ್ಕಳ ಆರೋಗ್ಯಕರ ಬೆಳವಣಿಗೆಗಾಗಿ ಸಮತೋಲಿತ ಆಹಾರ, ಸ್ವಚ್ಛತೆ ಮತ್ತು ಉತ್ತಮ ಆಹಾರ ಪದ್ಧತಿಯನ್ನು ಜೀವನದಲ್ಲಿ ಅಳವಡಿಸಿಕೊಳ್ಳುವಂತೆ ಜಿಲ್ಲಾ ಆರ್‌ಸಿಎಚ್ ಅಧಿಕಾರಿ ಡಾ.ಸನತ್ ಕುಮಾರ್ ಅವರು ಸಲಹೆ ನೀಡಿದರು.

ಮಕ್ಕಳಲ್ಲಿ ಪೌಷ್ಟಿಕತೆ, ಸಮತೋಲಿತ ಆಹಾರ, ಆರೋಗ್ಯಕರ ಬೆಳವಣಿಗೆ ಹಾಗೂ ಅಪೌಷ್ಟಿಕತೆಯ ತಡೆಗಟ್ಟುವಿಕೆಯ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧಕ ಆಸ್ಪತ್ರೆಯ ಮಕ್ಕಳ ವಿಭಾಗ ಹಾಗೂ ಕೊಡಗು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಂಯುಕ್ತ ಆಶ್ರಯದಲ್ಲಿ ನಗರದ ಮಕ್ಕಳ ಹೊರ ರೋಗಿ ವಿಭಾಗದ ಮುಂಭಾಗದಲ್ಲಿ ಬುಧವಾರ ನಡೆದ 'ಪೋಷಣ ಮಾಸಾಚರಣೆ' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ತಾಯಂದಿರು ಮತ್ತು ಸಾರ್ವಜನಿಕರಿಗೆ ಸ್ಥಳೀಯವಾಗಿ ಲಭ್ಯವಿರುವ ಪೌಷ್ಟಿಕ ಆಹಾರ ಪದಾರ್ಥಗಳ ಬಳಕೆ, ಮಕ್ಕಳ ದೈಹಿಕ ಹಾಗೂ ಮಾನಸಿಕ ಬೆಳವಣಿಗೆಯಲ್ಲಿ ಪೌಷ್ಟಿಕ ಆಹಾರದ ಮಹತ್ವದ ಕುರಿತು ಮಾಹಿತಿ ನೀಡಿದರು.

ಮಕ್ಕಳ ವಿಭಾಗದ ಮುಖ್ಯಸ್ಥರು ಹಾಗೂ ಪ್ರಾಧ್ಯಾಪಕರಾದ ಡಾ.ಡಿ.ಆರ್.ಪುರುಷೋತ್ತಮ್ ಅವರು ಮಾತನಾಡಿ, ಮಗುವಿನ ದೈಹಿಕ ಹಾಗೂ ಬೌದ್ಧಿಕ ಬೆಳವಣಿಗೆಗಾಗಿ ಎರಡು ವರ್ಷಗಳವರೆಗೆ ಎದೆ ಹಾಲುಣಿಸುವುದು ಅವಶ್ಯಕ. ಗರ್ಭಾವಸ್ಥೆಯಲ್ಲಿ ಮತ್ತು ಹೆರಿಗೆಯ ನಂತರ ತಾಯಿಗೆ ಸಾಕಷ್ಟು ನೀರು ಹಾಗೂ ಉತ್ತಮ ಆಹಾರ ನೀಡಬೇಕು ಮತ್ತು ಜಂಕ್ ಫುಡ್ ಸೇವನೆ ನಿಲ್ಲಿಸಬೇಕು. (ಎನ್‌ಆರ್‌ಸಿ) ಪೌಷ್ಟಿಕಾಂಶದ ಪುನರ್ವಸತಿ ಕೇಂದ್ರ ವಿಭಾಗದಲ್ಲಿ ಉಚಿತ ತಪಾಸಣೆ ಮತ್ತು ಚಿಕಿತ್ಸೆಯೊಂದಿಗೆ, 5 ವರ್ಷದೊಳಗಿನ ಮಕ್ಕಳ ಆರೈಕೆಗಾಗಿ ಸರ್ಕಾರವು ಪ್ರತಿ ತಿಂಗಳು 375 ರೂಪಾಯಿಗಳ ವೇತನ ನಷ್ಟ ಪರಿಹಾರವನ್ನು ಒದಗಿಸುತ್ತಿದೆ ಎಂದು ಹೇಳಿದರು.

ಮಕ್ಕಳ ಹಿರಿಯ ತಜ್ಞರಾದ ಡಾ.ರವಿಚಂದ್ರ ಅವರು ಮಾತನಾಡಿ, ಪೌಷ್ಟಿಕ ಆಹಾರ ಆರೋಗ್ಯಕರ ಸಮಾಜದ ಅಡಿಪಾಯವಾಗಿದ್ದು, ಮಕ್ಕಳ ಪೋಷಣೆ ಹಾಗೂ ಪೌಷ್ಟಿಕಾಂಶದ ಕುರಿತು ಅರಿವು ಮೂಡಿಸುವುದು ಅಗತ್ಯ ಎಂದರು.

ಸ್ತನ್ಯಪಾನವು ಸರಿಯಾದ ಮತ್ತು ಕ್ರಮಬದ್ಧವಾದ ರೀತಿಯಲ್ಲಿ ನಡೆಯಬೇಕು. ಜೊತೆಗೆ ರಕ್ತಹೀನತೆಯ ಬಗ್ಗೆಯೂ ಗಮನಹರಿಸಬೇಕು. ತಾಯಿ ಮತ್ತು ಮಗು ಇಬ್ಬರೂ ಸಾಕಷ್ಟು ಪೌಷ್ಟಿಕ, ಸಸಾರಜನಕ ಮತ್ತು ಜೀವಸತ್ವ ಪದಾರ್ಥಗಳನ್ನು ಸೇವಿಸಬೇಕು. ಮಗುವಿನಲ್ಲಿ ಪೌಷ್ಟಿಕಾಂಶ ಕಡಿಮೆ ಇರುವುದು ಕಂಡು ಬಂದರೆ ತಕ್ಷಣವೇ ವೈದ್ಯರನ್ನು ಸಂಪರ್ಕಿಸಬೇಕು. ಮಗುವಿನ ಆರೈಕೆಯನ್ನು ಹೇಗೆ ಮಾಡಬೇಕೆಂಬುದರ ಕುರಿತು ಅವರು ಸೂಕ್ತ ಸಲಹೆಗಳೊಂದಿಗೆ ಮಾರ್ಗದರ್ಶನ ಹಾಗೂ ಚಿಕಿತ್ಸೆ ನೀಡುತ್ತಾರೆ ಮತ್ತು ಇದರ ಸದುಪಯೋಗ ಪ್ರತಿಯೊಬ್ಬರೂ ಪಡೆದುಕೊಳ್ಳಬೇಕು ಎಂದು ಹೇಳಿದರು.

ಮಕ್ಕಳ ವಿಭಾಗದ ಸಹ ಪ್ರಾಧ್ಯಾಪಕರಾದ ಡಾ.ಸಲ್ಮ ಶಾಜಿಯಾ ಅವರು ಮಾತನಾಡಿ, 'ಮಕ್ಕಳು, ಗರ್ಭಿಣಿಯರು ಹಾಗೂ ಬಾಣಂತಿಯರಲ್ಲಿ, ಅಪೌಷ್ಟಿಕತೆ ಮತ್ತು ರಕ್ತಹೀನತೆ ತಡೆಯುವುದೇ ಅಭಿಯಾನದ ಮುಖ್ಯ ಉದ್ದೇಶ. ತಾಯಂದಿರು ದೈನಂದಿನ ಆಹಾರದಲ್ಲಿ ಸಿರಿಧಾನ್ಯ, ಹಸಿರು ತರಕಾರಿ, ಸೊಪ್ಪು ಹಾಗೂ ಹಣ್ಣು–ಹಂಪಲು ಬಳಸಬೇಕು. ಅಂಗನವಾಡಿಗಳಲ್ಲಿ ದೊರೆಯುವ ಸೌಲಭ್ಯ ಸದುಪಯೋಗಪಡಿಸಿಕೊಳ್ಳಬೇಕು' ಎಂದು ಸಲಹೆ ನೀಡಿದರು.

ಮಗುವಿಗೆ 6 ರಿಂದ 8 ತಿಂಗಳ ವಯಸ್ಸಿನಲ್ಲೇ ಅಕ್ಕಿ ಮತ್ತು ರಾಗಿ ಆಧಾರಿತ ಆಹಾರಗಳನ್ನು ನೀಡಲು ಪ್ರಾರಂಭಿಸಬೇಕು, ಮಗುವಿನ ಜೀರ್ಣಕ್ರಿಯೆಗೆ ಅನುಕೂಲವಾಗುವಂತೆ ಈ ಆಹಾರಗಳು ನಯವಾಗಿರಬೇಕು. 8 ತಿಂಗಳ ನಂತರ ನಯವಾದ ಆಹಾರದಿಂದ ಸ್ವಲ್ಪ ಗಟ್ಟಿಯಾದ ಆಹಾರಕ್ಕೆ ಬದಲಾಯಿಸಬಹುದು ಹಾಗೂ ಮೊಟ್ಟೆಯ ಬಿಳಿ ಭಾಗವನ್ನು ನೀಡಬಹುದು. 9 ತಿಂಗಳ ನಂತರ ಮಗುವಿನ ಬೆಳವಣಿಗೆಗಾಗಿ ಮೊಟ್ಟೆಯ ಬಿಳಿ ಮತ್ತು ಹಳದಿ ಭಾಗ ಎರಡನ್ನೂ ನೀಡಬಹುದು. 2 ವರ್ಷದವರೆಗೆ ಕಡ್ಡಾಯವಾಗಿ ಎದೆ ಹಾಲುಣಿಸಬೇಕು. ಹೊರಗಿನ ಆಹಾರಗಳನ್ನು ನೀಡುವುದನ್ನು ನಿಲ್ಲಿಸಿ, ಮನೆಯಲ್ಲಿ ತಯಾರಿಸಿದ ಆಹಾರವನ್ನೇ ನೀಡುವುದು ಅತ್ಯಗತ್ಯ ಎಂದರು.

ಜಿಲ್ಲಾ ಆಸ್ಪತ್ರೆಯ ಮೆಟ್ರೋನ್ ಲಕ್ಷ್ಮೀ ಅವರು ಮಾತನಾಡಿ, ಮಕ್ಕಳ ಉಜ್ವಲ ಭವಿಷ್ಯಕ್ಕಾಗಿ ನವಜಾತ ಶಿಶುವು ಆರೋಗ್ಯವಂತವಾಗಿರಬೇಕು. ಇದಕ್ಕಾಗಿ ಗರ್ಭಿಣಿಯರು ಉತ್ತಮ ಗುಣಮಟ್ಟದ ಆಹಾರ ಮತ್ತು ಪೌಷ್ಟಿಕಾಂಶಯುಕ್ತ ಪದಾರ್ಥ ಸೇವಿಸಬೇಕು. ತಾಯಿ ಮತ್ತು ಮಗು ಇಬ್ಬರಿಗೂ ಸೂಕ್ತ ಆರೈಕೆ ಸಿಗುವುದು ಅತ್ಯಗತ್ಯ. ಯಾವುದೇ ಸಮಸ್ಯೆ ಕಂಡುಬಂದಲ್ಲಿ ಜಿಲ್ಲಾ ಸರ್ಕಾರಿ ಆಸ್ಪತ್ರೆಯ (ಎನ್‌ಆರ್‌ಸಿ) ಪೌಷ್ಟಿಕಾಂಶದ ಪುನರ್ವಸತಿ ಕೇಂದ್ರ ವಿಭಾಗಕ್ಕೆ ಭೇಟಿ ನೀಡಿ ಉತ್ತಮ ಸೌಲಭ್ಯಗಳನ್ನು ಸದುಪಯೊಗ ಪಡೆದುಕೊಳ್ಳಬೇಕು ಎಂದು ಹೇಳಿದರು.

ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಎಚ್.ಕೆ.ಶಾಂತಿ ಅವರು ಮಾತನಾಡಿ, ಗರ್ಭಿಣಿಯರು ತಮ್ಮ ಆರೋಗ್ಯದ ಬಗ್ಗೆ ವಿಶೇಷ ಕಾಳಜಿ ವಹಿಸಬೇಕು ಮತ್ತು 6 ತಿಂಗಳವರೆಗೆ ತಪ್ಪದೇ ಕ್ರಮಬದ್ಧವಾಗಿ ಎದೆ ಹಾಲುಣಿಸಬೇಕು. ಇದು ತಾಯಿ ಮತ್ತು ಮಗುವಿನಲ್ಲಿ ರಕ್ತಹೀನತೆ ಹಾಗೂ ಅಪೌಷ್ಟಿಕತೆ ತಡೆಯಲು ಸಹಾಯ ಮಾಡುತ್ತದೆ ಎಂದು ವಿವರಿಸಿದರು. ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳಿಗಾಗಿ ಸರ್ಕಾರವು ಮಗುವಿನ ದಾಖಲಾತಿ ನೋಂದಾಯಿಸಿದ ನಂತರ (ಎನ್‌ಆರ್‌ಸಿ) ಪೌಷ್ಟಿಕಾಂಶದ ಪುನರ್ವಸತಿ ಕೇಂದ್ರ ವಿಭಾಗದಿಂದ 14 ದಿನಗಳ ಉಚಿತ ಆರೋಗ್ಯ ತಪಾಸಣೆ ಮತ್ತು ಚಿಕಿತ್ಸೆ ಒದಗಿಸುತ್ತದೆ ಹಾಗೂ ಪೋಷಕರಿಗೆ ವೇತನ ನಷ್ಟ ಪರಿಹಾರ ನೀಡಲಾಗುತ್ತದೆ ಎಂದು ಹೇಳಿದರು.

ಮಕ್ಕಳ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ.ಮೇಘಶ್ರೀ, ಮೇಲ್ವಿಚಾರಕರಾದ ಪ್ರಫುಲ್ ಮೆಂಡನ್, ಆರೋಗ್ಯ ಇಲಾಖೆಯ ಸಿಬ್ಬಂದಿಗಳು, ತಾಯಂದಿರು, ಗರ್ಭಿಣಿಯರು ಮತ್ತು ಇತರರು ಇದ್ದರು. ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಎಚ್.ಕೆ.ಶಾಂತಿ ನಿರೂಪಿಸಿ, ಸ್ವಾಗತಿಸಿ ಮತ್ತು ವಂದಿಸಿದರು.

## ಡಾ. ಹೆಚ್.ಡಿ.ಚೌಡಯ್ಯರವರ 99ನೇ ಜನ್ಮದಿನಾಚರಣೆ

# ರಾಜ್ಯಮಟ್ಟದ ಪ್ರಶಸ್ತಿ ಪ್ರದಾನ ಸೆ.25ಕ್ಕೆ



**ಮಂಡ್ಯ:** ದಿ. ಡಾ. ಹೆಚ್.ಡಿ. ಚೌಡಯ್ಯರವರ 99ನೇ ಜನ್ಮದಿನಾಚರಣೆ ಮತ್ತು 2026ನೇ ಸಾಲಿನ ರಾಜ್ಯಮಟ್ಟದ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಸೆ.25ರ ಶುಕ್ರವಾರ ಬೆಳಿಗ್ಗೆ 11 ಗಂಟೆಗೆ ಪಿ.ಇ.ಎಸ್. ಇಂಜಿನಿಯರಿಂಗ್ ಕಾಲೇಜಿನ ಕೆ.ವಿ. ಶಂಕರಗೌಡ ಸಭಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ಪಿಇಟಿ ಟ್ರಸ್ಟ್ ನ ಡಾ.ರಾಮಲಿಂಗಯ್ಯ ಅವರು ತಿಳಿಸಿದರು.

ನಗರದಲ್ಲಿ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಅವರು ಮಾತನಾಡಿದ ಅವರು ಮಂಡ್ಯ ಜಿಲ್ಲೆಯ ಹಿರಿಯ ನಾಯಕರು, 8 ಬಾರಿ ಶಾಸಕರಾಗಿ ಆಯ್ಕೆಗೊಂಡು ರಚನಾತ್ಮಕ ಚಟುವಟಿಕೆಗಳ ಮೂಲಕ ನಾಡಿನಲ್ಲೇ ಹೆಸರಾದವರು, ಜನತಾ ಶಿಕ್ಷಣ ಟ್ರಸ್ಟ್ ನ ಅಧ್ಯಕ್ಷರಾಗಿ 30 ವರ್ಷ ಸೇವೆ ಸಲ್ಲಿಸಿದ ದಿ. ಡಾ. ಹೆಚ್.ಡಿ. ಚೌಡಯ್ಯರವರು ತಮ್ಮ ಪ್ರಾಮಾಣಿಕತೆ, ಕರ್ತವ್ಯ ಬದ್ಧತೆಗೆ ಹೆಸರಾಗಿದ್ದರು. ಅವರ ಸೇವೆಯನ್ನು ಗುರುತಿಸಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯವು 2012ರಲ್ಲಿ ಗೌರವ ಡಾಕ್ಟರೇಟ್ ನೀಡಿತ್ತು.ಅವರ ಹೆಸರಿನಲ್ಲಿ ಪ್ರತಿ ವರ್ಷ 3 ಕ್ಷೇತ್ರಗಳಲ್ಲಿ ತಲಾ 20 ಸಾವಿರ ರೂ. ನಗದು ಹಾಗೂ ಪ್ರಶಸ್ತಿ ಫಲಕ ಮತ್ತು ಸಮಾರಂಭದ ಅಧ್ಯಕ್ಷತೆಯನ್ನು ಪಿಇಟಿ ಟ್ರಸ್ಟ್ ಅಧ್ಯಕ್ಷ ಕೆಎಸ್ ವಿಜಯ್ ಆನಂದ್ ವಹಿಸಲಿದ್ದು, ಟ್ರಸ್ಟ್ ನ ಧರ್ಮದರ್ಶಿ ಎಚ್ ಸಿ ಮೋಹನ್ ಕುಮಾರ್ ಭಾಗವಹಿಸುವರು.

ಹೊಳಲು ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿಗಳಾದ ಬಿಂದುಶ್ರೀ ಡಿಎಸ್ ಮತ್ತು ಪ್ರಸನ್ನ ಎಂ ರವರಿಗೆ ಶ್ರೀ ವೆಂಕಟೇಶ್ವರ ವಿದ್ಯಾನಿಕೇತನ ಪ್ರೌಢಶಾಲೆಯ ನಂದಿತಾ ಮತ್ತು ಪ್ರಜ್ವಲ್ ಅವರಿಗೆ ತಲಾ 5 ಸಾವಿರ ರೂ. ಪುರಸ್ಕಾರ ನೀಡಲಾಗುತ್ತಿದೆ ಎಂದರು.

ಸೆ.25 ರ ಕೆ.ಎಸ್. ವಿಜಯಾನಂದ ಅವರು ಅಧ್ಯಕ್ಷತೆ ವಹಿಸಲಿದ್ದು, ಡಾ. ಬಿ.ಆರ್. ರವಿಕಾಂತೇಗೌಡ, ಐಪಿಎಸ್ (ನಿ) ಅವರು ಉದ್ಘಾಟಿಸಿ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಅವರು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಟ್ರಸ್ಟ್ ನ ಉಪಾಧ್ಯಕ್ಷ ಎಂ.ಬಿ. ಶ್ರೀಧರ್ ಅವರು ಹಾಜರಿದ್ದರು.

**ಪ್ರಶಸ್ತಿ ಪುರಸ್ಕೃತರ ಪರಿಚಯ**

**ಸಮಾಜ ಸೇವಾ ಪ್ರಶಸ್ತಿ – ಡಾ. ಎಸ್.ಎಸ್. ರಾಮೇಗೌಡ:** ಶಿಕ್ಷಕರಾಗಿ ವೃತ್ತಿ ಆರಂಭಿಸಿ ಕನಕಪುರದ ರೂರಲ್ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ, ಪ್ರಾಂಶುಪಾಲರಾಗಿ, ಭಾರತೀನಗರದ ಭಾರತೀ ವಿದ್ಯಾಸಂಸ್ಥೆಯಲ್ಲಿ ಪ್ರಾಂಶುಪಾಲರಾಗಿ ಸೇವೆ. ಇಂದಿರಾ ಗಾಂಧಿ ಮುಕ್ತ ವಿವಿ ಬೆಂಗಳೂರು ಪ್ರಾದೇಶಿಕ ನಿರ್ದೇಶಕರು, ನವದೆಹಲಿ ಮುಖ್ಯ ಕಛೇರಿ ನಿರ್ದೇಶಕರು, ಕರ್ನಾಟಕ ರಾಜ್ಯ ಮುಕ್ತ ವಿವಿ ಕುಲಪತಿಯಾಗಿ ಸೇವೆ. 5 ದಶಕಗಳ ಶೈಕ್ಷಣಿಕ ಸೇವೆ, ಗಉಉಅ, ಖಉಓಔಗ, ಆಅಇ, ಂಖಅಖಇ ಮಂಡಳಿಗಳಲ್ಲಿ ಸೇವೆ, ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು.

**ಕ್ರೀಡಾ ಪ್ರಶಸ್ತಿ – ಕೆ.ಎಸ್. ಶಿಲ್ಪಾ:** ಮೈಸೂರು ಜಿಲ್ಲೆ ಕೆ.ಆರ್. ನಗರ ತಾಲೂಕು ಕಂಚೀಗರ ಕೊಪ್ಪಲು ಗ್ರಾಮದವರು, ಅಂತರಾಷ್ಟ್ರೀಯ ಕ್ರೀಡಾಪಟು. ಸಿಟ್ಟಿಂಗ್ ವಾಲಿಬಾಲ್ ನಲ್ಲಿ 4 ವರ್ಷ ಕರ್ನಾಟಕ ತಂಡದ ನಾಯಕಿಯಾಗಿ 2 ಚಿನ್ನ, 2 ಬೆಳ್ಳಿ. ಶಾಟ್ ಪುಟ್, ಡಿಸ್ಕಸ್ ಥ್ರೋ, ಜಾವೆಲಿನ್ ಥ್ರೋ ನಲ್ಲಿ ಗ್ಲಾಸ್ಗೋ, ದುಬೈ, ಥೈಲ್ಯಾಂಡ್ ಸೇರಿದಂತೆ ರಾಷ್ಟ್ರೀಯ, ಅಂತರಾಷ್ಟ್ರೀಯ ಮಟ್ಟದಲ್ಲಿ ಚಿನ್ನ, ಬೆಳ್ಳಿ, ಕಂಚಿನ ಪದಕ. ಕಾಮನ್ ವೆಲ್ತ್ ನಲ್ಲಿ ಕರ್ನಾಟಕದ ಮೊದಲ ಪದಕ ಪಡೆದ ಮೊದಲ ಕನ್ನಡತಿ.

ಕೃಷಿ ಪ್ರಶಸ್ತಿ – ಎನ್. ವೆಂಕಟೇಶ್: ಶ್ರೀರಂಗಪಟ್ಟಣ ತಾಲ್ಲೂಕಿನ ಪಾಲಹಳ್ಳಿಯ ಶ್ರೀ ಎನ್. ವೆಂಕಟೇಶ್ ರವರು ಕೃಷಿಯನ್ನೇ ಪ್ರವಾಸೋದ್ಯಮವನ್ನಾಗಿ ಮಾಡಿದ ಮಾದರಿ ಪ್ರಗತಿಪರ ಕೃಷಿಕರು. ಸಾವಯವ ಸಮಗ್ರ ಕೃಷಿ ಬಗ್ಗೆ ಯುವ ರೈತರಿಗೆ ತರಬೇತಿ ನೀಡುತ್ತಾ ಕೃಷಿಯಲ್ಲಿ ನಾವೀನ್ಯತೆ ಅಳವಡಿಸಿಕೊಂಡಿದ್ದಾರೆ. ತಮ್ಮ 05 ಎಕರೆ ಜಮೀನಿನಲ್ಲಿ ರಾಜಮುಡಿ, ರತ್ನಚೂಡಿ, ಸಿದ್ದಸಣ್ಣ, ಹೆಚ್.ಎಂ.ಟಿ. ಸೇರಿದಂತೆ ದೇಸಿ ತಳಿಯ ರಾಗಿ, ಹಣ್ಣು, ತರಕಾರಿ, ಸೊಪ್ಪು, ಹಾಲು, ತುಪ್ಪ, ಮೀನು, ಮೇಕೆ, ಎರೆಹುಳು ಗೊಬ್ಬರ ಹೀಗೆ ಸಮಗ್ರ ಕೃಷಿ ಮಾಡುತ್ತಾ ಮಂಡ್ಯ ಜಿಲ್ಲೆಯ ಸಾವಯವ ಕೃಷಿಕರೆಂದು ಗುರುತಿಸಿಕೊಂಡಿದ್ದಾರೆ. ಇವರ "ಕೃಷಿ ಪ್ರವಾಸೋದ್ಯಮ" ಪರಿಕಲ್ಪನೆಯು ಇಟಲಿ, ಜರ್ಮನಿ, ಫ್ರಾನ್ಸ್ ಸೇರಿದಂತೆ ಹಲವು ದೇಶದ ರೈತರಿಗೂ ಸ್ಫೂರ್ತಿಯಾಗಿದೆ.

ಈ ಮೂವರ ಸಾಧನೆಯನ್ನು ಗುರುತಿಸಿ ಮಂಡ್ಯದ ಜನತಾ ಶಿಕ್ಷಣ ಟ್ರಸ್ಟ್ (ರಿ.) ವತಿಯಿಂದ 2026ನೇ ಸಾಲಿನ ರಾಜ್ಯಮಟ್ಟದ ಡಾ. ಹೆಚ್.ಡಿ. ಚೌಡಯ್ಯ ಸಮಾಜ ಸೇವೆ,ಕ್ರೀಡಾ ಹಾಗೂ ಕೃಷಿ ಪ್ರಶಸ್ತಿ (ರೂ. 20,000 ನಗದು) ನೀಡಿ ಗೌರವಿಸಲಾಗುತ್ತಿದೆ.

## ಪರೀಕ್ಷಾ ಶುಲ್ಕ ಪಾವತಿಸಲು ಅವಕಾಶ

**ಮಡಿಕೇರಿ:** 2026ನೇ ಶೈಕ್ಷಣಿಕ ಸಾಲಿನ ನವೆಂಬರ್/ಡಿಸೆಂಬರ್ ತಿಂಗಳಲ್ಲಿ ನಡೆಯಲಿರುವ ಮಂಗಳೂರು ವಿಶ್ವವಿದ್ಯಾಲಯದ ವಿವಿಧ ಪದವಿ ಕಾರ್ಯಕ್ರಮಗಳ ಪ್ರಥಮ, ತೃತೀಯ ಹಾಗೂ 5ನೇ ಸೆಮಿಸ್ಟರ್ ಪದವಿ ಪರೀಕ್ಷೆಗಳ ಪುನರಾವರ್ತಿತ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕ ಪಾವತಿಸಲು ಅವಕಾಶ ಕಲ್ಪಿಸಲಾಗಿದೆ.

ಪುನರಾವರ್ತಿತ ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕವನ್ನು ಯಾವುದೇ ದಂಡ ಶುಲ್ಕವಿಲ್ಲದೆ ಅಕ್ಟೋಬರ್ 7 ಕ್ಕೆ ಪಾವತಿಸಬಹುದಾಗಿದೆ. ದಂಡ ಶುಲ್ಕದೊಂದಿಗೆ ಶುಲ್ಕ ಪಾವತಿಸಲು ಅ.12 ಕೊನೆಯ ದಿನಾಂಕವಾಗಿರುತ್ತದೆ. ದಂಡ ಶುಲ್ಕವಾಗಿ ರೂ.300 ಪಾವತಿಸಬೇಕಾಗುತ್ತದೆ. ವಿದ್ಯಾರ್ಥಿಗಳು ಈ ಅವಕಾಶವನ್ನು ಸದುಪಯೋಗಪಡಿಸಿಕೊಂಡು ನಿಗದಿತ ಅವಧಿಯೊಳಗೆ ಪರೀಕ್ಷಾ ಶುಲ್ಕ ಪಾವತಿಸುವಂತೆ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕಾಲೇಜಿನ ಪ್ರಾಂಶುಪಾಲರು ತಿಳಿಸಿದ್ದಾರೆ.

## ಅರ್ಜಿ ಆಹ್ವಾನ

**ಮಡಿಕೇರಿ :** ರಾಷ್ಟ್ರೀಯ ಇಂಡಿಯನ್ ಮಿಲಿಟರಿ ಕಾಲೇಜು ಡೆಹ್ರಾಡೂನ್ ಇಲ್ಲಿಗೆ 2027ನೇ ಸಾಲಿನ ಪ್ರವೇಶಕ್ಕಾಗಿ ನಡೆಯುವ ಪ್ರವೇಶ ಪರೀಕ್ಷೆಯು 2026 ಡಿಸೆಂಬರ್‌ನಲ್ಲಿ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ(ಎನ್‌ಟಿಎ) ಮುಖಾಂತರ ನಡೆಸಲಾಗುವುದು ಎಂದು ತಿಳಿಸಿದೆ. ಅರ್ಜಿ ಸಲ್ಲಿಸಲು ಆರ್‌ಐಎಂಸಿ ವೆಬ್‌ಸೈಟ್ rimc,edu.in ಮಾಹಿತಿ ಲಭ್ಯವಿದೆ ಎಂದು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಜಂಟಿ ನಿರ್ದೇಶಕರು ತಿಳಿಸಿದ್ದಾರೆ.

## ಮೀನು ಹಿಡಿಯುವ ಸಲಕರಣೆಗಳ ವಿತರಣೆ

**ಮಡಿಕೇರಿ:** ಕೊಡಗು ಜಿಲ್ಲೆಯ ಮೀನುಗಾರಿಕೆ ಇಲಾಖೆಯಲ್ಲಿ 2026-27 ನೇ ಸಾಲಿನಲ್ಲಿ ಕೊಡಗು ಜಿಲ್ಲೆಯ ಮೀನುಗಾರಿಕೆ ಇಲಾಖೆ ವತಿಯಿಂದ ಪ.ಜಾತಿ, ಪ.ಪಂಗಡದ ಮತ್ತು ಸಾಮಾನ್ಯ ವರ್ಗದ ಮೀನು ಹಿಡಿಯುವ ಸಲಕರಣೆಗಳ ವಿತರಣೆ" ಸೌಲಭ್ಯ ಪಡೆಯಲು ಅರ್ಜಿ ಆಹ್ವಾನಿಸಲಾಗಿದೆ.

ಕೊಡಗು ಜಿಲ್ಲೆಯ ಮೀನುಗಾರಿಕೆ ಇಲಾಖೆ ವತಿಯಿಂದ ಜಿಲ್ಲಾವಲಯ ಒಳನಾಡು ಮೀನುಗಾರಿಕೆ ಅಭಿವೃದ್ಧಿಗೆ ಸಹಾಯ ಕಾರ್ಯಕ್ರಮದಡಿ ಪ.ಜಾತಿ/ಪ.ಪಂಗಡದ ಮತ್ತು ಸಮಗ್ರ ಮೀನುಗಾರಿಕೆ ಅಭಿವೃದ್ಧಿ ಯೋಜನೆಯಡಿ ಸಾಮಾನ್ಯ ವರ್ಗದ ಮೀನು ಕೃಷಿಕರಿಗೆ ಮೀನು ಹಿಡಿಯುವ ಸಲಕರಣೆಯನ್ನು ಉಚಿತವಾಗಿ ವಿತರಿಸಲು "ಸೇವಾ ಸಿಂಧು" ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿದೆ. ಅರ್ಹ ಮೀನುಗಾರರಿಗೆ/ ಮೀನು ಕೃಷಿಕರಿಗೆ ಅರ್ಜಿ ಸಲ್ಲಿಸಲು ಅಕ್ಟೋಬರ್, 9 ರವರೆಗೆ ವಿಸ್ತರಿಸಲಾಗಿದೆ.

ಹೆಚ್ಚಿನ ಮಾಹಿತಿಗೆ ಮೀನುಗಾರಿಕೆ ಇಲಾಖೆಯ ತಾಲ್ಲೂಕು ಕಚೇರಿಗಳನ್ನು ಸಂಪರ್ಕಿಸಲು ಕೋರಿದೆ. ಲಿಂಕ್: https://sevaone.karnataka.gov.in/services/directApply.do?serviceId=2763 ನ್ನು ಸಂಪರ್ಕಿಸಬಹುದು ಎಂದು ಮೀನುಗಾರಿಕೆ ಇಲಾಖೆ ಉಪ ನಿರ್ದೇಶಕರಾದ ಸಚಿನ್ ಅವರು ತಿಳಿಸಿದ್ದಾರೆ.

## ಅ.08 ರಂದು ಅಂಚೆ ಅದಾಲತ್ ಮುಂದಿನ ಸಭೆ




**ಮಡಿಕೇರಿ:** ಅಂಚೆ ಅದಾಲತ್‌ನ ಮುಂದಿನ ಸಭೆಯು ಅಕ್ಟೋಬರ್, 08 ರಂದು ಸಂಜೆ 4 ಗಂಟೆಗೆ ಕೊಡಗು ಅಂಚೆ ವಿಭಾಗದ, ವಿಭಾಗೀಯ ಕಚೇರಿ, ಸಿದ್ದಾಪುರ ರಸ್ತೆ, ಅಶೋಕ್ ಪುರದಲ್ಲಿ ನಡೆಯಲಿದೆ.

ಸಭೆಯಲ್ಲಿ ಕೊಡಗು ಅಂಚೆ ವಿಭಾಗದ ಅಂಚೆ ಸೇವೆಗೆ ಸಂಬಂಧಿಸಿದ ಎಲ್ಲಾ ತರಹದ ದೂರುಗಳನ್ನು ಸ್ವೀಕರಿಸಿ ಚರ್ಚಿಸಲಾಗುತ್ತದೆ. ದೂರುಗಳಿದ್ದಲ್ಲಿ ಅಂಚೆ ಅದಾಲತ್ ಎಂದು ಬರೆದು ಅಂಚೆ ಅಧೀಕ್ಷಕರು, ಕೊಡಗು ಅಂಚೆ ವಿಭಾಗ, ಮಡಿಕೇರಿ -571201 ಇವರಿಗೆ ಅಕ್ಟೋಬರ್, 05 ರೊಳಗೆ ತಲುಪುವಂತೆ ಕಳುಹಿಸಲು ಕೋರಿದೆ. ನಂತರ ಅಕ್ಟೋಬರ್, 08 ರಂದು ನಡೆಯುವ ಸಭೆಯಲ್ಲಿ ಭಾಗವಹಿಸಬಹುದು ಎಂದು ಕೊಡಗು ಅಂಚೆ ವಿಭಾಗದ ಅಂಚೆ ಅಧೀಕ್ಷಕರು ತಿಳಿಸಿದ್ದಾರೆ.

# ಸಂಘಟನಾ ಚತುರ, ಸಮಾಜಮುಖಿ ಕಳಕಳಿಯ ಪ್ರತೀಕವಾಗಿದ್ದ ಬಿ.ಎಂ.ಅಪ್ಪಾಜಪ್ಪ : ಗಣ್ಯರ ನುಡಿನಮನ

**ಮಂಡ್ಯ:** ಜಿಲ್ಲೆಯ ಹಿರಿಯ ಸಂಘಟಕ ದಿ. ಬಿ.ಎಂ.ಅಪ್ಪಾಜಪ್ಪ ಅವರ ನುಡಿನಮನ ಮತ್ತು ಸಾರ್ವಜನಿಕ ಶ್ರದ್ಧಾಂಜಲಿ ಸಭೆಯು ನಗರದ ಗಾಂಧಿ ಭವನದಲ್ಲಿ ಮಂಗಳವಾರ ಸಂಜೆ ಅಪಾರ ಸಂಖ್ಯೆಯ ಜನರ ಸಮ್ಮುಖದಲ್ಲಿ ಜರುಗಿತು.

**ಜಿಲ್ಲೆಗೆ ಭರಿಸಲಾರದ ನಷ್ಟ – ಕೆ.ಟಿ. ಶ್ರೀಕಂಠೇಗೌಡ**

ಸಭೆಯಲ್ಲಿ ಪ್ರಮುಖವಾಗಿ ಮಾತನಾಡಿದ ವಿಧಾನ ಪರಿಷತ್ ಮಾಜಿ ಸದಸ್ಯ ಕೆ.ಟಿ. ಶ್ರೀಕಂಠೇಗೌಡ, ಬಿ.ಎಂ. ಅಪ್ಪಾಜಪ್ಪ ಸಾಹಿತ್ಯ,ನೌಕರರ ಸಂಘಟನೆ ಮತ್ತು ಸಾಂಸ್ಕೃತಿಕ ರಂಗದ ವಿವಿಧ ಸಂಸ್ಥೆಗಳಲ್ಲಿ ಸದಾ ಕ್ರಿಯಾಶೀಲರಾಗಿ ತೊಡಗಿಸಿಕೊಂಡಿದ್ದ ಸಂಘಟನಾ ಚತುರರು. ಅವರು ಭಾವನಾತ್ಮಕ ಜೀವಿಯಾಗಿದ್ದು, ರಂಗಭೂಮಿ, ಸಾಮಾಜಿಕ ಚಟುವಟಿಕೆಗಳು ಹಾಗೂ ಹೋರಾಟಗಳಿಗೆ ಸದಾ ಬೆಂಬಲವಾಗಿ ನಿಲ್ಲುತ್ತಿದ್ದ ಅಪರೂಪದ ವ್ಯಕ್ತಿತ್ವ ಹೊಂದಿದ್ದರು. ಅವರ ಅಗಲಿಕೆಯು ಇಡೀ ಜಿಲ್ಲೆಗೆ ಹಾಗೂ ಅವರ ಕುಟುಂಬಕ್ಕೆ ಭರಿಸಲಾರದ ದೊಡ್ಡ ನಷ್ಟವಾಗಿದೆ. ಭಗವಂತನು ಅವರ ಕುಟುಂಬಕ್ಕೆ ಈ ದುಃಖವನ್ನು ಭರಿಸುವ ಶಕ್ತಿಯನ್ನು ನೀಡಲಿ ಎಂದುರು.

ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ಜನರು ಸೇರಿ ಶ್ರದ್ಧಾಂಜಲಿ ಸಲ್ಲಿಸುತ್ತಿರುವುದು ಅಪ್ಪಾಜಪ್ಪನವರ ಜನಪ್ರಿಯತೆ ಹಾಗೂ ಸಮಾಜಮುಖಿ ವ್ಯಕ್ತಿತ್ವಕ್ಕೆ ಸಾಕ್ಷಿಯಾಗಿದೆ ಎಂದು ಸಂಘಟಕರಿಗೆ ಅಭಿನಂದನೆ ಸಲ್ಲಿಸಿ, ಅವರ ಆತ್ಮಕ್ಕೆ ಸದ್ಗತಿ ಸಿಗಲಿ ಎಂದು ಪ್ರಾರ್ಥಿಸಿದರು.

**ದಾನ ಮಾಡುತ್ತಿದ್ದ ಉದಾರಿ – ವಕೀಲ ಗುರುಪ್ರಸಾದ್:** ವಕೀಲ ಗುರುಪ್ರಸಾದ್ ಮಾತನಾಡಿ, ಯಾವುದೇ ಸಾರ್ವಜನಿಕ -ಸಾಂಸ್ಕೃತಿಕ ಕಾರ್ಯಕ್ರಮ,ದಾಸೋಹ ಅಥವಾ ದೇವಸ್ಥಾನಗಳ ಕೆಲಸಗಳಿಗೆ ಹಣದ ಕೊರತೆ ಬಂದರೆ ತಕ್ಷಣ ತಮ್ಮ ಸ್ವಂತ ಜೇಬಿನಿಂದ ಹಣ ನೀಡಿ ನೆರವಾಗುತ್ತಿದ್ದ ಉದಾರ ಮನಸ್ಸು ಅಪ್ಪಾಜಪ್ಪನವರದ್ದು. ಸಂಘಟನಾ ಕಾರ್ಯಗಳನ್ನು ಯಶಸ್ವಿಯಾಗಿ ನಡೆಸುತ್ತಿದ್ದರು. ಜಾತಿ-ಧರ್ಮ ಮೀರಿದ ಪ್ರೀತಿ ಮತ್ತು ಸಹಾಯ ಮಾಡುವ ಅಪರೂಪದ ಮಾನವೀಯ ಗುಣ ಅವರಲ್ಲಿತ್ತು ಎಂದರು.

**ಸಾಂಸ್ಕೃತಿಕ ಲೋಕಕ್ಕೆ ತುಂಬಲಾರದ ನಷ್ಟ :** ಕೆ.ಟಿ.ಹನುಮಂತು



### ಸಮಾಜಕ್ಕೆ ಮಾದರಿಯಾದ ವ್ಯಕ್ತಿತ್ವ - ಪುತ್ರಿ ಅನಿತಾ ಭಾವುಕ ನುಡಿ

**ತಂದೆ ಬಿ.ಎಂ. ಅಪ್ಪಾಜಪ್ಪನವರ ಬಗ್ಗೆ ಮಾತನಾಡಿದ ಪುತ್ರಿ ಅನಿತಾ, ನಮ್ಮ ತಂದೆ ತಮ್ಮ ಜೀವಿತಾವಧಿಯಲ್ಲಿ ಸದಾ ಸಮಾಜದ ಏಳಿಗೆ ಬಗ್ಗೆ ಆಲೋಚಿಸುತ್ತಾ ತಮ್ಮ ತನು-ಮನ-ಧನವನ್ನು ಕಾಯಾ ವಾಚಾ ಮನಸಾ ಸಮಾಜಕ್ಕೆ ಅರ್ಪಿಸಿದವರು. ಅಂತಹ ತಂದೆಯ ಮಕ್ಕಳೆನ್ನಲು ನಮಗೆ ಅತ್ಯಂತ ಹೆಮ್ಮೆ ಎನಿಸುತ್ತದೆ. ಬಸವಣ್ಣನವರ "ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ..." ಎನ್ನುವ ತತ್ವಗಳನ್ನು ಮನೆಯಲ್ಲಿ, ಮನಸ್ಸಿನಲ್ಲಿ, ಸಮಾಜದಲ್ಲಿ ಅಳವಡಿಸಿಕೊಂಡು ಜೀವಿಸಿದವರು. "ಹಿಂದೆ ಬಂದರೆ ಒದೆಯಬೇಡ, ಮುಂದೆ ಬಂದರೆ ಹಾಯಬೇಡ" ಎನ್ನುವ ಪುಣ್ಯಕೋಟಿಯಂತಹ ಸಾತ್ವಿಕ ಗುಣ ಹೊಂದಿದ್ದರು. ಅವರು ಕೇವಲ ಕುಟುಂಬಕ್ಕೆ ಸೀಮಿತವಾಗದೆ ಇಡೀ ಸಮಾಜಕ್ಕೆ ಮಾದರಿಯಾದ ವ್ಯಕ್ತಿತ್ವ ಬೆಳೆಸಿಕೊಂಡಿದ್ದರು. ಜಾತಿ, ದೇಶ, ರಾಜ್ಯಗಳ ಗಡಿಗಳನ್ನು ಮೀರಿ ನಾವೆಲ್ಲರೂ 'ವಿಶ್ವಮಾನವರು' ಎನ್ನುವ ಭಾವನೆಯನ್ನು ಬದುಕಿನ ಮೂಲಕ ತೋರಿಸಿಕೊಟ್ಟಿದ್ದಾರೆ. ನಾವು ಮತ್ತೊಬ್ಬರಿಗೆ ಒಳಿತನ್ನು ಬಯಸುತ್ತಾ, ಒಳಿತನ್ನೇ ಮಾಡುತ್ತಾ ಸಜ್ಜನರಾಗಿ ಬದುಕುವ ಮೂಲಕ ಪಂಚಭೂತಗಳ ಋಣ ತೀರಿಸಬೇಕು ಹಾಗೂ ಅದೇ ಅವರಿಗೆ ನೀಡುವ ನಿಜವಾದ ಗೌರವ ಎಂದು ಭಾವುಕವಾಗಿ ಮನವಿ ಮಾಡಿದರು.**

**ಸೆ. 27 ರ ಭಾನುವಾರ ಬಸರಾಳಿನಲ್ಲಿ ನಡೆಯಲಿರುವ ಪುಣ್ಯತಿಥಿ ಕಾರ್ಯಕ್ರಮಕ್ಕೆ ಎಲ್ಲರೂ ಆಗಮಿಸಬೇಕೆಂದು ವಿನಂತಿಸಿದರು.**

ಸಾಹಿತ್ಯ-ಸಾಂಸ್ಕೃತಿಕ ಚಿಂತಕ ಕೆ.ಟಿ. ಹನುಮಂತು ಮಾತನಾಡಿ, ಬಿ.ಎಂ. ಅಪ್ಪಾಜಪ್ಪನವರು ಮಂಡ್ಯ ಜಿಲ್ಲೆಯಲ್ಲಿ ನಡೆಯುತ್ತಿದ್ದ ಪ್ರತಿಯೊಂದು ಸಭೆ, ಸಮಾರಂಭ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಸದಾ ಮುಂಚೂಣಿಯಲ್ಲಿ ಇರುತ್ತಿದ್ದರು. ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಕರು ಬಂದಾಗ ಯಾರನ್ನೂ ಬರಿಗೈಯಲ್ಲಿ ಕಳುಹಿಸುತ್ತಿರಲಿಲ್ಲ. ತಮ್ಮ ಜೇಬಿನಿಂದಲೇ ಕನಿಷ್ಠ 5,000 ರೂ.ವರೆಗೆ ನೀಡಿ ಪ್ರೋತ್ಸಾಹಿಸುತ್ತಿದ್ದ ನಿಜವಾದ 'ಕೊಡುಗೈ ದಾನಿ' ಅವರಾಗಿದ್ದರು ಎಂದರು.

**ಸರಿಸಾಟಿ ಇಲ್ಲದ ಸಂಘಟಕ – ಮಂಜುನಾಥ್:** ಕನ್ನಡ ಸೇನೆ ಜಿಲ್ಲಾಧ್ಯಕ್ಷ ಹೆಚ್.ಎಸ್. ಮಂಜುನಾಥ್ ಮಾತನಾಡಿ, ಬಿ.ಎಂ. ಅಪ್ಪಾಜಪ್ಪನವರು ಕೇವಲ ಒಂದೇ ಕ್ಷೇತ್ರಕ್ಕೆ ಸೀಮಿತವಾಗದೆ ರಂಗಭೂಮಿ, ಸಾಹಿತ್ಯ, ಸಾಮಾಜಿಕ ಹೋರಾಟಗಳು ಹಾಗೂ ಸರ್ಕಾರಿ ನೌಕರರ ಸಂಘಟನೆ ಸೇರಿದಂತೆ ಎಲ್ಲ ಕ್ಷೇತ್ರಗಳಲ್ಲೂ ಸಕ್ರಿಯವಾಗಿ ತೊಡಗಿಸಿಕೊಂಡು ಅರ್ಥಪೂರ್ಣ ಬದುಕು ನಡೆಸಿದ ಅಪರೂಪದ ಸಂಘಟಕ ಮತ್ತು ಹೋರಾಟಗಾರ. ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಮಂಡ್ಯದಲ್ಲಿ ನಡೆದಾಗ ಪ್ರತಿಯೊಂದು ಉದ್ಯಾನವನ ಮತ್ತು ಸಾರ್ವಜನಿಕ ಸ್ಥಳಗಳಿಗೆ ತೆರಳಿ ಜನರಲ್ಲಿ ಜಾಗೃತಿ ಮೂಡಿಸಿ ಸಮ್ಮೇಳನ ಯಶಸ್ವಿಯಾಗಲು ಶ್ರಮಿಸಿದ್ದರು ಎಂದರು.

**ಮುಗ್ಧ ಮನಸ್ಸಿನ ಅಪ್ಪಾಜಪ್ಪ – ಸುಜಾತಾ ಕೃಷ್ಣ:** ನಗರ ಕಸಾಪ ಮಾಜಿ ಅಧ್ಯಕ್ಷೆ ಸುಜಾತಾಕೃಷ್ಣ ಮಾತನಾಡಿ ಅವರು ಅನಾರೋಗ್ಯದಿಂದಿದ್ದಾಗ ಸ್ನೇಹಿತರು ಮನೆಗೆ ಭೇಟಿ ನೀಡಿದಾಗ ಏಳಲು ಸಾಧ್ಯವಾಗದಿದ್ದರೂ ಬಾಗಿಲಿಗೆ ಬಂದವರನ್ನು ಉಪಚರಿಸಿ ಕಾಫಿ ಕುಡಿದೇ ಹೋಗಬೇಕೆಂದು ಪ್ರೀತಿಯಿಂದ ಒತ್ತಾಯಿಸುತ್ತಿದ್ದರು. ಅವರ ಪತ್ನಿ ಚಂದ್ರಮ್ಮನವರು ಯಾವುದೇ ಬೇಸರವಿಲ್ಲದೆ ಎಲ್ಲರನ್ನೂ ನಗುಮುಖದಿಂದ ಉಪಚರಿಸಿ ಅಚ್ಚುಕಟ್ಟಾಗಿ ಸೇವೆ ಮಾಡಿದ್ದಾರೆ. ಮುಗ್ಧ ಮನಸ್ಸಿನ ಅಪ್ಪಾಜಪ್ಪನವರ ಅಗಲಿಕೆಯು ಕನ್ನಡ ಸಾಹಿತ್ಯ ಪರಿಷತ್, ವಿವಿಧ ಸಂಘಟನೆಗಳು ಹಾಗೂ ಅವರ ಕುಟುಂಬಕ್ಕೆ ಅಪಾರ ನಷ್ಟ ಉಂಟುಮಾಡಿದೆ ಎಂದರು. ಇದಕ್ಕೂ ಮುನ್ನ ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷರಾದ ಎಂ.ವಿ. ಧರಣೇಂದ್ರಯ್ಯ, ಜಿ.ಟಿ. ವೀರಪ್ಪ, ಜೈ ಕರ್ನಾಟಕ ಪರಿಷತ್ ರಾಜ್ಯಾಧ್ಯಕ್ಷ ಎಸ್. ನಾರಾಯಣ್, ಸಿಐಟಿಯು ಕಾರ್ಯದರ್ಶಿ ಸಿ. ಕುಮಾರಿ ಅವರು ಮಾತನಾಡಿದರು. ಸಭೆ ಆರಂಭಕ್ಕೂ ಮುನ್ನ ಬಿ.ಎಂ. ಅಪ್ಪಾಜಪ್ಪನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಲಾಯಿತು. ಕಾರ್ಯಕ್ರಮದಲ್ಲಿ ಸಿ.ಪಿ. ವಿದ್ಯಾಶಂಕರ್ ಮತ್ತು ಆರಾಧ್ಯ ಅವರು ಗಾಯನದ ಮೂಲಕ ಗೀತ ನಮನ ಸಲ್ಲಿಸಿದರು.

ಸಭೆಯಲ್ಲಿ ಬಿ.ಎಂ. ಅಪ್ಪಾಜಪ್ಪನವರ ಹಿತೈಷಿಗಳಾದ ಕೃಷ್ಣೇಗೌಡ ಹುಸ್ಕೂರು,ಧನಂಜಯ ದರಸಗುಪ್ಪೆ, ಮಂಜುನಾಥ್ ಬಲ್ಲೇನಹಳ್ಳಿ,ಎಂ.ಸಿ.ಭಾಸ್ಕರ್,ಎಂ.ಬಿ.ರಮೇಶ್, ಚಿಕ್ಕತಿಮ್ಮಯ್ಯ, ಜಿ.ಎ.ರಮೇಶ್, ಅನಿಲ್, ಕಚ್ಚಿಗೆರೆ ಶಿವಲಿಂಗಯ್ಯ, ಉಮೇಶ್, ಅಪ್ಪಾಜಪ್ಪನವರ ಪತ್ನಿ ಚಂದ್ರಮ್ಮ ಇದ್ದರು.

# ಸೆ.24 ರಂದು ಕೊಡಗು ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟ




**ಮಡಿಕೇರಿ:** ಪ್ರಸಕ್ತ (2026-27) ಸಾಲಿಗೆ ತಾಲ್ಲೂಕು ಮಟ್ಟದಲ್ಲಿ ವಿಜೇತರಾದ ಪುರುಷ ಹಾಗೂ ಮಹಿಳೆಯರಿಗೆ ಹಾಗೂ ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟ ಸ್ಪರ್ಧೆಗಳು ಇಲಾಖೆ ವತಿಯಿಂದ ಸೆಪ್ಟೆಂಬರ್, 24 ರಂದು ನಡೆಯಲಿದೆ.

ಸೆಪ್ಟೆಂಬರ್, 24 ರಂದು ಕೊಡಗು ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟವು ಕೂಡಿಗೆ ಕ್ರೀಡಾ ಶಾಲೆ ಮೈದಾನದಲ್ಲಿ ನಡೆಯಲಿದೆ. ಅಥ್ಲೆಟಿಕ್ಸ್, ವಾಲಿಬಾಲ್, ಫುಟ್ಬಾಲ್(ಪುರುಷರಿಗೆ ಮಾತ್ರ), ಖೋಖೋ, ಕಬ್ಬಡಿ, ಬಾಸ್ಕೆಟ್‌ಬಾಲ್, ಕುಸ್ತಿ, ಹಾಕಿ, ಹ್ಯಾಂಡ್‌ಬಾಲ್, ಥ್ರೋಬಾಲ್, ಬಾಲ್‌ಬ್ಯಾಡ್ಮಿಂಟನ್ ಹಾಗೂ ಯೋಗಾಸನ ಹಾಗೂ ಆಯ್ಕೆ ಕ್ರೀಡೆ ಟೆನ್ನಿಸ್, ನೆಟ್‌ಬಾಲ್, ಟೆಕ್ವಾಂಡೋ, ಜುಡೋ, ವುಷು ಮತ್ತು ಕರಾಟೆ.

ಜಿಲ್ಲಾ ಮಟ್ಟದ ಯೋಗಾಸನದಲ್ಲಿ ಕಡ್ಡಾಯವಾಗಿ ಮಾಡಬೇಕಾದ ಆಸನಗಳು ಪಾದ ಹಸ್ತಾಸನ, ಆಕರ್ಣ ಧನುರಾಸನ, ಊರ್ಧ್ವ ಧನುರಾಸನ, ಅರ್ಧ ಮತ್ಸೇಂದ್ರಾಸನ.

ಸೆಪ್ಟೆಂಬರ್, 24 ರಂದು ಜನರಲ್ ತಿಮ್ಮಯ್ಯ ಜಿಲ್ಲಾ ಕ್ರೀಡಾಂಗಣದಲ್ಲಿ ಷಟಲ್ ಬ್ಯಾಡ್ಮಿಂಟನ್, ಟೇಬಲ್ ಟೆನ್ನಿಸ್, ಆಯ್ಕೆ ಕ್ರೀಡೆಗಳಾದ ಈಜು-50, 100, 200, 400 ಮೀ. ಫ್ರೀ ಸ್ಟೈಲ್, 50, 100, 200-ಬ್ಯಾಕ್ ಸ್ಟ್ರೋಕ್, 50, 100, 200 ಮೀ. ಬ್ರೆಸ್ಟ್ ಸ್ಟ್ರೋಕ್, 50, 100 ಮೀ. ಬಟರ್ ಫ್ಲೈ, 4*100 ಮೀ. ಫ್ರೀ ಸ್ಟೈಲ್ ರಿಲೇ, 4*100 ಮೀ. ಮಿಡ್ಲೆ ರಿಲೇ, 4*50 ಮೀ ಮಿಕ್ಸಡ್ ಫ್ರೀ ಸ್ಟೈಲ್ ರಿಲೇ, 4*50 ಮೀ. ಮಿಕ್ಸಡ್ ಮಿಡ್ಲೆ ರಿಲೇ (ಮುಕ್ತ ಪಂದ್ಯಾವಳಿ) (ಪುರುಷ ಹಾಗೂ ಮಹಿಳೆಯರಿಗೆ)

ತಾಲ್ಲೂಕು ಮಟ್ಟದ ದಸರಾ ಕ್ರೀಡಾಕೂಟದಲ್ಲಿ ಪುರುಷ ಅಥ್ಲೆಟಿಕ್ಸ್ ಹಾಗೂ ಗುಂಪು ಕ್ರೀಡೆಯಲ್ಲಿ ಭಾಗವಹಿಸಿ ವಿಜೇತರಾದ ಕ್ರೀಡಾಪಟುಗಳು ಹಾಗೂ ಜಿಲ್ಲಾ ಮಟ್ಟದಲ್ಲಿರುವ ಕ್ರೀಡೆಗಳಲ್ಲಿ ನೇರವಾಗಿ ಭಾಗವಹಿಸುವ ಜಿಲ್ಲೆಯ ಆಸಕ್ತ ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟದಲ್ಲಿ ಭಾಗವಹಿಸುವ ಮೂಲಕ ಸಂಪರ್ಕಿಸಬೇಕಾದ ದೂ.ಸಂ.ಮಡಿಕೇರಿ ತಾಲ್ಲೂಕು ಮಹಾಬಲ 9980887499, ಮನು 9480032712, ಸೋಮವಾರಪೇಟೆ ಮತ್ತು ಕುಶಾಲನಗರ ಸುರೇಶ್ 8892272972, ಪ್ರದೀಪ್ 9342563014, ಪೊನ್ನಂಪೇಟೆ ಮತ್ತು ವಿರಾಜಪೇಟೆ ಸುಬ್ಬಯ್ಯ 8197790350 ಹಾಗೂ ಗಣಪತಿ 8951287301 ಇವರನ್ನು ಸಂಪರ್ಕಿಸಬಹುದು ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ವಿ.ಟಿ.ವಿಸ್ಮಯಿ ಅವರು ತಿಳಿಸಿದ್ದಾರೆ.

ಜಿಲ್ಲಾ ಮಟ್ಟದಲ್ಲಿ ಕಡ್ಡಾಯವಾಗಿ ಪಾಲಿಸಬೇಕಾದ ಸೂಚನೆ: ತಾಲ್ಲೂಕು ಮಟ್ಟದಲ್ಲಿ ನಡೆದ ಅಥ್ಲೆಟಿಕ್ಸ್(ವೈಯಕ್ತಿಕ ಸ್ಪರ್ಧೆ), ಪ್ರಥಮ ಸ್ಥಾನ ಮತ್ತು ದ್ವಿತೀಯ ಸ್ಥಾನ ಹಾಗೂ ಗುಂಪು ಸ್ಪರ್ಧೆ ಕ್ರೀಡೆಗಳಲ್ಲಿ ಪ್ರಥಮ ಸ್ಥಾನ ಪಡೆದ ತಂಡದ ಕ್ರೀಡಾಪಟುಗಳಿಗೆ ಮಾತ್ರ ಅವಕಾಶ.

ಜಿಲ್ಲಾ ಮಟ್ಟಕ್ಕೆ ಭಾಗವಹಿಸುವ ಕ್ರೀಡಾಪಟುಗಳು ಆಧಾರ್ ಕಾರ್ಡ್ ಪ್ರತಿ, ಬ್ಯಾಂಕ್ ಪಾಸ್ ಬುಕ್ ಪ್ರತಿ ಹಾಗೂ 2 ಪೋಟೋಗಳನ್ನು ಕಡ್ಡಾಯವಾಗಿ ತರಬೇಕು. ಜಿಲ್ಲಾ ಮಟ್ಟದ ಕ್ರೀಡೆಗಳಿಗೆ ಆನ್‌ಲೈನ್ ನೋಂದಣಿ ಕಡ್ಡಾಯ ಪೋರ್ಟಲ್ ಜಛಿಚಿಡಿಚಿಛಿಟಛಿಣಠಿ.ಟಿ ಬೆಳಗ್ಗೆ 9.30 ರ ಒಳಗೆ ಕಡ್ಡಾಯವಾಗಿ ಸ್ಥಳದಲ್ಲಿ ಹೆಸರು ನೋಂದಾಯಿಸಿಕೊಳ್ಳಬೇಕು. ತೀರ್ಪುಗಾರರ ತೀರ್ಮಾನವೇ ಅಂತಿಮ ಆಗಿರುತ್ತದೆ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

## ಸಾವಿನೆದುರು ಸಾಕ್ಷಾತ್ಕಾರದ ಬೆಳಕು



ಸಾಕ್ಷಾತ್ಕಾರವೆಂದರೆ ಸ್ವಸ್ವರೂಪವನ್ನು ಒಳಗಣ್ಣಿನಿಂದ ಕಾಣುವ ದಿವ್ಯ ಪ್ರಭೆ. ಈ ಜ್ಯೋತಿ ಮೂಡಿದಾಗ ಮಿದುಳಿನ ಡೀಫಾಲ್ಟ್ ಮೋಡ್ ನೆಟ್‌ವರ್ಕ್ ತಣ್ಣಗಾಗಿ ಆಲೋಚನೆಗಳ ಗದ್ದಲ ನಿಶ್ಶಬ್ದವಾಗುತ್ತದೆ. ಗಾಮಾ ತರಂಗ ಉತ್ತುಂಗಕ್ಕೇರಿ ಚಿತ್ತವು ಕನ್ನಡಿಯಂತೆ ನಿರ್ಮಲವಾಗುತ್ತದೆ. ಆತ್ಮಾವಲೋಕನದಲ್ಲಿ ತೊಡಗಿದವರ ಟೆಲೋಮಿಯರ್ ದೀರ್ಘವಾಗಿ ಜೀವಕೋಶಗಳು ಮಂದಗತಿಯಲ್ಲಿ ಮುಪ್ಪಾಗುತ್ತವೆ ಎಂದು ಸ್ಟ್ಯಾನ್‌ಫೋರ್ಡ್ ಹೇಳಿದೆ. ಈ ಒಳನೋಟವೇ ತನುವಿಗೆ ದಿವ್ಯೌಷಧಿ.

ಆತ್ಮಜ್ಞಾನಿ ಸಮಾಜಕ್ಕೆ ಬೆಳಕಿನ ಕಂಬ. ತಾನು ನಾಮ-ಪದವಿಗಿಂತ ಮಿಗಿಲು ಎಂದರಿತ ಅಜ್ಜ ಮೊಮ್ಮಗನ ತಪ್ಪಿಗೆ ರೇಗದೆ ಮಮತೆಯಿಂದ ತಿದ್ದುತ್ತಾನೆ. ಮಮ ಎಂಬ ಬಂಧನ ಕಳಚಿದ ಅಂಗಡಿಯವನು ಬಡ ವಿದ್ಯಾರ್ಥಿಗೆ ಪುಸ್ತಕವನ್ನು ನಿಸ್ವಾರ್ಥವಾಗಿ ನೀಡುತ್ತಾನೆ. ಮಣ್ಣಿನಲ್ಲಿ ಕಂಡ ಎರೆಹುಳುವನ್ನು ?ಇದೂ ಚೇತನದ ಕಣ? ಎಂದು ನಸುನಗುತ್ತಾ ದಾರಿ ಬಿಡುವ ರೈತ ಊರಿಗೆ ಕರುಣೆಯ ಪಾಠ ಕಲಿಸುತ್ತಾನೆ.

ಇಂಥ ನಿರ್ಮಲ ನಡತೆಯಿಂದ ಸ್ವಾರ್ಥದ ಮಂಜು ಕರಗುತ್ತದೆ. ಹಾದಿ ಅತ್ಯಂತ ಸರಳ. ದಿನಾ ಹತ್ತು ನಿಮಿಷ ಕಣ್ಣುಮುಚ್ಚಿ ನಾನು ಉಸಿರಿನ ಸಾಕ್ಷಿ, ದೇಹವಲ್ಲ ಎಂದು ಧ್ಯಾನಿಸಿ. ಬರೆಯುವಾಗ ಪೆನ್ನಿನ ಲಾಸ್ಯಕ್ಕೆ, ನಡೆಯುವಾಗ ಪಾದದ ಸ್ಪರ್ಶಕ್ಕೆ ಏಕಾಗ್ರತೆ ನೀಡಿ. ಯಾರಾದರೂ ಬೈದರೆ ಅದನ್ನು ಶಬ್ದ ಮಾತ್ರ ಎಂದು ಆಲಿಸಿ ಮೌನದಲ್ಲಿರಿ. ವಾರಕ್ಕೊಮ್ಮೆ ಸ್ಮಶಾನದಂಚಿನಲ್ಲಿ ಕುಳಿತು ನಾವೆಲ್ಲ ಒಂದೇ ಧೂಳಿನ ಕಣಗಳು ಎಂದು ಮನನ ಮಾಡಿ. ಆಗ ಅಹಂಕಾರದ ಗೋಡೆ ಕುಸಿಯುತ್ತದೆ. ಮೃತ್ಯುವಿನ ಎದುರಲ್ಲೂ ಅಳುಕದ ಸ್ಥಿತಿ ಸಾಕ್ಷಾತ್ಕಾರದಿಂದಲೇ ಸಾಧ್ಯ. ನಾನು ನಶ್ವರ ಪಂಜರವಲ್ಲ, ಅಮರ ಜ್ಯೋತಿ ಎಂದು ಅರಿತ ಮೇಲೆ ದೇಹ ಬಿಡುವುದು ಬೋನಿನಿಂದ ಹಕ್ಕಿ ಹಾರಿದಂತೆ. ಈ ಅರಿವೇ ಅಮೃತತ್ವದ ರಹಸ್ಯ.

ಅಂಕಣ-29
ಸಾವು ಸಂಕಟಪಡುವ ಸಂಗತಿಗಳು..!



|ಡಾ.ಸುಧಾಕರ.ಜಿ.ಲಕ್ಕವಳ್ಳಿ

# ಕನ್ನಡದ ಕಲಾತಿಲಕನಿಗೆ ದಾದಾಸಾಹೇಬ್ ಫಾಲ್ಕೆ ಗೌರವ; ಅನಂತನಾಗ್ ವೈಭವ!



| ಶಿವಬಸಪ್ಪ ಗು ಜಂಗಾಲಿ
ಲೇಖಕರು ಹಾಗೂ ಸಾಹಿತಿ



ಕನ್ನಡ ಚಿತ್ರರಂಗದ ಇತಿಹಾಸವನ್ನು ತೆರೆದಾಗ ಕೆಲವು ಹೆಸರುಗಳು ಕೇವಲ ನಟರಾಗಿ ಕಾಣಿಸುವುದಿಲ್ಲ. ಅವು ಒಂದು ಕಾಲಘಟ್ಟದ ಕಲಾ ಸಂವೇದನೆಯಾಗಿ, ಕನ್ನಡಿಗರ ನೆನಪಿನ ಭಾಗವಾಗಿ ಮತ್ತು ನಮ್ಮ ಸಾಂಸ್ಕೃತಿಕ ಶ್ರೀಮಂತಿಕೆಯ ಪ್ರತೀಕವಾಗಿ ನಿಲ್ಲುತ್ತವೆ. ಅಂತಹ ಅಪರೂಪದ ಕಲಾವಿದರಲ್ಲಿ ಅನಂತನಾಗ್ ಅವರ ಹೆಸರು ವಿಶಿಷ್ಟ ಸ್ಥಾನ ಪಡೆದಿದೆ. ದಶಕಗಳ ಕಾಲ ತಮ್ಮ ಸಹಜ ಅಭಿನಯದಿಂದ ಕನ್ನಡದ ಬೆಳ್ಳಿತೆರೆಯನ್ನು ಶ್ರೀಮಂತಗೊಳಿಸಿರುವ ಅವರ ಕಲಾ ಪಯಣವೇ ಒಂದು ಸುದೀರ್ಘ ಸೌಂದರ್ಯದ ಅಧ್ಯಾಯ.

ದಾದಾಸಾಹೇಬ್ ಫಾಲ್ಕೆ ಗೌರವದಂತಹ ರಾಷ್ಟ್ರೀಯ ಮಟ್ಟದ ಸನ್ಮಾನ ಒಬ್ಬ ಕಲಾವಿದನ ದೀರ್ಘಕಾಲದ ಕಲಾಸೇವೆಯನ್ನು ಗುರುತಿಸುವ ಮಹತ್ವದ ಸಂದರ್ಭ. ಅನಂತನಾಗ್ ಅವರಂತಹ ಹಿರಿಯ ಕಲಾವಿದನ ಸಾಧನೆಯನ್ನು ಗೌರವಿಸುವುದು ಎಂದರೆ ಕೇವಲ ಒಬ್ಬ ನಟನಿಗೆ ಸನ್ಮಾನ ಸಲ್ಲಿಸುವುದಲ್ಲ; ಕನ್ನಡ ಚಿತ್ರರಂಗದ ಸುದೀರ್ಘ ಕಲಾ ಪರಂಪರೆಗೂ ಗೌರವ ಸಲ್ಲಿಸಿದಂತಾಗುತ್ತದೆ. ಕನ್ನಡದ ನೆಲದಲ್ಲಿ ಅರಳಿದ ಪ್ರತಿಭೆಯೊಂದು ರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಳ್ಳುವ ಕ್ಷಣ ಕನ್ನಡಿಗರ ಪಾಲಿಗೆ ಸಹಜವಾಗಿಯೇ ಹೆಮ್ಮೆಯ ಸಂಗತಿ. ಅನಂತನಾಗ್ ಅವರ ಅಭಿನಯದ ದೊಡ್ಡ ಶಕ್ತಿ ಅವರ ಸಹಜತೆ. ಪಾತ್ರಕ್ಕೆ ಅತಿಯಾದ ಅಲಂಕಾರವನ್ನು ನೀಡದೆ, ಅದರೊಳಗಿನ ಮನುಷ್ಯನನ್ನು ಪ್ರೇಕ್ಷಕರ ಮುಂದೆ ತಂದು ನಿಲ್ಲಿಸುವ ಕಲೆ ಅವರದು. ಕಣ್ಣುಗಳಲ್ಲಿನ ಭಾವನೆ, ಧ್ವನಿಯಲ್ಲಿನ ಏರಿಳಿತ, ಮುಖಭಾವದಲ್ಲಿನ ಸೂಕ್ಷ್ಮತೆ ಮತ್ತು ಕೆಲವೊಮ್ಮೆ ಮೌನದಲ್ಲಿಯೇ ಕಥೆಯನ್ನು ಹೇಳುವ ಸಾಮರ್ಥ್ಯ?ಇವೆಲ್ಲ ಅವರ ಅಭಿನಯವನ್ನು ವಿಶಿಷ್ಟವಾಗಿಸಿವೆ.

ನಾಯಕನ ಪಾತ್ರವಾಗಲಿ, ಕುಟುಂಬದ ಸದಸ್ಯನ ಪಾತ್ರವಾಗಲಿ, ಗಂಭೀರ ವ್ಯಕ್ತಿತ್ವವಾಗಲಿ ಅಥವಾ ಹಾಸ್ಯದ ಸನ್ನಿವೇಶವಾಗಲಿ; ಪಾತ್ರದ ಸ್ವಭಾವಕ್ಕೆ ತಕ್ಕಂತೆ ತಮ್ಮ ಅಭಿನಯದ ಲಯವನ್ನು ಬದಲಾಯಿಸಿಕೊಂಡಿದ್ದಾರೆ. ಒಂದೇ ರೀತಿಯ ಪಾತ್ರಗಳಿಗೆ ಸೀಮಿತವಾಗದೆ ವಿಭಿನ್ನ ಪಾತ್ರಗಳಿಗೆ ಜೀವ ತುಂಬಿರುವುದು ಅವರ ಕಲಾತ್ಮಕ ಪ್ರೌಢಿಮೆಯ ಸಂಕೇತ. ಅವರ ಪಾತ್ರಗಳಲ್ಲಿ ಸಾಮಾನ್ಯ ಮನುಷ್ಯನ ಬದುಕಿನ ಪ್ರತಿಬಿಂಬ ಕಾಣಿಸುವುದರಿಂದಲೇ ಪ್ರೇಕ್ಷಕರಿಗೆ ಅವು ಇನ್ನಷ್ಟು ಹತ್ತಿರವಾಗುತ್ತವೆ.

ಕನ್ನಡ ಸಿನಿಮಾಗಳ ಒಂದು ಕಾಲಘಟ್ಟದಲ್ಲಿ ಕುಟುಂಬ, ಸಂಬಂಧ, ಪ್ರೀತಿ, ನೋವು, ಕನಸು, ಸಂಘರ್ಷ ಮತ್ತು ಸಾಮಾಜಿಕ ಬದುಕಿನ ಸೂಕ್ಷ್ಮತೆಗಳಿಗೆ ಹೆಚ್ಚಿನ ಮಹತ್ವವಿತ್ತು. ಅಂತಹ ಕಥೆಗಳಿಗೆ ಅನಂತನಾಗ್ ಅವರ ಅಭಿನಯ ವಿಶೇಷ ಮೆರುಗು ನೀಡಿತು. ಅವರು ಪಾತ್ರವನ್ನು ಕೇವಲ ನಿರ್ವಹಿಸಲಿಲ್ಲ; ಅದರ ಭಾವನೆಗಳನ್ನು ಅರ್ಥಮಾಡಿಕೊಂಡು ಪ್ರೇಕ್ಷಕರ ಹೃದಯಕ್ಕೆ ತಲುಪಿಸುವ ಪ್ರಯತ್ನ ಮಾಡಿದರು.

ಕಾಲ ಬದಲಾಗಿದೆ. ಸಿನಿಮಾ ತಂತ್ರಜ್ಞಾನ ಬದಲಾಗಿದೆ. ಹೊಸ ತಲೆಮಾರಿನ ಕಲಾವಿದರು ಹೊಸ ಕಥನಶೈಲಿಗಳೊಂದಿಗೆ ಚಿತ್ರರಂಗಕ್ಕೆ ಬರುತ್ತಿದ್ದಾರೆ. ಆದರೆ ನೈಜ ಅಭಿನಯದ ಮೌಲ್ಯ ಎಂದಿಗೂ ಹಳೆಯದಾಗುವುದಿಲ್ಲ. ಅನಂತನಾಗ್ ಅವರ ಕಲಾ ಪಯಣ ಇಂದಿನ ಯುವ ಕಲಾವಿದರಿಗೆ ತಾಳ್ಮೆ, ಪರಿಶ್ರಮ ಮತ್ತು ಪಾತ್ರದ ಮೇಲಿನ ಪ್ರಾಮಾಣಿಕತೆಯ ಮಹತ್ವವನ್ನು ಸಾರುತ್ತದೆ.

ಒಬ್ಬ ಕಲಾವಿದನ ಶ್ರೇಷ್ಠತೆಯನ್ನು ಕೇವಲ ಪ್ರಶಸ್ತಿಗಳ ಸಂಖ್ಯೆಯಿಂದ ಅಳೆಯಲು ಸಾಧ್ಯವಿಲ್ಲ. ವರ್ಷಗಳು ಕಳೆದರೂ ಪ್ರೇಕ್ಷಕರ ಮನಸ್ಸಿನಲ್ಲಿ ಪಾತ್ರಗಳು ಜೀವಂತವಾಗಿದ್ದರೆ, ಅದೇ ನಿಜವಾದ ಕಲಾ ಸಾಧನೆ. ಅನಂತನಾಗ್ ಅವರ ಅನೇಕ ಪಾತ್ರಗಳು ಇಂದಿಗೂ ಜನರ ನೆನಪಿನಲ್ಲಿ ಉಳಿದಿರುವುದು ಅವರ ಅಭಿನಯದ ಆಳಕ್ಕೆ ಸಾಕ್ಷಿ.

ದಾದಾಸಾಹೇಬ್ ಫಾಲ್ಕೆ ಗೌರವದಂತಹ ಸನ್ಮಾನವು ಅವರ ಸುದೀರ್ಘ ಕಲಾ ಪಯಣವನ್ನು ಮತ್ತೊಮ್ಮೆ ನೆನಪಿಸುವ ಅವಕಾಶ. ಇದು ಕನ್ನಡದ ಕಲೆಗೆ, ಕನ್ನಡದ ಕಲಾವಿದರಿಗೆ ಮತ್ತು ನಮ್ಮ ಚಿತ್ರರಂಗದ ಶ್ರೀಮಂತ ಪರಂಪರೆಗೆ ಸಲ್ಲುವ ಗೌರವದ ಪ್ರತೀಕವಾಗಲಿ.

ಕಲಾವಿದನಿಗೆ ಸಿಗುವ ಪ್ರಶಸ್ತಿ ಒಂದು ಕ್ಷಣದ ಸಂಭ್ರಮವಾಗಬಹುದು; ಆದರೆ ಆತ ಜನರ ಮನಸ್ಸಿನಲ್ಲಿ ಬಿತ್ತಿದ ಪಾತ್ರಗಳು ಮತ್ತು ಭಾವನೆಗಳು ಮಾತ್ರ ಶಾಶ್ವತ. ಅನಂತನಾಗ್ ಅವರ ಕಲಾ ಪಯಣವೂ ಅಂತಹ ಅಚ್ಚಳಿಯದ ನೆನಪುಗಳ ಸಂಪತ್ತು. ಕನ್ನಡದ ಕಲಾತಿಲಕನಿಗೆ ಗೌರವದ ನಮನ; ಅವರ ಕಲಾ ವೈಭವಕ್ಕೆ ಕನ್ನಡಿಗರ ಹೃದಯಪೂರ್ವಕ ಅಭಿನಂದನೆ.

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,